ಶ್ರೀ ಎಂ. ರಾಮಪ್ಪ(ಹೊಸದುರ್ಗ).—ಇತರೇ ಖಾಸಗಿ ಕಾಲೇಜುಗಳಲ್ಲಿ ಏನು ವ್ಯವಹಾರ ನಡೆಯುತ್ತಿದೆ ಎಂಬುದನ್ನೂ ಪರಿಶೀಲಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಅಜೀಜ್‌ಸೇಟ್.—ಶ್ರೀ ರಾಮಪ್ಪನವರಿಗೆ ಅವರು 5 ಸಾವಿರಕ್ಕೆ ಸೀಟನ್ನು ಕೊಟ್ಟಿರಬೇಕು ಅದಕ್ಕಾಗೇ ಅವರು ಹೀಗೆ ಅದನ್ನು ಮುಚ್ಚಲು ಪ್ರಯತ್ನ ಮಾಡುತ್ತಿದ್ದಾರೆ.

Mr. SPEAKER.—What is this member doing ? what does he mean by that? The debate has begun and I have called upon the member. And still the member loudly prevents the business from being carried on. I did not take notice of it when somebody said something; I ignored it, but again another member says something. If I allow one member, everybody seems to think that he can get up and say something. This should not be done hereafter. Unless I call upon a particular member, no member has any right to get up and talk and that too on a matter which is not on the agenda. Please dont' do it.

BUDGET ESTIMATES FOR 1967-68—DEMANDS FOR GRANTS

(Demand No. 12, 13, 26 and 41 A)

(Debate continued)

†Sri H. C. LINGA REDDY (Malur)–Sir, while welcoming the demands placed by the Hon'ble Minister before this House, I would like to make a few observations.

2-30 P.M.

With regard to Jails, I would like to mention that it is very necessary that we should follow the principles of reformatory theory rather than the retributory theory so that the convicts in the Jail may be made more useful citizens. We have to remember that we are in a welfare State and not in a Police State. In consonance with the principles of a welfare State, it is necessary that we should reform our Jails and also reform our Police Department. Our Jails were constructed long ago and Jail reforms also were introduced long ago, and for a long time to come though many days have passed and the times have changed, we have not bestowed sufficient attention to Jail reforms. The way our Jails are working at present shows as though we want the convicts to be punished and thereby they become hardened criminals and there are not sufficient incentives for them to reform themselves. We should have sufficient industries in the Jails, in the district lock-ups, and not merely the industries—because we do not have enough cottage industries but we should introduce some agricultural programmes also. Now a days, our Jails and lockups are over-crowded and the few industries we have are confined only to the Central Jail and few other District Jails and not to the District Lockups and many other sub-jails. Wherever possible, it is necessa y, Sir, that we should introduce some agricultural and horticultural projects so that these prisoners, the convicts and the under-trial prisoners may be engaged in agricultural and horticultural

programmes and the income they derive should be added on to their family earnings, which will be a sort of incentive for them to become members of a earning family even when they are in the Jail, so much so when they come out they will come back with a few rupees of earning added on to their income. Many friends from the Opposition were saying yesterday that our Jails are very miserable and they are not fit for habitation, etc., etc. I think, these things can be overcome if the Government were to set up some committees, the Jail visitors. I think, we had that practice some time back and it has been given up of late. I do not know whether they have the Jail visitors for the Central Jail here. But in the Districts we had that system in vogue in those days and the Government was setting up these committees of Jail visitors consisting of members of the Legislative Assembly, certain other non-official members, municipal councillers, etc., so that these people may visit the jails and see the conditions of the prisoners, convicts and under-trial prisoners and give suggestions with regard to the improvement of the jails, with regard to the food that is prepared and other conditions prevalent in the Jail. If some of the hon'ble members from the Opposition were to be members of these committees, I think a lot of criticism could be avoided.

With regard to the Police, I think, even here, for a very very long time, we do not have any reforms at all. We have been having independence for such a long time. It is a welfare State that we are having, but we have not at all introduced any reforms. We often hear about Seminars and training programmes for various other personnel, but for the Police personnel we do not hear so much of any training at all, except the Police Training School. God knows what is taught there; some sort of training is given, but it is not important. We do not have a sort of general training with regard to the behaviour of the Police consistent with a welfare State.

(MR. DEPUTY SPEAKER in the Chair)

We see often officers deputed to foreign countries from the Agriculture Department, Co-operative Department and other Departments. But, in the Police Department we do not hear of any such programme at all. It is better that our Police officers also are deputed to foreign countries to study how the police are behaving in those democratic countries. Scotland training can be given to them. Our police mostly indulge in third-degree methods for want of training. They do not have the proper intelligent metrods to detect the crimes. The Police Dogs, I am afraid, are more intelligent than the Police officers, and that is because they do not have enough training. There are no training facilities and no scope is given for police officers. Therefore, it is very necessary that our Home Minister pays some attention for this training programme for the police officials and police officers. We have a people's Raj; we have independence. It is necessary that we should have People's Police and not the police of the Police Raj of the British days. Many friends were saying yesterday

that on account of the removal of Prohibition in the country, gradually after the introduction of the new policy that has been passed here, our Police officers have been very much disappointed. I would like to suggest that the police staff should be separate from the excise staff and the excise staff should be placed in charge of detection of the prohibition and excise crimes hereafter. If the Polic should come up there, the good old habits which they have cultivated over since prohibition was introduced in the State, such as encouraging illicit distillation and colluding with the drunkards, may not be prevented. Therefore, it is necessary that the Police staff should be prevented from the detection of prohibition and excise crimes, and the investigation of such crimes and prosecution should be entrusted to the excise staff. If that is done, to a very great extent, we can not only avoid illicit distillation, but also reduce the number of crimes and prevent the Police from continuing their collusion with the prohibition offenders.

With regard to the solution of unemployment problem Sir, many friends made many suggestions. Educated unemployment is on the increase in the country. It is becoming rampant. I suggest that it is better that the Government, now being a welfare State, introduces unemployment insurance scheme Sir. We have been harping upon social security scheme for a long time. Though we have been talking of unemployment insurance, we have not made a beginning at all. It is necessary that the unemployment insurance scheme is brought into force very early for the benefit of the unemployed. With regard to the unemployment of the labourers in the rural areas, even there the unemployment problem is very rampant. People go after peons jobs and they are migrating to the cities. There is very much pressure on land also. I would like to suggest that we should have the rural man power project introduced in as many places as possible wherever there is need to provide work to these labour unemployed people.

Lorry owners are having a lot of nuisance from the Police. The police are collecting a lot of mamools from the Drivers and Conductors of the lorries. To begin with they take away all the documents like driver's licence, the permit and all such things and they do not give back the documents at all. Next time when the same lorry is plying, the very same police ask the driver to show his documents pertaining to that lorry. The driver naturally cannot produce them because they are already with the police. The police will harass them for not producing the documents. When these things are brought to the notice of the higher authorities, they take long time to rectify the same. Sometimes such things will be ignored. But in the lower level there is a lot of nuisance and harassment caused to these drivers and conductors of the lorry owners. It is very necessary that these people should be prevented from these pin pricks of the police officials. With these few remarks I welcome the demands that have been placed before the House by the Hon'ble Minister for Home.

† ಶ್ರೀ ಶರಣಗೌಡ ಇನಾಮ್‌ದಾರ್ (ಜವರ್ಗಿ).—ಮಾನ್ಯ ಸಭಾಪತಿಗಳೇ, ಇವೊತ್ತಿನ ದಿವಸ ಜೈಲು, ಪೋಲೀಸು ಮತ್ತು ಕೂಲಿಗಾರರ ಸಮಸ್ಯೆಯ ಬಗ್ಗೆ ಮಂಡಿಸಿದಂತಹ ಬೇಡಿಕೆಯ ಮೇಲೆ ನಾನು ನನ್ನ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಸಾಮಾನ್ಯವಾಗಿ ಮೊಟ್ಟಮೊದಲು ನಾನು ಒಂದು ಸೂಚನೆಯನ್ನು ಮಾನ್ಯ ಮಂತ್ರಿಗಳಿಗೆ ಮಾಡಬೇಕೆಂದಿದ್ದೇನೆ. ಚುನಾವಣೆಗೆ ಮುಂಚೆ ಪೋಲೀಸ್ ಆಫೀಸರನ್ನು ನೇಮಿಸಲಾಗುತ್ತಿತ್ತು. ಚುನಾವಣೆ ಹತ್ತಿರ ಬಂದಾಗ ಮಾತ್ರ ಅವರನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎನ್ನುವಂತಹ ಒಂದು ಸರ್ಕಾರದ ನಿಯಮವನ್ನು ಈಗ ಮಾಡುತ್ತಿದ್ದಾರೆ. ಅದರ ಕಡೆ ಮಾನ್ಯ ಮಂತ್ರಿಗಳು ಗಮನಕೊಡಬೇಕು. ಇಲ್ಲದಿದ್ದರೆ ಅನ್ಯಾಯ ವಾಗುತ್ತದೆ. ಮೊನ್ನೆ ಮಹಾ ಚುನಾವಣೆ ನಡೆದಾಗ ಎಷ್ಟೋ ಜನ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರುಗಳನ್ನು ಚುನಾವಣೆಯ ಮಧ್ಯದಲ್ಲಿ ಆ ಕಡೆಯಿಂದ ಈ ಕಡೆ, ಈ ಕಡೆಯಿಂದ ಆ ಕಡೆ ಕೆಲವು ಬದಲಾವಣೆಗಳನ್ನು ಕೆಲವರ ಒತ್ತಾಯದ ಮೂಲಕ ಮಾಡಿದ್ದಾರೆ. ಅದೆಲ್ಲವೂ ಸಾಕಷ್ಟು ರೆಕಾರ್ಡಿನಲ್ಲಿ ಸಿಕ್ಕುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ, ಗುಲ್ಬರ್ಗ ಡಿಸ್ಟ್ರಿಕ್ಟಿನಲ್ಲಿರುವ ಷಹಾಪುರ ಉಪ ಚುನಾವಣೆ ನಡೆದಾಗ ಸ್ಥಳೀಯ ಸಬ್ ಇನ್ಸ್‌ಪೆಕ್ಟರ್ ಒಬ್ಬರನ್ನು ಗುಲ್ಬರ್ಗದಿಂದ ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿದರು. ಆಮೇಲೆ ಷಹಾಪುರ ಪ್ರಾಪರ್ ಸಿಟಿ ಪೋಲೀಸ್ ಸ್ಟೇಷನ್ನಿನಿಂದ ಒಬ್ಬರು ಪೋಲೀಸ್ ಇನ್ಸ್‌ಪೆಕ್ಟರನ್ನು ವರ್ಗಾಯಿಸಿದರು. ಈ ಪ್ರಕಾರ ಷಹಾಪುರದ ಉಪ-ಚುನಾವಣೆಯು ನಡೆಯುವ ಕಾಲದಲ್ಲಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರನ್ನು ತಮಗೆ ಬೇಕಾದವರನ್ನು ವರ್ಗಾಯಿಸಿ ಕೊಂಡರು, ಬೇಡವಾದವರನ್ನು ಬೇರೆ ಕಡೆ ಕಳುಹಿಸಿದರು. ಆಡಳಿತ ಪಕ್ಷದವರಿಗೆ ಅನುಕೂಲವಾಗದಿದ್ದರೆ, ಅವರು ಹೇಳಿದ ಹಾಗೆ ಕೇಳದಿದ್ದರೆ, ಕಾನೂನು ಪ್ರಕಾರ ಪೋಲೀಸು ಅಧಿಕಾರಿಗಳು ನಡೆದುಕೊಂಡರೆ ಆ ಪ್ರಕಾರ ವರ್ಗಾವಣೆ ಮಾಡುತ್ತಾರೆ. ತಮಗೆ ಬೇಕಾದವರನ್ನು ವರ್ಗಾಯಿಸಿಕೊಳ್ಳುತ್ತಾರೆ. ಈ ಪ್ರಕಾರ ಮಾಡು ವುದರಿಂದ ನಿಸ್ಪೃಹರಾದ ಪೋಲೀಸ್ ಅಧಿಕಾರಿಗಳಿಗೆ ಅನ್ಯಾಯವಾಗುತ್ತದೆ. ಇಂಥಾ ಅನ್ಯಾಯ ಗಳು ಜನತಾ ಸರ್ಕಾರದಲ್ಲಿ ಆಗಬಾರದು. ಇನ್ನು ಮುಂದೆ ಈ ಪ್ರಕಾರ ಆಗದಂತೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಎರಡನೆಯದಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳು ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳ ಜಾಗದಲ್ಲಿ ಗ್ಯಾಂಬ್ಲಿಂಗಿಗೆ ಸ್ವಲ್ಪ ಪ್ರೋತ್ಸಾಹ ಕೊಡುತ್ತಿದ್ದಾರೆ. ಐ. ಜಿ. ಪಿ. ಮತ್ತು ಡಿ. ಐ. ಜಿ. ಆಕಡೆ ಬಂದಾಗ ಅವರ ಗಮನಕ್ಕೆ ತಂದರೆ 15 ದಿವಸ ಅಥವಾ ಒಂದು ತಿಂಗಳು ಮಾತ್ರ ಅದನ್ನು ತಡೆಯುತ್ತಾರೆ. ಪುನಃ ಯಥಾ ಪ್ರಕಾರ ನಡೆಯುತ್ತದೆ. ಡಿಸ್ಟ್ರಿಕ್ಟ್ ಸ್ಥಳಗಳಲ್ಲಿ ಸೂಳೆಯರ ಮನೆಗಳು ಏನಿವೆಯೋ ಅವುಗಳನ್ನು ತೊಡೆದುಹಾಕುವುದಕ್ಕೆ ಸಾಧ್ಯವಾಗಲಿಲ್ಲ. ಸರ್ಕಾರದಲ್ಲಿ ಅದನ್ನು ತಡೆಗಟ್ಟುವುದಕ್ಕೆ ಕಾನೂನು ಇದೆ. ಪೋಲೀಸಿನವರು ಸಹಾಯ ಮಾಡುತ್ತಾರೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡು ವೇಶ್ಯಾವೃತ್ತಿಯನ್ನು ತಡೆಗಟ್ಟಬೇಕು. ಇದು ಬಹಳ ಕೆಟ್ಟ ವಿಚಾರ. ಇದನ್ನು ತಡೆಯುವುದಕ್ಕೆ ಪೋಲೀಸಿನವರಿಂದ ಸಾಧ್ಯಇದೆ. ಗುಲ್ಬರ್ಗದಲ್ಲಿ ಈ ಒಂದು ವೇಶ್ಯಾವೃತ್ತಿ ನಡೆಯುತ್ತಿರುವುದನ್ನು ನಾವು ನೋಡಿದ್ದೇವೆ. ಪಟ್ಟಣ ಗಳಲ್ಲಿ ಮೇನ್ ರೋಡುಗಳಲ್ಲಿ ಒಳ್ಳೆಯವರು ಯಾರು, ಸೂಳೆಯರು ಯಾರು ಎಂಬುದನ್ನು ಸ್ವಲ್ಪ ಕಂಡುಹಿಡಿಯುವುದಕ್ಕೆ ಕಷ್ಟವಾಗುತ್ತದೆ. ಕೆಲವು ಮನೆಗಳಲ್ಲಿ ಹೋಟೇಲು ಬಿಜಿನೆಸ್ಸಿನ ಹಾಗೆ ಈ ವೇಶ್ಯಾವೃತ್ತಿ ನಡೆಯುತ್ತಿದೆ. ಇದರ ಬಗ್ಗೆ ಯಾವುದಾದರೂ ಒಂದು ಕ್ರಮವನ್ನು ತೆಗೆದು ಕೊಂಡರೆ ಈ ರೋಗವನ್ನು ನಿವಾರಣೆ ಮಾಡಬಹುದು. ಅದರ ಸಲುವಾಗಿ ಮಂತ್ರಿಗಳು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಫುಡ್ ಕಂಟ್ರೋಲ್ ಬಂದಾಗಿನಿಂದ ಪೋಲೀಸಿನವರು ಅನೇಕ ರೀತಿಯಿಂದ ಪ್ರಯೋಜನ ವನ್ನು ಪಡೆಯುತ್ತಿದ್ದಾರೆ ಎಂದು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಬೀದರ್, ಗುಲ್ಬರ್ಗ ಮತ್ತು ಬೆಳಗಾಮ್ ಡಿಸ್ಟ್ರಿಕ್ಟ್‌ಗಳಲ್ಲಿ ಪೋಲೀಸಿನವರನ್ನು ನೇಮಕಮಾಡಬೇಕಾದರೆ ಲೋಕಲ್ ಆಫೀಸರು ಇರಬಾರದು, ಅದೇ ಡಿಸ್ಟ್ರಿಕ್ಟಿನವರು ಇರಬಾರದು. ಅವರು ಇರುವುದರಿಂದ ಅನ್ಯಾಯ ಮಾಡುತ್ತಾರೆ. ಅಷ್ಟೇ ಅಲ್ಲ. ಆಹಾರವನ್ನು ಸ್ಮಗ್ಲಿಂಗ್ ಮಾಡುವುದಕ್ಕೆ ಸಹಾಯ ಮಾಡುತ್ತಾರೆ. ಅಲಂದ್‌ನಿಂದ ಮಾಲು ಹೊರಗೆ ಹೋಗುತ್ತದೆ. ಅಲಂದ್ ಮತ್ತು ಅಫ್ಜಲ್‌ಪುರದಲ್ಲಿ ಪೋಲೀಸಿ ನವರು ಆಹಾರದ ಕಳ್ಳಸಾಗಾಣಿಕೆಗೆ ಸಹಾಯ ಮಾಡುತ್ತಿದ್ದಾರೆ. ನಿಜವಾಗಿಯೂ ಅದಷ್ಟು ಜಾಗ್ರತೆ ಈ ಆಹಾರದ ಕಳ್ಳಸಾಗಾಣಿಕೆಯನ್ನು ಬಂದ್ ಮಾಡಬೇಕು. ಅದೇ ಸ್ಥಳದ ಪೋಲೀಸಿ ನವರನ್ನು ಇಡಕೂಡದು. ಹೊರಗಡೆಯವರನ್ನು ತಂದುಹಾಕಿದರೆ ಯೋಗ್ಯವಾಗುತ್ತದೆಂದು ಅನಿಸು ತ್ತದೆ. ಕಳ್ಳಸಾಗಾಣಿಕೆಯನ್ನು ಮಾಡುವುದರಿಂದ ಪೋಲೀಸಿನವರು ಲಂಚವನ್ನು ತೆಗೆದುಕೊಳ್ಳು ವುದಕ್ಕೆ ಅವಕಾಶವಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುತ್ತೇನೆ. ಆಯಾ

(ಶ್ರೀ ಶರಣಗೌಡ ಇನಾಮದಾರ್)

ಸ್ಥಳದವರೇ ಪೋಲೀಸಿನವರು ಇರುವುದರಿಂದ ಕಳ್ಳಸಾಗಾಣಿಕೆ ಮಾಡತಕ್ಕ ಆಹಾರ ಧಾನ್ಯಗಳ ಲಾರಿಗಳನ್ನು ಹಿಡಿಯುತ್ತಾರೆ, ಆದರೆ ನಾಳೆ ಕೇಸ್ ರಿಜಿಸ್ಟರ್ ಮಾಡುವುದಿಲ್ಲ. ಇಂಥಾ ಉದಾಹರಣೆ ನಮ್ಮ ಮುಂದೆ ಇವೆ. ಏತಕ್ಕೆಂದರೆ ಪೋಲೀಸಿನವರ ನೆಂಟರಿಷ್ಟರು ಇರುತ್ತಾರೆ. ಅವರಿಂದ ಪೋಲೀಸಿನವರಿಗೆ ಒತ್ತಾಯ ತಂದು ಲಾರಿಗಳನ್ನು ಬಿಡಿಸಿಕೊಂಡು ಹೋಗುತ್ತಾರೆ. ಇದರಿಂದ ಕಳ್ಳಸಾಗಾಣಿಕೆಗೆ ಆಸ್ಪದವಾಗುತ್ತದೆ. ಆದ್ದರಿಂದ ಅಂಥಾ ಕಡೆ ಆಯಾಯ ಸ್ಥಳೀಯ ಪೋಲೀಸ್ ಆಫೀಸರುಗಳು ಏನಿದ್ದಾರೆಯೋ ಅವರನ್ನು ಬೇರೆ ಕಡೆಗೆ ವರ್ಗಾಯಿಸಬೇಕು. ಆಹಾರ ಮಂತ್ರಿಗಳು ಬಂದಾಗ್ಗೆ ಇದನ್ನು ವಿಚಾರ ಮಾಡಿದ್ದು ಆಯಿತು. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಅನೇಕ ಪೋಲೀಸ್ ಅಧಿಕಾರಿಗಳು ಅವೇ ಸ್ಥಳದವರು ಆಗಿದ್ದಾರೆ. ಆದುದರಿಂದ ತೀವ್ರ ಅವರನ್ನು ಬೇರೆ ಕಡೆ ವರ್ಗಾಯಿಸಬೇಕು ಎಂದು ಸೂಚನೆ ಮಾಡುತ್ತೇನೆ.

ಇನ್ನೊಂದು ಮಾತನ್ನು ನಾವು ಕೇಳುತ್ತಲೇ ಇದ್ದೇವೆ. ಇದು ಹಳೇ ಮಾತು. ಪೋಲೀಸರು ತೆಗೆದುಕೊಳ್ಳುವ ಮಾಮೂಲು ಸಾಮಾನ್ಯವಾಗಿ ಐ.ಪಿ.ಎಸ್. ಆಫೀಸರರು ಬಂದಮೇಲೆ ಕಡಿಮೆಯಾಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅದು ಕಡಿಮೆಯಾಗಿಲ್ಲ. ಹಳೇ ಆಫೀಸರುಗಳು ಎಸ್.ಪಿ., ಡಿ.ಎಸ್.ಪಿ., ಇನ್‌ಸ್ಪೆಕ್ಟರ್ ಆದಮೇಲೆ ಕೂಡ ಇನ್ನೂರು ಐದುನೂರು ತೆಗೆದುಕೊಂಡು ತಾವು ಕೆಳದರ್ಜೆಯಲ್ಲಿದ್ದಾಗ ಮಾಡಿದ ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಅವರ ಬಗ್ಗೆ ದೂರು ಮಾಡಿದರೂ ಕೂಡ ಮೇಲಿನ ಅಧಿಕಾರಿಗಳು ಅವರನ್ನು ರಕ್ಷಣೆ ಮಾಡುವುದು ಕಂಡುಬಂದಿದೆ. ಐ.ಪಿ.ಎಸ್. ಅಧಿಕಾರಿಗಳಿಗೆ ಸಹ ಅದೇ ಪ್ರಕಾರ ಈ ಮಾಮೂಲು ತೆಗೆದುಕೊಳ್ಳುವ ಚಟ ಹತ್ತಿದೆ, ಅದರ ರುಚಿ ಹತ್ತಿದೆ. ಅವರೂ ಸಹ ಮಾಮೂಲು ಕೇಳುತ್ತಾರೆ. ಆದುದರಿಂದ ಇದನ್ನು ತಡೆಯುವುದಕ್ಕೆ ತೀವ್ರ ಏನಾದರೂ ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಆಲೋಚನೆ ಮಾಡಬೇಕೆಂದು ನನ್ನ ಸೂಚನೆ.

ಈಗ ಸಬ್ ಇನ್‌ಸ್ಪೆಕ್ಟರ್ ಮೇಲೆ ಕರಪ್ಷನ್ ಅಪಾದನೆ ಕೇಸು ಹಾಕುತ್ತಾರೆ. ಅವನನ್ನು ಸಸ್ಪೆಂಡ್‌ಮಾಡುತ್ತಾರೆ. ಇಂಥ ಕೇಸನ್ನು ಇನ್‌ಕ್ವಾಯರಿ ಮಾಡುತ್ತಿದ್ದಾರೆ. ಆರು ತಿಂಗಳು ಮುಗಿಯುವುದರೊಳಗೆ ಯೋಗ್ಯ ಶಿಕ್ಷೆ ಕೊಡಬೇಕು. ಆದರೆ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಂಥ ಕೇಸು ಪೇಪರ್ಸ್ ಮುಂದೆ ಹೋಗುವುದಿಲ್ಲ. ಅಲ್ಲದೆ ಇನ್‌ಕ್ವಾಯರಿ ಆಫೀಸರ್ ನೇಮಕವಾಗುವುದಿಲ್ಲ. ಇದಕ್ಕೆ ಟೈಂ ಎಕ್ಸ್‌ಟೆಂಡ್ ಮಾಡುತ್ತಾರೆ. ಸಸ್ಪೆಂಡ್ ಆದ ಕೇಸು ಪರಿಶೀಲನೆ ಮಾಡುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಎರಡು ವರ್ಷಗಳವರೆಗೆ ಇಂಥ ಕೇಸು ನಿರ್ಣಯವಾಗುವುದಿಲ್ಲ. ಇದಲ್ಲದೆ ಇನ್‌ಕ್ವಾಯರಿ ಪೂರ್ತಿ ಆಗುವುದಿಲ್ಲ. ಈ ಪ್ರಕಾರ ಇರುವುದರಿಂದ ಪುನಃ ಅಂಥವನು ಯಾವುದಾದರೂ ಒಂದು ಪ್ರೆಶರ್ ತಂದು ಆರ್ಡರ್ ರಿವೋಕ್ ಮಾಡಿಸುತ್ತಾನೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಇಂಥ ಕೇಸು ಆರು ತಿಂಗಳೊಳಗೆ ತೀರ್ಮಾನವಾಗಬೇಕು. ಆರು ತಿಂಗಳ ಲಿಮಿಟ್‌ನಲ್ಲಿ ಕೇಸು ತೀರ್ಮಾನವಾಗದೇ ಇರುವುದರಿಂದ ಅನೇಕ ದೋಷಗಳು ಸಮಾಜದಲ್ಲಿ ಉಂಟಾಗುತ್ತವೆ. ಆದುದರಿಂದ ಇದಕ್ಕೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ನನ್ನ ಸೂಚನೆ.

ಇನ್ನೊಂದು ವಿಷಯ ದೊಡ್ಡ ಪ್ರಮಾಣದಲ್ಲಿ ಇನ್‌ಕ್ವಾಯರಿಯಾಗಬೇಕಾಗಿದೆ. ಪೋಲೀಸ್ ಆಫೀಸರರು ಮನೆಗಳನ್ನು ಕಟ್ಟಿ ಪ್ರಾಪರ್ಟಿ ಹೆಚ್ಚು ಮಾಡಿಕೊಂಡ ಬಗ್ಗೆ ಇದುವರೆಗೆ ಯೋಗ್ಯ ಇನ್‌ಕ್ವಾಯರಿಯಾಗಿಲ್ಲ. ಕಾನೂನು ಪ್ರಕಾರ ಲಂಚ ರುಷುವತ್ತು ತೆಗೆದುಕೊಂಡು ಆಸ್ತಿ ಮಾಡಿಕೊಂಡರೆ, ಸ್ವಲ್ಪ ಅವಧಿಯಲ್ಲಿ ಇಷ್ಟು ದೊಡ್ಡ ಆಸ್ತಿ ಹೇಗೆ ಆಯಿತು ಎಂಬುದನ್ನು ಎನ್‌ಕ್ವಾಯರಿ ಮಾಡುವುದಕ್ಕೆ ಸರಕಾರ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎಂದಿದೆ. ಆದರೆ ಇದುವರೆಗೆ ಯಾವ ರೀತಿ ಕ್ರಮ ತೆಗೆದುಕೊಂಡಿಲ್ಲ. ಆಸ್ತಿಯ ಬಗ್ಗೆ ಸರಕಾರಿ ಅಧಿಕಾರಿಗಳು ಒಂದು ಡಿಕ್ಲರೇಷನ್ ಮಾಡಬೇಕಾಗುತ್ತದೆ. ಎಷ್ಟು ಜನ ಆಫೀಸರುಗಳು ಇದನ್ನು ಕೊಟ್ಟಿದ್ದಾರೆ ? ಫುಡ್‌ಸೆಲ್ ಎಂದು ಮಾಡಿದ್ದೀರಿ. ಅದೇ ಪ್ರಕಾರ ಎಷ್ಟು ಆಸ್ತಿ ಇದೆ, ಪ್ರಾಪರ್ಟಿ ಹೆಚ್ಚು ಮಾಡಿಕೊಂಡಿದ್ದಾರೆಯೋ ಎಂಬುದನ್ನು ಎನ್‌ಕ್ವಾಯರಿ ಮಾಡತಕ್ಕಂಥ ಒಂದು ಸೆಲ್ ಮಾಡಬೇಕೆಂದು ಸೂಚಿಸುತ್ತೇನೆ. ಯೋಗ್ಯ ರೀತಿಯಲ್ಲಿ ಇದನ್ನು ಅಮಲಿನಲ್ಲಿ ತರಬೇಕು ಎಂದು ಒಂದು ಸೆಲ್ ಮಾಡುವುದಕ್ಕೆ ವಿಚಾರ ಮಾಡಬೇಕು. ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್ ಅವರು ದೊಡ್ಡ ದೊಡ್ಡ ಬಂಗಲೆಗಳನ್ನು ಥಿಯೇಟರುಗಳನ್ನು ಕಟ್ಟಿಸಿಕೊಂಡಿರತಕ್ಕಂಥಾದ್ದು ಕಂಡುಬಂದಿದೆ. ಅವರ ಪಗಾರ ತಿಂಗಳಿಗೆ 200 ರೂಪಾಯಿ ಇರುವಾಗ ಐವತ್ತು ಸಾವಿರ ರೂಪಾಯಿ ಬಿಲ್ಡಿಂಗ್ ಹೇಗೆ ಮಾಡಿಕೊಳ್ಳುತ್ತಾರೆ ? ಅದನ್ನು ತಾಲ್ಲೂಕ ಹೆಡ್‌ಕ್ವಾರ್ಟರ್ಸ್‌ನಲ್ಲಿ ಕಟ್ಟಿಸುತ್ತಾರೆ. ಅವರಿಗೆ ಹೊಲ ಮನೆ ಏನೂ ಇರುವುದಿಲ್ಲ.

ಹಾಗಾದರೆ ಈ ದುಡ್ಡು ಎಲ್ಲಿಂದ ಬರುತ್ತದೆ? ಇಂದು ಅಧಿಕಾರಿಗಳಲ್ಲಿ ಕರಪ್ಷನ್ ಹೆಚ್ಚುತ್ತಿದೆ. ಅವರ ಆಸ್ತಿಪಾಸ್ತಿ ಹೆಚ್ಚು ಆಗುತ್ತಿದೆ. ಆದುದರಿಂದ ಇದನ್ನು ಯೋಗ್ಯ ರೀತಿಯಿಂದ ತಡೆಗಟ್ಟುವುದಕ್ಕೆ ಒಂದು ಸೆಲ್ ಮಾಡಬೇಕು. ಇದನ್ನು ನೋಡಿಕೊಳ್ಳದೇ ಇರುವುದರಿಂದ ಅವರ ಆಸ್ತಿ ಹೆಚ್ಚಾಗುತ್ತಿದೆ.

ಇನ್ನು ಜೈಲು ವಿಚಾರ ಸ್ವಲ್ಪ ಮಾತು ಹೇಳುತ್ತೇನೆ. ಶಿಕ್ಷೆ ಹೊಂದಿದ ಖೈದಿಗಳನ್ನು ಅವರ ಡಿಸ್ಟ್ರಿಕ್ಟಿನ ಸಮೀಪದಲ್ಲಿರುವ ಜೈಲಿನಲ್ಲಿ ಇಡಬೇಕು. ಶಿಕ್ಷೆ ಹೊಂದಿದ ಬೆಳಗಾಂದವರನ್ನು ಗುಲಬರ್ಗದಲ್ಲಿ ಇಡುವುದು, ಗುಲಬರ್ಗದವರನ್ನು ಬೆಳಗಾಂ ಜೈಲಿನಲ್ಲಿ ಇಡುವುದು, ಬಳ್ಳಾರಿ ಜೈಲಿನಲ್ಲಿ ತಂದು ಇಡುವುದು ಮಾಡಿದರೆ ಅವರ ಬಂಧುಗಳಿಗೆ ಭೇಟಿಯಾಗುವುದಕ್ಕೆ ಅಷ್ಟು ದೂರ ಬರುವುದಕ್ಕೆ ಬಹಳ ಹಣ ವೆಚ್ಚ ಮಾಡಬೇಕಾಗುತ್ತದೆ. ಇದನ್ನು ತಡೆಯುವುದಕ್ಕೆ ಅಂಥ ಖೈದಿಗಳನ್ನು ಸಮೀಪದಲ್ಲಿರತಕ್ಕಂಥ ಜೈಲಿನಲ್ಲಿ ಇಡಬೇಕು ಎಂದು ಸೂಚಿಸುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಆಹಾರ ಸಮಸ್ಯೆ ಬಹಳ ಕೆಳಮಟ್ಟಕ್ಕೆ ಹೋಗಿದೆ. ಆಹಾರ ಧಾನ್ಯ ಸಪ್ಲೈ ಮಾಡತಕ್ಕಂಥವರಿಗೆ ಆಫೀಸರರ ಸಂಬಂಧ ಇರುವುದರಿಂದ ಆಹಾರ ಧಾನ್ಯ ಹಂಚಿಕೆಯಲ್ಲಿ ಅಲಕ್ಷ್ಯ ಆಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಯೋಗ್ಯರೀತಿ ವಿಚಾರ ಮಾಡಬೇಕು.

ಕೊನೆಯದಾಗಿ ಒಂದು ಮಾತು ಲೇಬರ್ ವಿಷಯ ಹೇಳುತ್ತೇನೆ. ಹೋಂ ಅಂಡ್ ಲೇಬರ್ ಒಬ್ಬ ಮಂತ್ರಿಯ ಕಡೆ ಇರುವುದರಿಂದ ಸಾಮಾನ್ಯವಾಗಿ ಲೇಬರರ್ಸ್ ಜನರ ಹಿತರಕ್ಷಣೆ ಆಗುವುದಿಲ್ಲ ಎಂಬ ಊಹೆ ಬಂದಿದೆ. ಮಾನ್ಯ ಮಂತ್ರಿಗಳು ಎಷ್ಟರಮಟ್ಟಿಗೆ ಯೋಗ್ಯ ರೀತಿಯಿಂದ ನಡೆಕೊಂಡು ಹೋಗಿದ್ದಾರೆ ಎಂಬುದನ್ನು ಅನೇಕ ಮಿತ್ರರು ಹೇಳಿದ್ದಾರೆ. ಒಂದು ಮಾತು ನಾನು ಹೇಳುತ್ತೇನೆ. ಅದೇನೆಂದರೆ, ಗುಲಬುರ್ಗ ಎಂ.ಎಸ್. ಕೆ. ಮಿಲ್ಸ್ ಕ್ಲೋಜರ್ ಆಗಿರುವುದರಿಂದ 3,000ಕ್ಕೆ ಮೇಲ್ಪಟ್ಟ ಲೇಬರರ್ಸ್ ಇವತ್ತಿನ ದಿವಸ ಕೆಲಸವಿಲ್ಲದೆ ಬಳಲುತ್ತಿದ್ದಾರೆ. ಇದನ್ನು ಚೀಫ್ ಮಿನಿಸ್ಟರ್ ಗಮನಕ್ಕೆ ತಂದಿದ್ದೇವೆ. ಇದನ್ನು ಎಷ್ಟೋ ಸಲ ಹೇಳಿದ್ದೇವೆ. ಈ ಬಗ್ಗೆ ಶಾರ್ಟ್ ನೋಟೀಸ್ ಕೊಶ್ಚನ್ ಕೂಡ ಕೊಟ್ಟಿದ್ದೆ. ಕಾಲ್ ಅಟೆನ್ಷನ್ ನೋಟೀಸ್ ಕೂಡ ಕೊಟ್ಟಿದೆ. ಆದರೆ ಅದಕ್ಕೆ ಜವಾಬು ಬಂದಿಲ್ಲ. ಈಗ ಪುನಃ ಲೇಬರ್ ಮಿನಿಸ್ಟರ್ ಅವರ ಗಮನಕ್ಕೆ ತರುತ್ತೇನೆ. ಈ ಗಿರಣಿ ಬಂದ್ ಮಾಡುವುದರಿಂದ 3,000 ಜನ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆ. ಅವರ ಜೀವನ ಕಷ್ಟವಾಗಿದೆ. ಅವರ ಆಹಾರ ಸಮಸ್ಯೆ ಕಠಿಣವಾಗಿದೆ. 3,000 ಕೆಲಸಗಾರರು ಅಂದರೆ ಒಂದೊಂದು ಮನೆಯಲ್ಲಿ ಮೂರು ನಾಲ್ಕು ಜನರು ಎಂದು ಹಿಡಿದರೂ ಕೂಡ 12,000 ರಿಂದ 15,000 ಜನರವರೆಗೆ ಜೀವನ ಮಾಡುವುದು ಕಷ್ಟವಾಗಿದೆ. ಗುಲಬರ್ಗದಲ್ಲಿ ಮತ್ತೊಂದು ಕೈಗಾರಿಕೆ, ಇಲ್ಲ. ಇದು ಇರುವುದು ಒಂದೇ ಕೈಗಾರಿಕೆ. 16 ಟೆಕ್ಸಟೈಲ್ ಕೈಗಾರಿಕೆಗಳನ್ನು ಮಾಡಬೇಕೆಂದು ಇದ್ದರೂ ಕೂಡ ನಮ್ಮ ಭಾಗದಲ್ಲಿ ಒಂದೇ ಒಂದು ಟೆಕ್ಸಟೈಲ್ ಇಂಡಸ್ಟ್ರೀ ಇದೆ. ಇದನ್ನು ಸಹ ಮುಚ್ಚಬೇಕೆಂದು ಅನೌನ್ಸ್ ಮಾಡಿ ಮುಚ್ಚಿಬಿಟ್ಟಿದ್ದಾರೆ. ಈ ಮಿಲ್ಲಿನ ಲೇಬರರ್ಸ್ ಬಗ್ಗೆ ಯೋಗ್ಯ ರೀತಿ ಗಮನ ಕೊಟ್ಟಿಲ್ಲ. ಇದಕ್ಕೆ ಯೋಗ್ಯರೀತಿಯ ಗಮನ ಕೊಟ್ಟು ಪುನಃ ಈ ಮಿಲ್ ಓಪನ್ ಮಾಡಿ ಕೆಲಸಗಾರರಿಗೆ ಕೆಲಸ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಕೆ. ಪ್ರಭಾಕರ್ (ವರತೂರು).—ಮಾನ್ಯ ಅಧ್ಯಕ್ಷರೇ, ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂಥ ಡಿಮ್ಯಾಂಡನ್ನು ಅನುಮೋದಿಸುತ್ತಾ ಅದರ ಆಡಳಿತದ ವಿಚಾರದಲ್ಲಿ ಕೆಲವು ಸಲಹೆಗಳನ್ನು ತಿಳಿಸಲು ಬಯಸುತ್ತೇನೆ. ಈಗ ಪೋಲೀಸ್ ರಾಜ್ಯ ಹೋಗಿ ವೆಲ್‌ಫೇರ್ ಸ್ಟೇಟ್ ಆಗಿದೆ ಎಂದು ಹೇಳಿದರೆ ಕಲ್ಯಾಣಮಯ ರಾಜ್ಯ ಸ್ಥಾಪಿಸುವುದಕ್ಕೆ ಅದನ್ನು ರೂಪಿಸಬೇಕೆಂಬ ಹಂತದ ಕಡೆ ಬರುತ್ತಾ ಇದ್ದೇವೆ. ಈಗ ಎಲ್ಲರ ಕಣ್ಣು ಕೂಡ ಹೆಚ್ಚಾಗಿ ಪೋಲೀಸ್‌ಖಾತೆ ಕಡೆ ಬೀಳುತ್ತಿದೆ. ಇದಕ್ಕೆ ಕಾರಣ ಅನೇಕ ಇವೆ. ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟ ಅನುಕೂಲಗಳನ್ನು ಸೌಕರ್ಯಗಳನ್ನು ಸರಕಾರ ದೊರಕಿಸಿಕೊಡಬೇಕು ಎಂಬ ನಿರೀಕ್ಷಣೆ ಹೆಚ್ಚೆಚ್ಚು ಸಫಲ ಮಾಡದೇ ಇರುವಾಗ ಒಂದಿಲ್ಲೊಂದು ರೀತಿ ಅಸಮಾಧಾನ ಉಂಟಾಗುತ್ತದೆ. ಈ ರೀತಿ ಅಸಮಾಧಾನ ಉಂಟಾದಾಗ್ಗೆ ಬಹುಮಟ್ಟಿಗೆ ಒಂದಲ್ಲೊಂದು ರೀತಿಯಲ್ಲಿ ತೊಡಕು ಬರುವುದರಿಂದ ಪೋಲೀಸರಿಗೂ ನಾಗರಿಕರಿಗೂ ಸಂಬಂಧ ಇರುವುದರಿಂದ ಎಲ್ಲಾ ತಪ್ಪು ಪೋಲೀಸರೇ ಮಾಡಿಬಿಡುತ್ತಾರೆ ಎಂದು ಮನಸ್ಸಿಗೆ ಪ್ರೇರೇಪಣೆಯಾಗುತ್ತದೆ.

3.00 P.M.

ಈಗ ಪೋಲೀಸ್ ರಾಜ್ಯ ಬೇಡವೆಂದಲ್ಲ, ಅಥವಾ ಅದು ಹೋಗಿದೆ ಎಂದೂ ಅಲ್ಲ. ಪೋಲೀಸ್ ಮನೋಧರ್ಮ ಏನಿದೆ ಅದು ಬಹುಮಟ್ಟಿಗೆ ಜನಜೀವನವನ್ನು ಸುಗಮಮಾಡುವ ಮಟ್ಟಕ್ಕೆ ಪರಿವರ್ತನೆಯಾಗಬೇಕು ಎನ್ನುವ ನಿರೀಕ್ಷಣೆ ಎಷ್ಟರಮಟ್ಟಿಗೆ ಸಫಲವಾಗುತ್ತಿದೆ ಎನ್ನುವುದನ್ನು

(ಶ್ರೀ ಕೆ. ಪ್ರಭಾಕರ್)

ನೋಡಿದರೆ ಇದಕ್ಕೆ ಸಾರ್ವಜನಿಕರ ಸಹಕಾರ ಬೇಕಾಗುತ್ತದೆ. ನಾವು ಎಲ್ಲ ಸಹಕಾರವನ್ನೂ ಕೊಡದೆ ಪೋಲೀಸ್ ರಾಜ್ಯ, ಕಲ್ಯಾಣ ರಾಜ್ಯವಾಗಿ, ಕಲ್ಯಾಣ ಸಮಾಜವಾಗಿ ಪರಿಣಮಿಸಬೇಕು ಎಂದು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಉದಾಹರಣೆಗೆ ಒಂದು ಕಡೆ ಒಂದು ತಕ್ಸೀರು, ಖೂನಿ ಅಥವಾ ಕಳ್ಳತನ ನಡೆದಾಗ ಅದರ ಹಿನ್ನೆಲೆ ಪ್ರಬಲವಾಗಿರುತ್ತದೆ. ಪೋಲೀಸ್ ಇಲಾಖೆಯವರು ಎಷ್ಟೋ ಕಷ್ಟಪಟ್ಟು ಪ್ರಾಮಾಣಿಕತೆಯಿಂದ ಅದನ್ನು ಪತ್ತೆ ಮಾಡಿ ಸಕಾಲಕ್ಕೆ ನ್ಯಾಯ ದೊರಕಿಸಿಕೊಡಬೇಕು, ತಪ್ಪು ಮಾಡಿದವರಿಗೆ ಭಯ ಹುಟ್ಟಬೇಕು, ಕಾನೂನಿಗೆ ಬೆಲೆ ಕೊಡಬೇಕು ಎಂದು ಪ್ರಯತ್ನಪಟ್ಟರೂ ಕೂಡ ಅದಕ್ಕೆ ಸಂಬಂಧಪಟ್ಟ ಸಾಕ್ಷ್ಯ ಸಾಹಿತ್ಯ ಸಿಕ್ಕುವುದಿಲ್ಲ. ಸಾಹಿತ್ಯ ಎಂದರೆ ರಿಪೋರ್ಟ್ ವಗೈರೆ, ಸಾಕ್ಷಿ ಎಂದರೆ ಸಾರ್ವಜನಿಕರು ಕೊಡಬೇಕಾಗುತ್ತವೆ. ಆದುದರಿಂದ ಸಾಕ್ಷಿ ಹೇಳುವುದಕ್ಕೆ ಹೋಗಿ ಪೋಲೀಸಿನವರ ಕೈಯಲ್ಲಿ ಏಕೆ ಸಿಕ್ಕಿಹಾಕಿಕೊಳ್ಳಬೇಕು, ಬೇಕಾದಷ್ಟು ದಿವಸ ಕೋರ್ಟಿಗೆ ಹೋಗಬೇಕಾಗುತ್ತದೆ, ನಮಗೆ ಏನು ಗ್ರಹಚಾರ ಎನ್ನುವ ಮನೋಧರ್ಮ ಅವರಲ್ಲಿದೆ. ಪೌರನಾಗಿ ಇದು ನನ್ನ ಕರ್ತವ್ಯ, ಒಂದು ಅಕ್ರಮ ನಡೆದಿದೆ, ಇದನ್ನು ಕೇಳುತ್ತ ಪೋಲೀಸಿನವರಿದ್ದಾರೆ, ನನ್ನ ಭಾಗದ ಕರ್ತವ್ಯ ನಾನು ಮಾಡಬೇಕು ಎನ್ನುವ ಮನೋಧರ್ಮ ಹೆಚ್ಚಾಗಿ ಬೆಳೆದಿಲ್ಲ. ಒಂದು ವೇಳೆ ಬೆಳೆದಿದೆ ಎಂದರೆ ಜವಾಬ್ದಾರಿ ಉಳ್ಳ ಜನರೂ ಕೂಡ ನಮಗೆ ಗೊತ್ತಿಲ್ಲ ಎನ್ನುವ ಮನೋಧರ್ಮವನ್ನು ತೋರಿಸುತ್ತಾರೆ. ಆದುದರಿಂದ ನನಗೆ ಅನ್ನಿಸುತ್ತದೆ, ಪೋಲೀಸಿನವರು ದಕ್ಷತೆಯಿಂದ ಕೆಲಸ ಮಾಡುವುದಿಲ್ಲ ಅನ್ನುವುದು ಒಂದೇ ಮಾರ್ಗ. ಅದನ್ನು ಅನ್ನುವವರು ಯಾರೇ ಆಗಲೀ ಸಾಕ್ಷಿ ಹೇಳಿದರೆ ನಮಗೆ ಏನಾದೀತು, ನಮಗೆ ಏಕೆ ಎಂದು ಹೇಳುತ್ತಾರೆಯೋ ಹೊರತು ನಾನು ಸಾಕ್ಷಿ ಹೇಳುತ್ತೇನೆ, ನಿಮಗೆ ಸಹಾಯವಾಗಲಿ ಎನ್ನುವ ಶಕ್ತಿ ಬೆಳೆಯುತ್ತಿಲ್ಲ. ನಮ್ಮ ಸಮಾಜಕ್ಕೆ ಪೋಲೀಸಿನವರ ಆವಶ್ಯಕತೆ ಇಲ್ಲ ಎಂದು ಮಾತನಾಡುತ್ತಿಲ್ಲ. ಆ ಮನೋಧರ್ಮ ಅಥವಾ ಪೋಲೀಸ್ ಎಂದರೆ ಅದರ ಪಾಡಿಗೆ ಅದು ಯಾವುದೇ ರೂಪದಲ್ಲಿ ಕೆಲಸ ಮಾಡುತ್ತಿರಲಿ ನಮಗೆ ಸಂಬಧವಿಲ್ಲ ಎಂದು ಇದೆಯೋ ಎನ್ನುವುದನ್ನು ಇತ್ಯರ್ಥ ಮಾಡುವುದು ಕಷ್ಟ. ಅನೇಕ ಗೌರವಯುತ ಜನರ ಅಭಿಪ್ರಾಯವನ್ನು ನಾನು ತಿಳಿದುಕೊಂಡಿದ್ದೇನೆ. ಅದು ನಿಜವಾದ ಕಾರಣ. ನಮ್ಮ ತಾತಂದಿರ ಕಾಲದಿಂದಲೂ ಪೋಲೀಸ್ ಸ್ಟೇಷನ್ ಮೆಟ್ಟಲು ಹತ್ತಿದವನೇ ಅಲ್ಲ ಎಂದು ಹೇಳುತ್ತಾರೆ. ಇದು ಬಹಳ ಒಳ್ಳೆಯ ಮಾತು. ಲೇವಾದೇವಿ ವಿಚಾರದಲ್ಲಿ ಕೋರ್ಟಿಗೆ ಹೋದವರೇ ಅಲ್ಲ ಎಂದು ಹೇಳುತ್ತಾರೆ. ಇದು ಒಳ್ಳೆಯ ಸಂಪ್ರದಾಯ. ಆದರೆ ಸಮಯ ಬಂದಾಗ ಪೋಲೀಸಿನವರು ವಾಸ್ತವವಾದ ವಿಚಾರವನ್ನು ಕೇಳಿದಾಗ ನಾವು ಕಂಡದ್ದನ್ನು ಹೇಳಬೇಕಾಗುತ್ತದೆ. ಒಂದು ವೇಳೆ ಆ ರೀತಿ ಹೇಳಿದಾಗ ಅದರ ಪ್ರತಿಕ್ರಿಯೆಗಳು ಏನು ಎಂಬುದನ್ನೂ ನೋಡಬೇಕು. ಕೋರ್ಟಿನಲ್ಲಿ ಕೇಸಿರುವ ತನಕ ಸ್ವಲ್ಪ ಬಂದೋಬಸ್ತು ಇರುತ್ತದೆ. ಆಮೇಲೆ ನೀವು ಸಾಕ್ಷಿ ಹೇಳದಿದ್ದರೆ ನಮ್ಮ ಮಗನಿಗೆ ಶಿಕ್ಷೆ ಆಗುತ್ತಿರಲಿಲ್ಲ, ನೀವು ಈ ರೀತಿ ಬರೆದುಕೊಡದೆ ಇದ್ದರೆ ಬಚಾವಾಗುತ್ತಿದ್ದ, ನೀವು ಹೇಳಿದ್ದರಿಂದ ನನಗೆ ತೊಂದರೆಯಾಯಿತು ಎನ್ನುವ ಪ್ರತಿಕ್ರಿಯೆ ಉಂಟಾಗುತ್ತದೆ. ಅಂಥ ಸಂದರ್ಭದಲ್ಲಿ ಸಾರ್ವಜನಿಕರು ಒಗ್ಗಟ್ಟಾಗಿ ಇರುವುದರ ಜೊತೆಗೆ ಪೋಲೀಸಿನವರು ಕೂಡ ಅನೇಕ ರೀತಿಯಲ್ಲಿ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಅಂಥ ರಕ್ಷಣೆ ಕೊಡುವುದರಲ್ಲಿ ಇವತ್ತಿನ ದಿವಸ ಕೆಲವು ಲೋಪಗಳಿವೆ. ನಾನು ಎರಡು ಸಲ ಪೋಲೀಸಿನವರಿಗೆ ವರ್ತಮಾನವನ್ನು ಕೊಟ್ಟಿದ್ದೆ, ಇಂಥ ಕೇಸುಗಳಲ್ಲಿ ಹೀಗೆ ನಡೆದಿದೆ, ನಿಮಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ನನ್ನ ಕರ್ತವ್ಯ ಪಾಲನೆ ಮಾಡಬೇಕಾದ್ದು ಇರುವುದರಿಂದ ತಿಳಿಸಿದ್ದೇನೆ, ಇದನ್ನು ಉಪಯೋಗಿಸಿಕೊಳ್ಳಿ ಎಂದು ವರ್ತಮಾನ ಸ್ವಲ್ಪ ಮೇಲಿನ ಅಧಿಕಾರಿಗೇ ಕೊಟ್ಟಿದ್ದೆ. ಎಲ್ಲಿ ಹೋದರೂ ಕೂಡ ನಿನ್ನೆ ಮಾನ್ಯ ಸದಸ್ಯರು ಹೇಳಿದ ಹಾಗೆ ಕಡೆಗೆ ಪೋಲೀಸ್ ಕಾನ್‌ಸ್ಟೇಬಲ್ ಮೇಲೆ ಭಾರವೆಲ್ಲಾ ಬೀಳುತ್ತದೆ. ಇವರಲ್ಲಿ ಎಷ್ಟೋ ಅನುಭವಸ್ಥರಿದ್ದಾರೆ. ಹೆಚ್ಚು ವಿದ್ಯಾವಂತರಿರಬೇಕು ಎನ್ನುವ ಸಂಪ್ರದಾಯವನ್ನು ಬೆಳೆಸಿಕೊಂಡು ಬರಬೇಕು ಎಂದು ಹೇಳಿದ್ದೇವೆ. ಪೋಲೀಸ್ ಡಿಸಿಪ್ಲಿನ್ ಇಲಾಖೆಯಲ್ಲಿದೆ. ಸಾರ್ವಜನಿಕರಿಗೆ ಎಷ್ಟರ ಮಟ್ಟಿಗೆ ಅದರಿಂದ ಲಾಭ ಬರಬಹುದು ಎನ್ನುವುದು ಕಡಿಮೆಯಾಗಿದೆ. ಒಂದು ವರ್ತಮಾನವನ್ನು ಕೊಟ್ಟರೆ ಕೂಡಲೇ ಇಂಥವರು ಹೇಳಿದರು ಎಂದು ನನ್ನ ಹೆಸರನ್ನು ಆ ಕೇಸು ವಿಷಯದಲ್ಲಿ ಹೇಳಿಬಿಟ್ಟಿದ್ದಾರೆ. ನಾನು ವರ್ತಮಾನವನ್ನು ಕೊಟ್ಟದ್ದು ಬಹುಶಃ ಗೆಜಿಟೆಡ್ ದರ್ಜೆಯ ಅಧಿಕಾರಿಗೆ ಇರಬಹುದು. ಇದನ್ನು ಉದಾಹರಣೆಯಾಗಿ ಇಟ್ಟುಕೊಳ್ಳೋಣ. ಒಬ್ಬ ಡಿಸ್ಟ್ರಿಕ್ಟ್ ಮಟ್ಟದ ಪೋಲೀಸಿನವರಿಗೆ ನಾವು ಏನಾದರೂ ಹೇಳಿದರೆ ಅದನ್ನು ಕಾನ್‌ಸ್ಟೇಬಲ್ ಆದವನು ಹೋಗಿ ತಕ್ಸೀರು ಮಾಡಿದವರಿಗೆ ಬಾಯಿಬಿಟ್ಟು ಅವರ ಹೆಸರನ್ನು ಕೂಡ ಹೇಳಿದರೆ ವರ್ತಮಾನವನ್ನು ಕೊಟ್ಟವರ ಸ್ಥಿತಿ ಏನು ? ಏನೇ ಆಗಿರಲಿ ಪೋಲೀಸಿನವರ ಪೀಕಲಾಟ ಏನೇ ಇರಲಿ ಅವರಿಗೆ ವರ್ತಮಾನ ಕೊಡಬಾರದು ಎನ್ನುವ ಭಾವನೆ ಜನರಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಪೋಲೀಸ್ ಕಾನ್‌ಸ್ಟೇಬಲ್ ತಕ್ಸೀರು ಮಾಡಿದವನ

ಹತ್ತಿರ ಹೋಗಿ ಒಂದೆರಡು ಕೋಳಿ, ಹತ್ತು ಸೇರು ರಾಗಿ, ನಾಲ್ಕು ಅಚ್ಚು ಬೆಲ್ಲ, ಕೊಬರಿ ಗಿಟುಕುಗಳು ಇದನ್ನು ತಗೆದುಕೊಂಡು ನಾವೇನೋ ನಿಮ್ಮನ್ನು ಹಿಡಿಯುತ್ತಿರಲಿಲ್ಲ, ಇಂಥವರು ನಮ್ಮನ್ನು ಒತ್ತಾಯ ಮಾಡುತ್ತಿದ್ದಾರೆ, ಆದುದರಿಂದ ನಾವು ನಿಮ್ಮ ತಂಟೆಗೆ ಬರಬೇಕಾಗಿದೆ. ನಿಮ್ಮ ಪಾಡಿಗೆ ನೀವು ಹುಷಾರಾಗಿರಿ, ನಾವು ಬಂದಾಗ ನೀವು ಹೀಗೆಯೇ ನೋಡಿಕೊಳ್ಳಬೇಕು ಎಂದು ಹೇಳುತ್ತಾರೆ. ಇದನ್ನೆಲ್ಲಾ ನೋಡಿದರೆ ಪೋಲೀಸ್ ಇಲಾಖೆ ಉಳಿಯುತ್ತದೆಯೇ! ಇದನ್ನು ಯಾವ ಹರಿಶ್ಚಂದ್ರನ ಕೈಗೆ ಕೊಟ್ಟರೆ ತಾನೇ ಬಾಳುತ್ತದೆ! ಆದ್ದರಿಂದ ಇಂಥ ಸಂದರ್ಭವಿರುವಾಗ ಅದನ್ನು ಪತ್ತೆ ಮಾಡಿ ನೂರರಲ್ಲಿ ಎರಡು ಮೂರು ನಾಲ್ಕು ಜನರಿಗೆ ಎಕ್ಸೆಂಪ್ಲರಿ ಪನಿಷಮೆಂಟ್, ಸಸ್ಪೆನ್‌ಷನ್ ಮಾಡುವುದು ಅಥವಾ ಬೇರೆ ರೂಪದಲ್ಲಿ ಶಿಕ್ಷೆ ಮಾಡಿದರೆ ಇಲಾಖೆಗೆ ಗೌರವ ಬರುತ್ತದೆ. ಇವತ್ತು ಇಂಥ ಸೀಕ್ರೆಟ್ಸ್ ಉಳಿಸುವುದು ಬಹಳ ಕಷ್ಟ. ಇದರಿಂದಾಗಿ ಇಲಾಖೆಗೆ ಕೂಡ ಮರ್ಯಾದೆ ಇಲ್ಲ. ಅಲ್ಲದೆ ಪೋಲೀಸ್ ರಾಜ್ಯದಲ್ಲಿ ನಾಗರಿಕರಿಗೆ ನೆಮ್ಮದಿ ಮೊದಲೇ ಇಲ್ಲ ಎಂದು ನಾಗರಿಕರು ಯಾರೂ ಪೋಲೀಸ್ ಇಲಾಖೆಗೆ ತಮ್ಮ ಸಹಕಾರ ಕೊಡುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ನಾನು ಅವರಿಗೆ ಸಲಹೆ ಮಾಡುತ್ತಿದ್ದೇನೆ. ಯಾವ ಯಾವ ಕೇಸಿನಲ್ಲಿ ಏನಾಯಿತು, ಹೇಗೆ ಆಯಿತು ಎನ್ನುವುದನ್ನೆಲ್ಲಾ ಹೇಳುತ್ತ ಹೋದರೆ ಬಹಳ ಉದ್ದವಾಗುತ್ತದೆ. ಒಂದು ವೇಳೆ ಕೇಳಿದರೆ ನನ್ನಲ್ಲಿ ಸರಕು ಇದೆ ಅದನ್ನು ನಾನು ಕೊಡುತ್ತೇನೆ.

ಮಾನ್ಯ ಮಿತ್ರರನೇಕರು ಮಾತನಾಡುತ್ತ ಹೇಳಿದರು, ಪೋಲೀಸಿನವರಿಗೆ ಸಂಬಳ ಸಾಲಿಗೆ ಸಾಲದು ಎಂದು. ಪೋಲೀಸಿನವರು ಎಂದರೆ ಅದರಲ್ಲಿ ಐ.ಜಿ.ಪಿ. ಪೋಲೀಸ್ ಕಮಿಷನರ್ ಎಲ್ಲರೂ ಬರುತ್ತಾರೆ. ಪೋಲೀಸಿನವರು ಎಂದರೆ ಕಾನ್‌ಸ್ಟೇಬಲ್ ಎನ್ನುವ ಅರ್ಥದಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆಂದು ಭಾವಿಸುತ್ತೇನೆ. ಬಡ ಕಾನಸ್ಟೇಬಲುಗಳಿಗೆ 65–70 ರೂಪಾಯಿ ಸಂಬಳ ಕೊಟ್ಟು ಹೊಟ್ಟೆಗೆ ಇಲ್ಲವೆ ಡ್ಯೂಟಿ ಮಾಡಿ ಎಂದು ಹೇಳಿ, ಕಣ್ಣು ಬಿಡುವುದಲ್ಲ. ಅವರಿಗೆ ಸಂಬಂಧಪಟ್ಟ ಹಾಗೆ ಕಲವು ಗೊಂದಲಗಳಿವೆ. ಎಲ್ಲಾ ಇಲಾಖೆಯವರ ವೇತನಗಳನ್ನೂ ರಿವೈಸ್ ಮಾಡುವ ಸಂದರ್ಭ ಬರುತ್ತದೆ. ಪೋಲೀಸಿನವರಿಗೆ ಕೊಡುವ ಸಂಬಳದ ಜೊತೆಗೆ ಯೂನಿಫಾರಂ ಅಲೊಯೆನ್ಸ್, ವರ್ಷಕ್ಕೆ ಒಂದು ಜೊತೆ ಬಟ್ಟೆ ಕೊಟ್ಟರೆ ಅದು ಸಾಕಾಗುವುದಿಲ್ಲ. ಮಳೆ ಏನಾದರೂ ಬಂದು ನೆನದು ಹೋದ ಸಂದರ್ಭದಲ್ಲಿ ಅದನ್ನು ಬಿಸಿಲಿನಲ್ಲಿ ಒಣಗಿಸಿ, ಬಟ್ಟೆ ಧರಿಸಿಕೊಂಡು ಡ್ಯೂಟಿಗೆ ಬರುವುದಕ್ಕೆ ಆಗದೆ, ಬೇರೆ ಜೊತೆ ಬಟ್ಟೆ ಇಲ್ಲದೆ ಇರುತ್ತದೆ. ನೆನೆದು ಹೋಗಿರುವ ಬಟ್ಟೆ ಹಾಕಿಕೊಂಡು ಬಂದರೆ ಇನ್‌ಡಿಸಿಪ್ಲಿನ್ ಎನ್ನುತ್ತಾರೆ. ಒಣಗಿದ ಬಟ್ಟೆ ಹಾಕಿಕೊಂಡು ಬರಬೇಕಾದರೆ ಬಿಸಿಲು ಇಲ್ಲವೆ ಒಣಗಿರುವುದಿಲ್ಲ. ಇನ್ನೊಂದು ಜೊತೆ ಬಟ್ಟೆ ಹಾಕಿಕೊಳ್ಳುವುದಕ್ಕೆ ಇರುವುದಿಲ್ಲ. ಯೂನಿಫಾರಂ ಹಾಕಿಕೊಂಡು ಬಂದಾಗ ಗುಂಡಿಯನ್ನು ಉಜ್ಜಿಕೊಂಡು ಬಂದಿಲ್ಲಾ, ಅದು ಮಿಣ ಮಿಣನೆ ಹೊಳೆಯುತ್ತಿಲ್ಲ ಎನ್ನುತ್ತಾರೆ. ಅವರ ಹತ್ತಿರ ಪಾಲಿಷ್ ಇರಲಿಲ್ಲವೋ, ಅಥವಾ ಸಮಯಕ್ಕೆ ಸಿಕ್ಕಲಿಲ್ಲವೋ, ಏನು ಕಾರಣವೋ. ಅಂತೂ ಅವನ ಗುಂಡಿ ಮಿಣ ಮಿಣ ಕಾಣಿಸಲಿಲ್ಲ ಎಂದು ಇನ್‌ಸ್ಪೆಕ್ಷನ್ ನೋಟ್ಸ್‌ನಲ್ಲಿ ಬರೆದು ಅವನಿಗೆ ಫೈನ್ ಹಾಕಿದ ಸಂದರ್ಭಗಳೂ ಇವೆ. ಆದರೆ ಸಾರ್ವಜನಿಕರನ್ನು ವಲ್ಗರ್ ಆಗಿ ಏಕೆ ಮಾತನಾಡಿಸಿವೆ, ಹೆಣ್ಣು ಮಕ್ಕಳನ್ನು ಏಕೆ ಗದರಿಸಿದೆ, ಸಾರ್ವಜನಿಕ ಪ್ರದೇಶದಲ್ಲಿ ಏಕೆ ದುರ್ಭಾಷೆ ಆಡಿದೆ ಎನ್ನುವುದಕ್ಕೆ ಜುಲ್ಮಾನೆ ಹಾಕಿರುವಂಥ ಸಂದರ್ಭಗಳು ರಿಕಾರ್ಡಿನಲ್ಲಿ ಕಂಡು ಬರುವುದಿಲ್ಲ. ಗುಂಡಿ ಹೊಳೆಯುತ್ತಿಲ್ಲ, ಬೂಡ್ಸಿಗೆ ಬಣ್ಣ ಹಾಕಿಲ್ಲ ಎಂದು ಇನ್‌ಸ್ಪೆಕ್ಷನ್ ನೋಟ್ಸ್‌ನಲ್ಲಿ ಇರುತ್ತದೆ.

The spirit of the police administration—it is not the colour of the turban, it is not the colour of the button. ಅದು ಏನು ಎಂದರೆ ಅವನ ಭಾಷೆ, How he should conduct himself in the public ಎನ್ನುವುದರ ಮೇಲೆ ಹೆಚ್ಚು ನಿಗಾವಣೆ ಕೊಡಬೇಕು. ಇದುವರೆಗೆ ಇದ್ದ ಮನೋಧರ್ಮವನ್ನು ಬದಲಾವಣೆ ಮಾಡಬೇಕೆಂದು ಜನತೆ ನಿರೀಕ್ಷಣೆ ಮಾಡುತ್ತದೆ. ಇದರಲ್ಲಿರುವ ಸ್ಪಿರಿಟ್ಟನ್ನು ಆಚರಣೆಯಲ್ಲಿ ತರಬೇಕು.

ಪೋಲೀಸ್ ಕಾನ್‌ಸ್ಟೇಬಲುಗಳ ಸಂಬಳ ಹೆಚ್ಚಿಗೆ ಮಾಡಿ ಎಂದು ಹೇಳಿದರು. ನಮಗೆ ಇರುವ ಸಂಸ್ಥಾನಗಳಲ್ಲಿ ಮದ್ರಾಸ್, ಬೊಂಬಾಯಿ, ಉತ್ತರ ಪ್ರದೇಶ, ಕಲ್ಕತ್ತ, ಡೆಲ್ಲಿ, ಎಲ್ಲ ಎಲ್ಲಾ ಎಷ್ಟು ಸಂಬಳ ಇದೆ, ನಾವು ಇಲ್ಲಿ ಎಷ್ಟು ಸಂಬಳ ಕೊಡುತ್ತಿದ್ದೇವೆಂದು ನೋಡಿದರೆ ನಮ್ಮ ರಾಜ್ಯದಲ್ಲಿರುವ ಕಾನ್‌ಸ್ಟೇಬಲುಗಳ ಸ್ಥಿತಿ ಸ್ವಲ್ಪ ಉತ್ತಮವಾಗಿದೆ ಎಂದು ಹೇಳುತ್ತೇನೆ. ಎಂದರೆ ಇವರಿಗೇನನ್ನೂ ಕೊಡಬಾರದು ಎಂದು ನಾನು ಇಲ್ಲಿ ಹೇಳುತ್ತಿಲ್ಲ. ಅವರಿಗೆ ಸರಿಯಾದ ಸಂಬಳಗಳನ್ನು ಕೊಡಬೇಕು ಮತ್ತು ವಾಸಕ್ಕೆ ಅನುಕೂಲವಾದ ಮನೆಗಳನ್ನು ಕಟ್ಟಿಸಿಕೊಡಬೇಕು ಹಾಗೂ ಯೂನಿಫಾರಂ ಅಲೋಯನ್ಸ್‌ಗಳನ್ನು ಕೊಡಬೇಕು. ಇದಕ್ಕೆ ಅನುಕೂಲವಾಗುವಂತೆ ಇವರಿಗೆ ಸರಿಯಾದ ಸಂಬಳಗಳನ್ನು ಕೊಡಬೇಕು. ಉದಾಹರಣೆಯಾಗಿ ನಾವು ಒಬ್ಬ ಪೋಲೀಸು

(ಶ್ರೀ ಕೆ. ಪ್ರಭಾಕರ್)

ಕಾನ್ಸ್‌ಟೇಬಲ್ಲಿಗೆ ತಿಂಗಳಿಗೆ ಅರವತ್ತು ರೂಪಾಯಿಗಳಷ್ಟು ಸಂಬಳ ಬರುತ್ತದೆ ಎಂದು ಇಟ್ಟು ಕೊಳ್ಳೋಣ. ಅವನಿಗೆ ಆರು ಜನ ಮಕ್ಕಳಿರುತ್ತಾರೆಂದು ಇಟ್ಟುಕೊಳ್ಳೋಣ. ಅವನು ಅವನ ಮನೆಯವರನ್ನೆಲ್ಲಾ ಸರಿಯಾಗಿ ನೋಡಿಕೊಳ್ಳಬೇಡವೇ? ಅವನ ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಕಲಿಸಬೇಡವೇ? ಅವನು ಮಾಡಿರುವ ಸಾಲಗಳನ್ನು ತೀರಿಸಬೇಡವೇ? ಅದೆಲ್ಲೂ ಒಬ್ಬ ಬಡ ಕಾನ್ಸ್‌ಟೇಬಲ್‌ನ ಜೀವನ ನೋಡಿದರೆ ಅವನ ಚಿತ್ರ ಬಹು ಶೋಚನೀಯವಾಗಿದೆ. ಇನ್ನು ನಾವು ಅವನಿಗೆ ಕೊಡುತ್ತಿರುವ ಹಣ ಅವನ ಹೊಟ್ಟೆ ಬಟ್ಟೆಗೆ ಸಾಕಾಗುತ್ತದೆಯೋ ಎನ್ನುವುದನ್ನೂ ಯೋಚನೆ ಮಾಡಬೇಕು. ಇದರ ಕಡೆಗೆ ಸರಕಾರ ಸ್ವಲ್ಪ ನಿಗಾ ಕೊಡಬೇಕು. ಇವರಲ್ಲಿರುವ ಮನೋಭಾವ ಬದಲಾವಣೆಯಾಗಬೇಕು. ನಾವು ಅನೇಕ ಕಡೆ ನೋಡಿರುವ ಹಾಗೆ ಇವರಲ್ಲಿರುವ ಮನೋಭಾವವನ್ನು ಬದಲಾಯಿಸುವುದರ ಕಡೆಗೆ ಸರಕಾರ ನಿಗಾ ಕೊಡಬೇಕು. ಇನ್ನೊಂದು ಡೆಡ್ ಯೂನಿಫಾರಮಿಟಿ ಇನ್‌ಡಿಸಿಪ್ಲಿನ್ ಇದರ ಮೇಲೆ ನಿಗಾ ಕೊಡಬೇಕು. ಪಬ್ಲಿಕ್ ಕಂಪ್ಲೇಂಟ್ಸ್ ಗಳನ್ನು ತನಿಖೆ ಮಾಡುವಾಗ ಅಟ್‌ಮೋಸ್ಟ್ ಸೀಕ್ರೆಸಿ ಎನ್ನು ಇಡಬೇಕಾಗುತ್ತದೆ. ಇದರಲ್ಲೂ ಕೂಡ ನಾವು ಎಷ್ಟೋ ಕಡೆ ನೋಡಿದ್ದೇವೆ ಮನುಷ್ಯರಿಗೆ ಬುದ್ಧಿ ಕಡಿಮೆಯಾಗಿದೆ ಎಂದು ನಾಯಿ ಗಳನ್ನು ಕರೆದುಕೊಂಡು ಬಂದು ಇನ್‌ವೆಸ್ಟಿಗೇಷನ್ನಿಗಾಗಿ ಉಪಯೋಗಿಸುತ್ತಿದ್ದಾರೆ. If there is real sense of honesty investigation perhaps the services of dogs may disappear. ನಾನು ಹೀಗೆ ಹೇಳುವುದರಿಂದ ನಾಯಿಗಿಂತ ಮನುಷ್ಯರ ಬುದ್ಧಿ ಕಡಿಮೆ ಇದೆ ಎನ್ನುವ ಅರ್ಥ ಬರುವಂತೆ ಯಾರೂ ಅರ್ಥ ಮಾಡಿಕೊಳ್ಳಬಾರದು. ಇದನ್ನು ಏಕೆ ಇಲ್ಲಿ ಹೇಳುತ್ತೇನೆ ಎಂದರೆ, ಯಾರಾದರೂ ಸಾರ್ವಜನಿಕರು ಒಂದು ದೂರು ಕೊಟ್ಟು ಅದರ ಬಗ್ಗೆ ತನಿಖೆ ಮಾಡುತ್ತಿರು ವಾಗ ಅದರಲ್ಲಿ ಎಷ್ಟೋ ವಿಚಾರಗಳು ಬರುತ್ತದೆ. ಇದರ ಬಗ್ಗೆ ಸಂಪೂರ್ಣವಾಗಿ ಗುಟ್ಟನ್ನು ಹೊರಗೆಡಬಾರದು, ಸ್ಟ್ರಿಕ್ಟ್ ಸೀಕ್ರೆಸಿಯನ್ನು ಮೇಂಟೇನ್ ಮಾಡಬೇಕು. ಪಬ್ಲಿಕ್ ಮೈಂಡ್‌ನ್ನು ತಿಳಿದುಕೊಂಡು ಪೋಲೀಸಿನವರು ಸೇಫ್ಟಿಯನ್ನು ಮೇಂಟೇನ್ ಮಾಡಬೇಕು ಮತ್ತು ಯಾವುದಾದರೂ ಕಂಪ್ಲೇಂಟುಗಳು ಬಂದಾಗ ಟೈಂಲೀ ರೆಸ್‌ಪಾನ್ಸ್ ಕೊಡಬೇಕು ಮತ್ತು ಪೋಲೀಸಿನವರು "Dead uniformity in secrecy" ಇದರ ಕಡೆಗೆ ನಿಗಾ ವಹಿಸಬೇಕು. ಇನ್ನು ಟ್ರಾಫಿಕ್ ಪೋಲೀಸು ಕಾನ್‌ಸ್ಟೇಬಲ್‌ಗಳಿರುತ್ತಾರೆ. ಇವರು ಮಳೆ ಬಂದರೆ ನೆನೆಯುತ್ತಾರೆ ಎಂದು ಕೆಲವು ಕಡೆ ಇರುವ ಸರ್ಕಲ್‌ಗಳಲ್ಲಿ ಸಿಮೆಂಟು ಛತ್ರಿಗಳನ್ನು ಕಟ್ಟಿರುತ್ತಾರೆ. ಕೆಲವು ವೇಳೆ ಅವರು ಕೈಯನ್ನು ತೋರಿಸುವಾಗ ಅವರ ಕೈಗಳು ಅಲ್ಲಿರುವ ಕಂಭಕ್ಕೆ ಬಡಿಯುತ್ತವೆ. ಕೆಲವು ವೇಳೆ ಮಳೆ ಬಂದಾಗ ಅಲ್ಲಿರುವ ಕಾನ್‌ಸ್ಟೇಬಲ್ ಓಡಿ ಹೋಗಿ ಅಲ್ಲೇ ಪಕ್ಕದಲ್ಲಿರುವ ಒಂದು ಸೈಕಲ್ ಷಾಪಿನಲ್ಲಿ ಕುಳಿತಿರುತ್ತಾನೆ. ಕೆಲವು ವೇಳೆ ಸರ್ಕಲ್‌ಗಳಲ್ಲೇ ಇರುವುದಿಲ್ಲ.

ಇನ್ನು ಸೆಂಟ್ರಿ ಕಾನ್‌ಸ್ಟೇಬಲ್‌ಗಳು ಎಂದು ಕೆಲವು ಕಡೆ ಹಾಕಿರುತ್ತಾರೆ. ಕೆಲವು ಕಡೆಗಳಲ್ಲಿ ಒಂದು ಕಳವು ಆಗಿರುವಾಗ ಅದನ್ನು ಪತ್ತೆ ಹಚ್ಚಲು ಒಂದು ಸಾವಿರ ರೂಪಾಯಿಗಳಷ್ಟು ಬಹುಮಾನ ಕೊಡುತ್ತೇವೆಂದು ಹಾಕಿರುತ್ತಾರೆ. ಆಗ ಅಲ್ಲಿರುವ ಸೆಂಟ್ರಿಯಲ್ಲಿರುವ ಡ್ಯೂಟಿ ಕಾನ್‌ಸ್ಟೇಬಲ್ ನಾನು ಒಬ್ಬನೇ ಇಲ್ಲಿರುವುದು. ಇದರಿಂದ ನಾನು ಯಾರಿಗೂ ಯಾವ ವಿಚಾರವನ್ನೂ ಹೇಳುವುದ ಕ್ಕಾಗುವುದಿಲ್ಲ. ಇದಕ್ಕಾಗಿ ಇಲ್ಲಿ ಇಬ್ಬರು ಪೋಲೀಸು ಕಾನ್‌ಸ್ಟೇಬಲ್‌ಗಳಾದರೂ ಇರಬೇಕಾದುದು ಅವಶ್ಯಕ. ಇಲ್ಲದೇ ಇದ್ದರೆ ಒಬ್ಬರೇ ಇದ್ದು ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಇದರಿಂದಾಗಿ ಅಲ್ಲಲ್ಲಿ ಸೆಂಟ್ರಿ ಡ್ಯೂಟಿಗೆಂದು ಹಾಕುವಾಗ ಇದರ ಸ್ಟ್ರಕ್ಚರನ್ನು ಬದಲಾವಣೆ ಮಾಡಿ ಕಾಲಕ್ಕೆ ತಕ್ಕಂತೆ ಇರುವ ಹಾಗೆ ಮಾಡಬೇಕು. ಈಗಿರುವ ಸೆಂಟ್ರಿ ಒಬ್ಬನೇ ಇದ್ದರೆ ಅವನು ಸಾರ್ವಜನಿಕರ ಕಡೆಯಿಂದ ಏನಾದರೂ ದೂರುಗಳು ಬಂದರೆ ಅದನ್ನು ಡೈರಿಯಲ್ಲಿ ಬರೆದುಕೊಳ್ಳಲು ಕೂಡ ಆಗುವುದಿಲ್ಲ. ಆದುದರಿಂದ ಈಗಿರುವ ಸೆಂಟ್ರಿ ಪದ್ಧತಿಯನ್ನು ಬದಲಾಯಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಕಾನ್‌ಸ್ಟೇಬಲ್‌ಗಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವಾಗ ಒಂದು ರೀತಿಯ ಮಿನಿಮಂ ಕ್ವಾಲಿಫಿಕೇಷನ್ ಇರುವವರನ್ನೇ ನೇಮಕ ಮಾಡಿಕೊಳ್ಳಬೇಕು ಮತ್ತು ಇದನ್ನು ಕಟ್ಟು ನಿಟ್ಟಾಗಿ ಅನುಸರಿಸಬೇಕು. ಇತ್ತೀಚೆಗೆ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡುತ್ತಿರುವುದನ್ನು ನೋಡಿದರೆ ಇದು ಒಂದು ನಗೆಪಾಟಲಾಗಿರುತ್ತದೆ. ಅಲ್ಲದೆ ಈಗಿರುವ ಕಾನೂನಿನಲ್ಲಿ ಏನಾದರೂ ದೋಷಗಳಿದ್ದರೆ ಅದನ್ನು ವಿತ್‌ಡ್ರಾ ಮಾಡಿ ಅಥವಾ ಅದರಲ್ಲೇನಾದರೂ ವೀಕ್‌ನೆಸ್‌ಗಳಿದ್ದರೆ ಅದನ್ನು ಸರಿ ಮಾಡಿ ಮತ್ತು ಈಗಿರುವ ಪೋಲೀಸು ಕೋಡ್‌ನಲ್ಲಿ ಏನೋ ಒಂದು ತರಹದ ಲ್ಯಾಕ್ಯುನಾಗಳು ಇವೆ ಎಂದು ಹೇಳುತ್ತಿದ್ದಾರೆ. ಅದನ್ನು ಸೂಕ್ತವಾದ ರೀತಿಯಲ್ಲಿ ಬದಲಾವಣೆ ಮಾಡಲು ಪ್ರಯತ್ನ

ಮಾಡಬೇಕೆಂದು ನಾನು ಹೇಳುತ್ತೇನೆ. ಸುಖೀ ರಾಜ್ಯದಲ್ಲಿ ಪೋಲೀಸಿನವರು ನಿಷ್ಠೆಯಿಂದ ಹಾಗೂ ನ್ಯಾಯವಾದ ರೀತಿಯಿಂದ ನಡೆಯಬೇಕು, ಜನಗಳಲ್ಲಿ ಒಳ್ಳೆಯ ಭಾಷೆ ಉಪಯೋಗಿಸಬೇಕು ಮತ್ತು ದೂರುಗಳು ಬಂದಾಗ ಟ್ರೈಂಲೀ ಆಕ್ಷನ್ ತೆಗೆದುಕೊಳ್ಳಬೇಕೆಂದು ಮತ್ತು ಡೆಡ್ ಸೀಕ್ರೆಸಿ ಮೇಂಟೇನ್ ಮಾಡಬೇಕು. ಇವೆಲ್ಲಾ ದೃಷ್ಟಿಗಳಿಂದ ಪೋಲೀಸಿನವರು ಕೆಲಸ ಮಾಡುವಂತಾದರೆ ದೇಶದ ಜನಗಳಿಗೆ ಹೆಚ್ಚು ಅನುಕೂಲಗಳಾದೀತು. ಅಲ್ಲವೆ ಇಲ್ಲಿ ಮಾನ್ಯ ಸದಸ್ಯರುಗಳು ಸರಕಾರಕ್ಕೇನಾದರೂ ಒಳ್ಳೆಯ ಸಲಹೆಗಳನ್ನು ಕೊಟ್ಟಾಗ ಸರಕಾರದ ಕಡೆಯವರು ಉತ್ತರ ಕೊಡುವಾಗ ಇಂತಿಂತಹ ಸಲಹೆಗಳ ಮೇಲೆ ಸೂಕ್ತವಾದ ಆಕ್ಷನ್ ತೆಗೆದುಕೊಂಡಿದ್ದೇವೆ ಎಂದು ಇಲ್ಲಿ ಎಲ್ಲರಿಗೂ ತಿಳಿಯುವಂತೆ ಹೇಳಬೇಕು. ಆ ರೀತಿಯಲ್ಲಿ ಪೋಲೀಸು ಇಲಾಖೆಯಲ್ಲಿ ಒಂದು ಸ್ಪಿರಿಟ್ ಇಂಪ್ರೂವ್ ಮಾಡಬೇಕು ಮತ್ತು ಅದಕ್ಕೆ ತಕ್ಕ ಒಂದು ವಾತಾವರಣವನ್ನು ಸರಕಾರ ಕಲ್ಪಿಸಿಕೊಡಬೇಕು ಮತ್ತು ಇವರಿಗೆ ಇರುವ ಸಂಬಳವನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಸಲಹೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri DIGAMBAR RAO BALAWANT RAO (Aland).—Mr. Speaker, Sir, while opposing the Demands of Police, Jail and National Emergency, I wish to make a few observations. Firstly, I take law and order in the country. If law is observed, order is bound to follow. What we find today is, law is observed more in its breach than in its observance. We have found that the police department is the ready hand maid of the party in power at the elections and whenever that party is afraid of another party is growing in strength. That is what we have seen. The police are not made to work properly. Even if there are many lapses, they find shelter at the political level and therefore, we do not see any law and order in the country.

Coming to check posts, what is the position of the check posts on Maharashtra side? All these check posts have become fertile ground for corruption. There are instances where we see an ordinary Constable earning Rs. 50 or 60 per day, making money to the extent of Rs. 50,000 or 60,000. There are instances which I can quote to illustrate this fact. Nothing is done by these check posts to check smuggling in the borders of Maharastra or Aland. Another member from Gulbarga Sri Sharan Gowda has stated that there are many police officers of the rank of Inspectors and Sub-Inspectors in a particular place for more than three years. There is the rule that no office should be kept in the same place for more than three years. But, they are there for six or seven years. It is a open secret that these officers who are kept there for years are minting money in several ways. Today they do not even care for their service. When asked, they say : " I do not care for this job ; I can come out of it at any time ". That is how they throw challenge. So, there is no control over the police department by the Home Ministry. There are ever so many instances where the police, particularly at the time of elections, harass the opponents. Not only do they harass but they influence the electorates also and they use all possible means to see that the electorates are influenced. That is why we find that the police today is nothing but a chain of vested interest and are only preserved to safeguard the leaders of the party in power.

Coming to labour, I must submit that with all these undertakings that Government has got, today the labour is suffering. Instance of M.S.K. Mills was stated. 3,000 labourers and their dependents are

(SRI DIGAMBAR RAO BALAWANT RAO)

suffering. I would request the Labour Minister that in order to safeguard the interest of the labour, he may make a recommendation to take over the Mysore Mills, Minerva Mills, Ellamma Mills and M.S.K. Mills by the Central Government under the Industrial Development Act. There are certain Labour Acts and they are all in English. They may be translated into Kannada so that every labourer may be well-versed with the provisions of the Acts. I also request the Minister for Labour to fix only a nominal fee for taking the depositions in Industrial Tribunals and Courts because it is difficult for the poor labourers to pay more than a nominal fee.

Sir, what we find today is, the party in power is trying its best to put down and crush any other party and this is found in Trade Union activities that are run by the opposition parties. So many Trade Union leaders and political workers are put in jail and so many cases are filed against them in the courts; that is how they are harassed. Here, the distinction has to be made. When legitimate activities of the trade unions are done, it is no good to give them harsh treatment and put them to all sorts of indecencies. That must be stopped.

Regarding the police verification of antecedents before recruitment is made, I would like to say that the purpose of it is not served. It is seen that any person belonging to the opposition party—to any party in the opposition—is debarred. If any person is found not in favour of the party in power, he is debarred. It should not happen because the Government is there to safeguard the rights of all, to whatever politicial ideology he may subscribe to; whether he is a supporter of the ruling party or otherwise. What has happened is the party in power has come to bad reputation; and deliberate acts are done by the police. That is why it was rightly stated by Sri Mulla in Parliament who had been the Judge of the Allahabad High Court that what the police is doing is it is only safeguarding the interest of a joint-stock company of vested interests. He is right in saying that because the activities of the police right from constable to higher authorities, all go to show that they are safeguarding certain particular subjects belonging to particular group and ideology. I feel if this state of affairs were to continue long, then as was stated by Sri Amalorpavam, what happened in Naxalbari will happen here. But, I want to remind him at the same time that it was not due to the opposition party but was due to the inefficient and bad administration of the party in power which was responsible for it. So, let the party in power take caution and take some lessons from the incidents that are happening elsewhere in the country. If things go on without check, there is a tendency on the part of the people to go against law. If law is observed, order is bound so follow. If we find there is no order it is because the people who tell others to observe law are breaking laws at every stage and that particular view is gaining ground throughout the State. So, my submission is that this particular thing must be stopped and things must be stopped in time.

Regarding the Jails, I would make a submission. It was stated by Sri T. R. Shamanna that treatment that was meted out in Jail was not proper; the bread supplied was not proper and it was described graphically by Vatal Nagaraj, how things are in Jails. I submit that during the days of British, congressmen used to say that reforms in Jails must take place and they were saving so from housetops. But now where have those reforms gone? Today the same conditions prevail as in British times. There is no change after attaining freedom. So as was stated by my friends, certain measures must be taken for the development of the personality of the convicts also. Even Gandhiji said that it is the sin that we have to shun and not the sinner. Certain proposals must be implemented to see that the life of the sinner is made good after he comes out from the jail.

With these words I close my speech and thank the Chair.

MR. DEPUTY SPEAKER.—Before I call upon the next member to speak, I would like to know how much time the hon'ble Minister for Home requires to give reply.

SRI M. V. RAMA RAO (Minister for Home and Labour).—About an hour and quarter.

MR. DEPUTY SPEAKER.—I request the hon'ble members to adhere to the time limit because there are 13 more members to speak. Sri Somasekhar will speak and conclude within eight minutes.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ಈ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಈ ಪೋಲೀಸ್ ಇಲಾಖೆಯ ಮಂತ್ರಿಗಳಿಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ವಿರೋಧ ಪಕ್ಷದವರು ಮತ್ತು ಕಾಂಗ್ರೆಸ್ ಪಕ್ಷದವರು ಸಹ ಪೋಲೀಸ್ ಇಲಾಖೆಯಲ್ಲಿರತಕ್ಕಂಥ ಪೋಲೀಸರಿಗೆ ಸಂಬಳ ಕಡಿಮೆಯಾಗಿದೆ, ಅವರ ಸಂಬಳಸಾರಿಗೆ ಜಾಸ್ತಿಯಾಗಬೇಕು, ಅವರಿಗೆ ಉತ್ತಮ ದರ್ಜೆಯ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಒತ್ತಾಯ ಮಾಡಿದರು. ಇದು ಸ್ವಾಗತ ಮಾಡುವ ವಿಷಯ. ಇದೇ ಸಂದರ್ಭದಲ್ಲಿ ವಿರೋಧ ಪಕ್ಷದವರು ಈಗ ನಮ್ಮ ಮುಂದೆ ಇರತಕ್ಕಂಥ ಪ್ರತಿಯೊಂದು ಡಿಮ್ಯಾಂಡ್‌ಗಳನ್ನು ವಿರೋಧ ಮಾಡುತ್ತಾ ಇದ್ದಾರೆ. ಸಂಬಳ ಜಾಸ್ತಿಯಾಗಬೇಕೆಂದು ಸಹ ಹೇಳುತ್ತಾರೆ, ಮೊದಲು ಈ ಇಲಾಖೆಗೆ ಮೂರು ಕೋಟಿ ರೂಪಾಯಿಗಳ ಖರ್ಚು ಇದ್ದು, ಈಗ 7 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿರುವುದನ್ನು ವಿರೋಧ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಪೋಲೀಸ್ ರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದಾರೆಂದು ಕೂಡ ಅಪವಾದನೆ ಮಾಡುತ್ತಿದ್ದಾರೆ. ಹೆಚ್ಚು ಹಣವನ್ನು ಈ ಇಲಾಖೆಗೆ ಕೊಡದಿದ್ದರೆ, ಪೋಲೀಸರಿಗೆ ಸಂಬಳಸಾರಿಗೆ ಜಾಸ್ತಿ ಮಾಡುವುದಕ್ಕೆ, ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ, ಸಾಧ್ಯವೆ ಎಂದು ಕೇಳುತ್ತೇನೆ. ನಾಗರೀಕನಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಡಬೇಕಾಗಿರುವುದರಿಂದ, ಈ ಬೇಡಿಕೆಗಳಿಗೆ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಸ್ವಾಗತ ನೀಡಿದ್ದರೆ ಚೆನ್ನಾಗಿತ್ತು. ಮೊದಲು ಈ ಇಲಾಖೆಗೆ ಮೂರು ಕೋಟಿ ರೂಪಾಯಿಗಳ ಖರ್ಚು ಇದ್ದರೆ, ಇವತ್ತು ಏಳು ಕೋಟಿ ರೂಪಾಯಿಗಳ ಖರ್ಚು ಇದೆ. ಸರ್ಕಾರದವರು ಹಣ ಖರ್ಚು ಮಾಡುತ್ತಿರುವುದು ಸ್ವಾಗತಾರ್ಹವಾಗಿದೆ. ಪೋಲೀಸರಿಗೆ ಇನ್ನೂ ಹೆಚ್ಚು ಅನುಕೂಲಗಳನ್ನು ಮಾಡಿಕೊಡಬೇಕೆಂದು ವಿರೋಧಪಕ್ಷದವರು ಸಲಹೆ ಕೊಟ್ಟಿದ್ದರೆ ಚೆನ್ನಾಗಿತ್ತು. ಇದೇ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಕೆಲವು ಘಟನೆಗಳನ್ನು ಈ ಮಾನ್ಯ ಸಭೆಯಲ್ಲಿ ಇಟ್ಟಿದ್ದಾರೆ. ಪೋಲೀಸ್ ಇಲಾಖೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಕೆಟ್ಟವನು, ಚಿಕ್ಕವನು ಮತ್ತು ಮಾನವೀಯತೆ ಇಲ್ಲದವನು ಎಂದು ತಿಳಿದುಕೊಳ್ಳಬಾರದು. ಕೆಲವು ವರ್ಷಗಳ ಹಿಂದೆ ನಡೆದಂಥ ಒಂದು ಘಟನೆಯನ್ನು ಇಲ್ಲಿ ತಿಳಿಸಬಯಸುತ್ತೇನೆ. ನನ್ನ ಊರಿನಲ್ಲಿ ಒಬ್ಬ ಮುನಿಸಿಪಲ್ ಕೌನ್ಸಿಲರ್ ಮೇಲೆ ಒಂದು ಪೆಟ್ಟಿ ಕೇಸ್ ಆಯಿತು. ನಂತರ ಅವರು ಸಬ್-ಇನ್ಸ್‌ಪೆಕ್ಟರ ಬಳಿ ಹೋಗಿ 500 ರೂಪಾಯಿಗಳನ್ನು ಬೇಕಾದರೆ ಕೊಡುತ್ತೇನೆ, ಈ ಕೇಸ್‌ನಿಂದ ವಿಮುಕ್ತನನ್ನಾಗಿ ಮಾಡಿಸಬೇಕೆಂದು ಕೇಳಿಕೊಂಡಾಗ, ಸಬ್‌ಇನ್ಸ್‌ಪೆಕ್ಟರ್ ನನ್ನ ಕೆಲಸ

(ಶ್ರೀ ಬಿ. ಸೋಮಶೇಖರಪ್ಪ)

ಬೇಕಾದರೆ ಬಿಟ್ಟುಬಿಡುತ್ತೇನೆ, 500 ರೂಪಾಯಿಗಳನ್ನು ಮಾತ್ರ ಲಂಚವಾಗಿ ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲವೆಂದು ಹೇಳಿದನಂತೆ ಮುಂದೆ ಈ ಕೌನ್‌ಸಿಲರ್‌ಗೆ ಕೇವಲ 5 ರೂಪಾಯಿಗಳ ದಂಡ ವಾಯಿತಂತೆ. ಇದರಿಂದ ಪೋಲೀಸ್ ಇಲಾಖೆಯಲ್ಲಿ ಉತ್ತಮ ದರ್ಜೆಯ ನೌಕರರು ಇದ್ದಾರೆಂದು ಗೊತ್ತಾಗುತ್ತದೆ. ಪ್ರತಿಯೊಬ್ಬ ನಾಗರೀಕರು ಈ ಪೋಲೀಸ್ ನೌಕರರ ಮೇಲೆ ಸಹಾನುಭೂತಿ ಸಹಕಾರ ಮತ್ತು ಅವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟರೆ, ಅವರು ತಮ್ಮ ಒಂದು ಕರ್ತವ್ಯವನ್ನು ವಿಚಕ್ಷಣೆಯಿಂದ ಮಾಡುತ್ತಾರೆಂದು ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಬೊಂಬಾಯಿ ಕರ್ನಾಟಕದಲ್ಲಿ ನಡೆದ ನನ್ನ ಮಾನ್ಯ ಸ್ನೇಹಿತರೊಬ್ಬರ ಉದಾಹರಣೆಯನ್ನು ಕೊಡುತ್ತೇನೆ. ಅವರು ಒಂದು ದಿನ ರಾತ್ರಿ ಬೊಂಬಾಯಿನಲ್ಲಿ ಸೈಕಲ್‌ನಲ್ಲಿ ಹೋಗುತ್ತಿದ್ದರು, ಸೈಕಲ್‌ನಲ್ಲಿ ದೀಪವಿಲ್ಲದ್ದರಿಂದ ಅವರನ್ನು ಪೋಲೀಸರು ಸ್ಟೇಷನ್‌ಗೆ ಕರೆದುಕೊಂಡು ಹೋದರು, ಅಲ್ಲಿ ಇವರು ಪೋಲೀಸರಿಗೆ 10 ರೂಪಾಯಿಗಳನ್ನು ಕೊಟ್ಟಾಗ ಬಿಟ್ಟುಬಿಟ್ಟರು. ಅದೇ ವ್ಯಕ್ತಿ ಬೆಂಗಳೂರಿನಲ್ಲಿ ಒಂದು ರಾತ್ರಿ ಸೈಕಲ್‌ನಲ್ಲಿ ಹೋಗುತ್ತಿದ್ದಾಗ ಸೈಕಲ್ ದೀಪ ಆರಿಹೋಗಿತ್ತು, ಇದನ್ನು ನೋಡಿದ ಪೋಲಿಸರು ಅವರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗುವಾಗ, ಎರಡು ರೂಪಾಯಿಗಳ ಲಂಚವನ್ನು ಕೊಟ್ಟರಂತೆ, ನಂತರ ಆ ಪೋಲೀಸಿನವರು ಒಂದೂವರೆ ರೂಪಾಯಿ ವಾಪಸ್ ಕೊಟ್ಟು, ನಾನು ತೆಗೆದುಕೊಳ್ಳುವುದು ಕೇವಲ ಎಂಟಾಣೆ ಎಂದು ಹೇಳಿದನಂತೆ. ಈ ಮೈಸೂರು ರಾಜ್ಯದಲ್ಲಿರುವ ಪೋಲೀಸರಲ್ಲಿ ಕೆಲವರು ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಎಲ್ಲರೂ ಹೇಳುತ್ತಿದ್ದಾರೆ. ಅದರಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶವಿದೆ. ಆದರೆ ಮೈಸೂರಿನಲ್ಲಿರತಕ್ಕಂತಹ ಪೋಲೀಸಿನವರು ಹಣ ಗಳಿಸಬೇಕೆಂದು ಇದ್ದರೆ ಈ ಎರಡು ರೂಪಾಯಿಯಲ್ಲಿ 8 ಆಣೆ ತೆಗೆದುಕೊಂಡು ಬಿಡುತ್ತಿರಲಿಲ್ಲ, ಹೆಚ್ಚು ತೆಗೆದುಕೊಳ್ಳುತ್ತಿದ್ದರು. ಅವನು ತನ್ನ ಜೀವನ ಮಟ್ಟ ಕಡಿಮೆ ಇದೆ, ಅದಕ್ಕೋಸ್ಕರ ಅದನ್ನು ತೆಗೆದುಕೊಂಡಿದ್ದಾನೆಯೇ ವಿನಾ ಬೇರೇನೂ ಅಲ್ಲ. ಅದರ ಉದ್ದೇಶ ಏನು ಎಂಬುದನ್ನು ಎಲ್ಲರೂ ನೋಡುತ್ತಾರೆ, ಕೋರ್ಟಿನಲ್ಲೂ ನೋಡುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಯವರಿಗೆ ಒಂದು ಸಲಹೆ ಕೊಡಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇದಕ್ಕೆಲ್ಲಾ ಒಂದು ಸ್ಕ್ರೀನಿಂಗ್ ಕಮಿಟಿಯನ್ನು ಮಾಡಬೇಕು. ಅದರಲ್ಲಿರತಕ್ಕ ಅವಿದ್ಯಾವಂತರನ್ನು ಮತ್ತು ನಾಲಾಯಕ್ಕಾದ ಅಧಿಕಾರಿಗಳನ್ನು ಮತ್ತು ಯಾವ ವ್ಯಕ್ತಿಗಳು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ತಯಾರಾಗಿಲ್ಲವೋ, ಅಂಥವರನೆಲ್ಲಾ ಕಂಪಲ್ಸರಿ ಆಗಿ ರಿಟೈರ್‌ಮಾಡುವುದಕ್ಕೋಸ್ಕರ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

3-30 P.M.

ಇನ್ನೊಂದು ವಿಚಾರ. ನಾನು ಒಬ್ಬ ಆಡಳಿತ ಪಕ್ಷದಲ್ಲಿರತಕ್ಕಂತಹ ವ್ಯಕ್ತಿಯಾಗಿ ಹೇಳುತ್ತಿದ್ದೇನೆ. ಈ ಒಂದು ಪೋಲೀಸ್ ಇಲಾಖೆಯವರು ಯಾವ ಇಲಾಖೆಯ ಬಗ್ಗೆ ದೂರುಗಳನ್ನು ಕೊಟ್ಟರೂ ತೆಗೆದುಕೊಳ್ಳುತ್ತಾರೆ. ಆದರೆ ಸಹಕಾರಿ ಇಲಾಖೆಯಲ್ಲಿರತಕ್ಕ ದೂರುಗಳನ್ನು ಕೊಟ್ಟರೆ ಅದಕ್ಕೆ ಬಹಳ ಕಾಲ ತೆಗೆದುಕೊಳ್ಳುತ್ತಾರೆ. ಕಳೆದ ಮೂರು ವರ್ಷದಿಂದ ನಾನು ಡಿ. ಸಿ. ಸಿ. ಬ್ಯಾಂಕಿನ ಅಧ್ಯಕ್ಷನಾಗಿ ನೋಡುತ್ತಿದ್ದೇನೆ. ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ಗೆ ಕೇಳಿದರೆ, ಇನ್ನೂ ಅನೇಕ ಕೇಸುಗಳು ಇನ್‌ವೆಸ್ಟಿಗೇಶನ್ ಸ್ಟೇಜಿನಲ್ಲಿದೆ ಎಂದು ತಿಳಿದುಬರುತ್ತದೆ. ಇದರಲ್ಲಿ 1-2-3 ವರ್ಷಗಳ ಎಲ್ಲಾ ಕೇಸುಗಳಿವೆ. ಇದರ ಬಗ್ಗೆ ಜಿಲ್ಲಾ ಮಟ್ಟದಲ್ಲಿ, ಒಂದು, ಕಾರ್ಪೋರೇಶನ್ ಮಟ್ಟದಲ್ಲಿ ಒಂದು ಕೋಆರ್ಡಿನೇಶನ್ ಕಮಿಟಿ ಮಾಡುವುದರಿಂದ, ಅಲ್ಲಿ ಇಂಥ ಸಹಕಾರಿ ಸಂಸ್ಥೆಗಳಲ್ಲಿ ಆಗತಕ್ಕಂತಹ ಆರೋಪಗಳನ್ನು ಮತ್ತು ಮಿಸ್‌ಅಪ್ರೋಪ್ರಿಯೇಶನ್ ಕೇಸುಗಳನ್ನು ಆದಷ್ಟು ತೀವ್ರವಾಗಿ ಡಿಸ್ಪೋಸಲ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಕೊನೆಯದಾಗಿ ಜೈಲುಗಳ ಬಗ್ಗೆ ಮಾನ್ಯ ಸದಸ್ಯರನೇಕರು ಬಹಳ ಸಲಹೆಗಳನ್ನು ಕೊಟ್ಟಿದ್ದಾರೆ. ಜೈಲುಗಳಲ್ಲಿ ತಪ್ಪು ಮಾಡಿದವರಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ಅಲ್ಲಿ ಖೂನಿ ಮಾಡಿದವರೂ ಇದ್ದಾರೆ, ಕಳ್ಳತನ ಮಾಡಿದವರೂ ಇದ್ದಾರೆ. ಇಂಥ ವ್ಯಕ್ತಿಗಳು ಜೈಲಿನಿಂದ ಹೊರಗಡೆ ಬರುವಾಗ ಉತ್ತಮ ಪ್ರಜೆಗಳಾಗಿ ಬರಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆ ರೀತಿಯಲ್ಲಿ ಅವರ ಮನಸ್ಸಿನಲ್ಲಿ ಪರಿವರ್ತನೆಯಾಗಬೇಕು. ಅದಕ್ಕೆ ಸರ್ಕಾರದವರು ಗಮನಕೊಡಬೇಕೆಂದು ಹೇಳುತ್ತೇನೆ. ಮತ್ತು ನಾನು ಕೆಲವು ಪತ್ರಿಕೆಗಳಲ್ಲಿ ಮತ್ತು ಪುಸ್ತಕಗಳಲ್ಲಿ ಓದಿದ್ದೇನೆ—ಏನೆಂದರೆ, ರಷ್ಯಾದಲ್ಲಿ ಉತ್ತಮ ದರ್ಜೆಯ ಜೈಲಿನ ಏರ್ಪಾಡು ಇದೆ. ಪ್ರತಿಯೊಬ್ಬ ಜೈಲಿಗೆ ಹೋದವನಿಗೆ, ಅವನ ಮಾನಸಿಕ ಪರಿವರ್ತನೆ ಆಗಿ, ಹೃದಯ ಪರಿವರ್ತನೆ ಆಗಿ, ಅಂಥವನು ಪಶ್ಚಾತ್ತಾಪ ಪಡತಕ್ಕ ಏರ್ಪಾಡು ಇದೆ. ಅಂಥ ಏರ್ಪಾಡನ್ನು ಮಾನ್ಯ ಗೃಹ ಮಂತ್ರಿಗಳು ರಷ್ಯಕ್ಕೆ ಹೋಗಿ ಅಲ್ಲಿರತಕ್ಕ ಪದ್ಧತಿಗಳನ್ನು

ಅಭ್ಯಾಸ ಮಾಡಿಕೊಂಡು ಬಂದು ಇಲ್ಲಿಯೂ ಅದೇ ರೀತಿ ಜೈಲುಖಾನೆಯ ಪರಿಸ್ಥಿತಿಯನ್ನು ಉತ್ತಮ ಪಡಿಸಿದರ ಒಳ್ಳೆಯದೆಂದು ಕಾಣುತ್ತದೆ.

ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್, ಶ್ರೀಮಾನ್ ಎಂ. ಎಸ್. ಕೃಷ್ಣನವರು ಮಾತ ನಾಡುತ್ತಾ, ಲೇಬರ್ ಕೋರ್ಟು ಜಾಸ್ತಿಯಾಗಬೇಕು, ಟ್ರಿಬ್ಯೂನಲ್ ಜಾಸ್ತಿಯಾಗಬೇಕು, ಅಸಿಸ್ಟೆಂಟ್ ಕಮಿಷನರ್ ಜಾಸ್ತಿಯಾಗಬೇಕೆಂದು ಸಲಹೆಗಳನ್ನು ಕೊಟ್ಟಿದ್ದರು. ಅದು ನಿಜ ವಾಗಿಯೂ ಉತ್ತಮವಾದ ಸಲಹೆಗಳು. ಅದರ ಜೊತೆಗೆ ಮಾನ್ಯ ಸದಸ್ಯರು, ಹಣಕಾಸಿನ ಬೇಡಿಕೆ ಬಂದಾಗ ಅಷ್ಟೇ ಒಂದು ವಿಶಾಲಭಾವನೆಯಿಂದ, ಒಪ್ಪಿಕೊಳ್ಳಬೇಕು. ಮಾನ್ಯ ಅರ್ಥಿಕ ಮಂತ್ರಿಗಳು ಏನಾದರೂ ಒಂದು ಬಿಲ್ಲನ್ನು ತಂದಾಗ ಕೂಡ ಅವರು ಬಹಳ ದೊಡ್ಡಮನಸ್ಸಿನಿಂದ ಒಪ್ಪಿಕೊಳ್ಳ ಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಫೋರ್ಟು).—ಮಾನ್ಯ ಸಭಾಪತಿಯವರೇ, ನಮ್ಮ ಮುಂದಿ ತಕ್ಕಂತಹ ಪೋಲೀಸ್ ಖಾತೆ, ಜೈಲು ಖಾತೆ ಮತ್ತು ಕೆಲಸಕಾರ್ಯಗಳ ಸೌಲಭ್ಯ, ಇದರ ಬಗ್ಗೆ ಇರತಕ್ಕಂತಹ ಬೇಡಿಕೆಗಳನ್ನು ಇಲ್ಲಿ ನಡೆಸತಕ್ಕಂತಹ ಒಂದು ಆಡಳಿತ ಸರಿಯಾದ ರೀತಿ ಯಲ್ಲಿ ಮತ್ತು ಸಮರ್ಪಕವಾದಂತಹ ರೀತಿಯ ನಡೆಯದಿರುವುದರಿಂದ ಈ ಬೇಡಿಕೆಗಳ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಈ ಪೋಲೀಸ್ ಖಾತೆ ಮತ್ತು ಜೈಲು ಖಾತೆಯ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮರಾಯರ ಬಗ್ಗೆ ನನಗೆ ಹೆಚ್ಚಿನ ಗೌರವ ಇದೆ. ಅವರೂ ನನ್ನ ಬಗ್ಗೆ ಹೆಚ್ಚು ಮಾಹಿತಿಯನ್ನು ತಿಳಿದುಕೊಂಡಿದ್ದಾರೆ. ಆದರೆ, ಈ ಖಾತೆ ಅವರ ಅಧೀನದಲ್ಲಿರುವುದಕ್ಕೆ, ಅವರಿಗೆ ಅರ್ಹತೆ ಕಡಿಮೆ ಯಾಗಿದೆ ಎಂಬುದನ್ನು ಮಾತ್ರ ಹೇಳುತ್ತೇನೆ. ಮೊದಲನೆಯದಾಗಿ, ಮಾನ್ಯ ಸಚಿವರು, ಜನರಿಂದ ಚುನಾಯಿಸಲ್ಪಟ್ಟು ಬಂದಂತಹ ಸದಸ್ಯರಲ್ಲ. ಅವರು ಜನರಿಂದ ಓಟು ತೆಗೆದುಕೊಂಡು ಬಂದಿರ ತಕ್ಕವರಾಗಿದ್ದರೆ, ಇಷ್ಟು ಕಠಿಣವಾಗಿರುತ್ತಾ ಇರಲಿಲ್ಲ. ಎರಡನೆಯದಾಗಿ ಜನರ ಸಂಪರ್ಕ ಮಾನ್ಯ ಮಂತ್ರಿಯವರಿಗೆ ಬಹಳ ಕಡಿಮೆ. ಏಕೆಂದರೆ, ಅವರು ಬಹಳ ಮಾಡಿ ಮಂತ್ರಿಗಳು ಎಂದು ಹೇಳಿದರೆ ತಪ್ಪಾಗಲಾರದು ಎಂದು ತಿಳಿದುಕೊಂಡಿದ್ದೇನೆ. ಇದು ಇವರಿಗೆ ಇರುವ ಡಿಸ್‌ಕ್ವಾಲಿಫಿಕೇಶನ್ಸ್.

[MR. SPEAKER in the Chair]

Mr. SPEAKER.—As far as possible personal approaches should be eliminated ; individualities do not come into the budget.

ಶ್ರೀ ಟಿ. ಆರ್. ಶಾಮಣ್ಣ.—ಇವರು ಎಲ್ಲರಿಗಿಂತಲೂ ಪ್ರಮಾಣ ಭತ್ಯ ಕಡಿಮೆಯಾಗಿ ತೆಗೆದು ಕೊಳ್ಳುತ್ತಾರೆಂದರೆ ತಪ್ಪಾಗಲಾರದು.

ಇಂಥ ಒಳ್ಳೆಯ ಮನುಷ್ಯರು ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲಿ ಎಂದು ಹೇಳುತ್ತಿದ್ದೇನೆ. ಈಗ ಹೆಚ್ಚು ಇದರ ಬಗ್ಗೆ ಮಾತನಾಡತಕ್ಕಂತಹ ಆವಶ್ಯಕತೆ ಕಾಣಲಿಲ್ಲ. ಆದರೆ ಜನರ ಸಂಪರ್ಕವನ್ನು ಮಾನ್ಯ ಗೃಹಮಂತ್ರಿಗಳು ಇಟ್ಟುಕೊಂಡರೆ, ಅವರು ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಬಹು ದೆಂದು ಮಾತ್ರ ಹೇಳುತ್ತೇನೆ. ನನ್ನ ಅಭಿಪ್ರಾಯದ ಬಗ್ಗೆ ಹೇಳಬೇಕಾದರೆ, ಈ ಪೋಲೀಸ್ ಖಾತೆ ಇರತಕ್ಕಂತದ್ದು ಈ ರಾಜ್ಯದಲ್ಲಿರತಕ್ಕಂಥ ಅನೇಕ ಲೋಪದೋಷಗಳನ್ನು ಕಡಿಮೆ ಮಾಡುವುದ ಕ್ಕೋಸ್ಕರ. ನಮ್ಮ ಪೋಲೀಸು ಆಡಳಿತ ಈ ಕಳ್ಳಭಟ್ಟಿ ಸಾರಾಯಿ ಹಿಡಿಯುವುದರಲ್ಲಿ ಎಷ್ಟು ದಕ್ಷ ರಾಗಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರೆಲ್ಲರೂ ಕೆಲವು ದಿವಸದಿಂದ ಮಾತನಾಡಿದ್ದಾರೆ. ಈ ನಗರದಲ್ಲಿ ಬೇಕಾದಷ್ಟು ಕ್ಲಬ್ಬುಗಳು, ಜೂಜುಕಟ್ಟೆಗಳು ಇವೆ. ಆದರೆ ಅದರ ಹಾವಳಿಯನ್ನು ತಪ್ಪಿಸುವುದರಲ್ಲಿ ಎಷ್ಟು ದಕ್ಷರಾಗಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು ; ಬ್ಲಾಕ್ ಮಾರ್ಕೆಟನ್ನು ಕಡಿಮೆ ಮಾಡುವುದಕ್ಕೆ ತಮ್ಮ ಇಲಾಖೆಯ ದಕ್ಷತೆ ಎಷ್ಟು ಇದೆ ಎಂಬುದನ್ನು ಯೋಚನೆ ಮಾಡಬೇಕು, ಮತ್ತು ಲಂಚ ರುಷುವತ್ತುಗಳ ಬಗ್ಗೆ ಎಷ್ಟು ಆಸಕ್ತಿ ವಹಿಸಿ ಕಡಿಮೆ ಮಾಡಿದ್ದಾರೆ ಎಂಬುವುದನ್ನು ನಾವು ಯೋಚನೆ ಮಾಡಬೇಕು, ಖೋಟಾ ನೋಟಿನ ಛಾಪಾಖಾನೆ ಮತ್ತು ಚಲಾವಣೆಯನ್ನು ನಿಲ್ಲಿಸುವುದರಲ್ಲಿ ಎಷ್ಟು ಆಸಕ್ತಿ ತೆಗೆದುಕೊಂಡಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು ಮತ್ತು ಹೊಸಪೇಟೆಯ ಉತ್ತರಾದಿಮಠದಲ್ಲಿ ಕಳವಾದುದರಲ್ಲಿ ಕೆಲವು ಸಾಮಾನುಗಳು ಸಿಕ್ಕಿವೆ, ಆದರೆ ಮುಖ್ಯವಾದ ಸಾಮಾನು ಸಿಗಲಿಲ್ಲವೆಂದು ಆ ಮಠದ ಅಧಿಕಾರಿ ಪೇಚಾಡುತ್ತಿದ್ದಾರೆ. ಇದರ ಬಗ್ಗೆ ಎಷ್ಟುಮಟ್ಟಿಗೆ ಆಸಕ್ತಿ ವಹಿಸುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು. ಅನೇಕ ಕೊಲೆಗಳು ಆಗುತ್ತವೆ, ಪತ್ತೆ ಆಗುವುದಿಲ್ಲ, ಇವುಗಳ ಬಗ್ಗೆ ಸಾಕಾದಷ್ಟು ದಕ್ಷತೆ ವಹಿಸಿ, ತಮ್ಮ ದಕ್ಷತೆಯನ್ನು ತೋರಿಸುವುದಕ್ಕೆ ಬದಲಾಗಿ ನಾಗರಿಕರ ಬಗ್ಗೆ ಯಾವುದಾದರೂ ಕಷ್ಟಗಳನ್ನು ಸರ್ಕಾರದ ಮುಂದೆ ಹೇಳುತ್ತೇವೆ ಎಂದರೆ, ಚಳುವಳಿ ಮಾಡಿ ಒಂದು ಪ್ರದರ್ಶನವನ್ನು ಮಾಡುತ್ತೇವೆ

(ಶ್ರೀ ಟಿ. ಆರ್. ಶಾಮಣ್ಣ)

ಎಂದರೆ, ಬೇಟೆ ನಾಯಿಗಳನ್ನು ಛೂ ಬಿಟ್ಟಹಾಗೆ ಪೋಲೀಸಿನವರನ್ನು ನಮ್ಮ ಮೇಲೆ ಛೂ ಬಿಡುತ್ತಾರೆ. ನಮ್ಮ ಪ್ರದರ್ಶನಕಾರರು ಎಷ್ಟು ಇರುತ್ತಾರೆಯೋ ಅದಕ್ಕೆ ನಾಲ್ಕರಷ್ಟು ಜನ ಪೋಲೀಸಿನವರನ್ನು ನಮ್ಮ ಮೇಲೆ ಹಾಕುತ್ತಾರೆ. ಇದರ ಜೊತೆಗೆ ಅವರು ಏನು ಅಂದುಕೊಂಡಿದ್ದಾರೆ ಎಂದರೆ, ಪೋಲೀಸ್‌ನವರಿಂದಲೇ ಇದನ್ನೆಲ್ಲಾ ನಮ್ಮ ಹಿಡಿತಕ್ಕೆ ತೆಗೆದುಕೊಳ್ಳಬಹುದು ಎಂದು. ನಾವು ಕೇಳುವುದು, ನಾಗರಿಕರಿಗೆ ಸಂಬಂಧಪಟ್ಟ, ಜನತೆಯ ಅಗತ್ಯವಾದ ಸಮಸ್ಯೆಗಳನ್ನು ಸರ್ಕಾರದ ಮುಂದೆ ಹೇಳುವುದಕ್ಕೆ ಅವಕಾಶ ಮಾಡಿಕೊಡಿ ಎಂದರೆ ಪೋಲೀಸ್‌ನವರ ಹಾವಳಿಯನ್ನು ಹೆಚ್ಚಿಸಿ ನಮ್ಮನ್ನು ತಡೆದಿದ್ದಾರೆ. ಆದರೆ ಈ ಪೋಲೀಸ್‌ನವರನ್ನು ನಂಬಿಕೊಂಡು ನೀವು ಬಹಳ ದಿನ ಅಧಿಕಾರವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂಬುದು ನಮಗೆ ಚೆನ್ನಾಗಿ ವ್ಯಕ್ತಪಟ್ಟಿದೆ. ಏಕೆಂದರೆ, ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಹೇಳುತ್ತಾ ಇದ್ದ, 'ಮಹಾಸ್ವಾಮಿ 23 ವರ್ಷ ಸರ್ವೀಸ್ ಆಯಿತು ಈ ಜಾಗಕ್ಕೆ ಬಂದು ಇನ್ನೂ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿಯೇ ಇದ್ದೇನೆ ನನಗಿಂತ ಕೆಳಗೆ ಇದ್ದವರು ನನ್ನ ಅಧಿಕಾರಿಗಳಾಗಿದ್ದಾರೆ' ಎಂದು ತನ್ನ ಗೋಳನ್ನು ಹೇಳಿಕೊಳ್ಳುತ್ತಾನೆ. ಇನ್ನು ಪೋಲೀಸ್ ಕಾನ್‌ಸ್ಟೇಬಲ್‌ನ್ನು ಕೇಳಿದರೆ ಹೊಟ್ಟೆಗೆ ಇದ್ದರೆ ಬಟ್ಟೆಗೆ ಇಲ್ಲ, ಬಟ್ಟೆಗೆ ಇದ್ದರೆ ಹೊಟ್ಟೆಗೆ ಇಲ್ಲ, ಕಾಕಿ ಬಟ್ಟೆ ಕಿತ್ತು ಹಾಕಿ ನಿಮ್ಮ ಜೊತೆಗೆ ಸೇರಿಕೊಳ್ಳೋಣ ಎಂದು ಮನಸ್ಸು ಬರುತ್ತದೆ, ಆದರೆ ಹೆಂಡತಿ ಮಕ್ಕಳ ಕಷ್ಟ ನೋಡಿಕೊಂಡು ಇಂತಹ ಒಂದು ಜೀವನಕ್ಕೆ ತಗಲಿ ಕೊಂಡಿದ್ದೇವೆ ಎಂದು ಹೇಳುತ್ತಾರೆ. ಇದನ್ನು ನಾವು ಕೇಳುತ್ತಾ ಇದ್ದೇವೆ. ಆದ್ದರಿಂದ ಖಂಡಿತ ವಾಗಿಯೂ ಕಾನ್‌ಸ್ಟೇಬಲ್ ಆಗಲಿ ಅಥವಾ ಸಣ್ಣ ದರ್ಜೆಯ ಪೋಲೀಸ್ ಅಧಿಕಾರಿಯಾಗಲಿ ನಿಮ್ಮ ಜೊತೆಯಲ್ಲಿ ಇದ್ದಾರೆ ಎಂದು ತಿಳಿದುಕೊಳ್ಳಬೇಡಿ, ನಿಮಗೆ ಇರತಕ್ಕಂಥಾ ಬೆಂಬಲ ಎಲ್ಲಾ ದೊಡ್ಡ ಅಧಿಕಾರಿಗಳ ಬೆಂಬಲವೇ. ಆದ್ದರಿಂದ ಜನತಾ ಸೇವೆ ಮಾಡುತ್ತೇವೆ ಎನ್ನತಕ್ಕ ಮನೋಭಾವ ಪೋಲೀಸ್ ವರ್ಗದಲ್ಲಿ ಬರಬೇಕು, ಅದು ಬರಬೇಕಾದರೆ ಅದಕ್ಕೆ ಸರಿಯಾದ ತರಬೇತಿ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಈ ಪೋಲೀಸ್‌ನವರ ಕಷ್ಟಕಾರ್ಪಣ್ಯಗಳು ಎಷ್ಟೋ ಇವೆ ಅವನ್ನು ನಿವಾರಣೆ ಮಾಡುವುದರ ಬಗ್ಗೆ ಯೋಚನೆ ಮಾಡದಿದ್ದರೆ ಯಾವ ರೀತಿ ಅವರಿಂದ ಸೇವೆ ಆಗಬೇಕೋ ಅದನ್ನು ಪಡೆಯಲು ಆಗುವುದಿಲ್ಲ ಎಂದು ಹೇಳುತ್ತೇನೆ.

ಈ ಪೋಲೀಸರ ಹಾವಳಿಯನ್ನು ತಪ್ಪಿಸಿ ಜನರ ಬೇಡಿಕೆ ಏನು ಎಂಬುದನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಜೈಲಿನ ಬಗ್ಗೆ ಹೇಳಬೇಕಾದರೆ, ನಾನು ಹಿಂದಿನ ಕಾಲದಿಂದಲೂ ಬಹಳ ದಿವಸ ಜೈಲಿನ ವಾಸವನ್ನು ಅನುಭವಿಸಿದ್ದೇನೆ, ಮೊನ್ನೆ ಕೆಲವು ದಿನಗಳ ಹಿಂದೆ ಕೂಡ ಜೈಲಿಗೆ ಹೋಗಿಬಂದಿದ್ದೇನೆ. ಮಾನವೀಯತೆಯ ದೃಷ್ಟಿಯಿಂದ ಯೋಚನೆ ಮಾಡುವುದಾದರೆ ಈ ಜೈಲಿನ ಮ್ಯಾನ್ಯುಯಲ್‌ನ್ನು ಶೀಘ್ರವಾಗಿ ಬದಲಾವಣೆ ಮಾಡಬೇಕು. ಅದಕ್ಕೆ ಬೇಕಾದರೆ ಒಂದು ಪರಿಣತರ ಕಮಿಟಿಯನ್ನು ಏರ್ಪಾಡು ಮಾಡಿ ಅದರ ಬಗ್ಗೆ ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಂಬಿದ್ದೇನೆ. ಏಕೆಂದರೆ ಇವತ್ತಲ್ಲ ನಾಳೆ ಆ ಕಡೆ ಮಹನೀಯರು ಆಡಳಿತದಲ್ಲಿ ಯಾರಿದ್ದೀರಿ ನೀವೂ ಕೂಡ ಜೈಲಿಗೆ ಹೋಗಬೇಕಾದ ಸಂದರ್ಭ ಬರುತ್ತದೆ, ಆ ಕಾಲದಲ್ಲಾದರೂ ಒಳ್ಳೆಯ ಪರಿಸ್ಥಿತಿ ಜೈಲಿನಲ್ಲಿ ಇರಲಿ ಎಂದು ಹೇಳಿ ಈಗಲೇ ರಿಫಾರಂ ಮಾಡಿ ಇಟ್ಟುಕೊಳ್ಳಿ ಎಂದು ಈ ಸಂದರ್ಭ ದಲ್ಲಿ ಹೇಳುತ್ತೇನೆ.

ಜೈಲು ಸೂಪರ್‌ಇಂಟೆಂಡೆಂಟ್ ಆಗಿರತಕ್ಕ ಮನುಷ್ಯರನ್ನು ಹೊಸದಾಗಿ ರಿಕ್ರೂಟ್ ಆದವರನ್ನು ಹಾಕಬೇಡಿ, ಮಾನವೀಯತೆ ಇರತಕ್ಕವರನ್ನು, ಕನಿಕರ ಇರತಕ್ಕ ಮನುಷ್ಯರನ್ನು ಆ ಜಾಗಕ್ಕೆ ಹಾಕಿ. ಈಗಿರತಕ್ಕ ಸೂಪರಿಂಟೆಂಡೆಂಟು 'I don't care, I will act according to the jail Manual' ಅನ್ನುವ ಒಂದು ಮಾತನ್ನು ಬಿಟ್ಟರೆ ಆತನಿಗೆ ಬೇರೆ ಮಾತೇ ಬರುವುದಿಲ್ಲ. ಇಂತಹ ವ್ಯಕ್ತಿಗಳನ್ನು ಜೈಲಿನ ಆಡಳಿತಕ್ಕೆ ಹಾಕಬೇಡಿ ಎಂದು ವಿನಯಪೂರ್ವಕವಾಗಿ ಹೇಳುತ್ತೇನೆ.

ಜೈಲಿನಲ್ಲಿ ಕಕ್ಕಸ್ಸನ್ನು ಡಬ್ಬಗಳನ್ನಿಟ್ಟು ಎತ್ತುವ ವ್ಯವಸ್ಥೆಯನ್ನು ತಪ್ಪಿಸಿ, ಫ್ಲಷ್‌ಔಟ್ ಸಿಸ್ಟಂ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಖಂಡಿತವಾಗಿಯೂ ಮಾನವೀಯತೆಯ ದೃಷ್ಟಿಯಿಂದ ಅದು ಒಳ್ಳೆಯದಲ್ಲ ಎಂದು ಹೇಳುತ್ತೇನೆ.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೋಡುತ್ತಾ ಇದ್ದೇವೆ, ದಿನಬೆಳಗಾದರೆ 11 ಗಂಟೆಗೆ ದೊಡ್ಡ ಕ್ಯೂ ನಿಂತಿರುತ್ತದೆ. ಇದರಿಂದ ಎಷ್ಟು ಮಟ್ಟಿಗೆ ಅಲ್ಲಿ ಅವ್ಯವಸ್ಥೆ ಇದೆ ಎನ್ನುವುದು ಗೊತ್ತಾ ಗುತ್ತದೆ. 3–4 ವರ್ಷದಿಂದ ಕೊಟ್ಟ ಅರ್ಜಿಗಳು ಹಾಗೆಯೇ ಇರುತ್ತವೆ. ಅದಕ್ಕೆ ಬೇಕಾದಂತಹ ಗ್ರೀಸ್ ಉಪಯೋಗಿಸಿದರೆ ಎರಡು ಮೂರು ತಿಂಗಳಿನಲ್ಲೇ ಅವನ ರಿಕಾರ್ಡ್‌ಗೆ ಬೆಲೆ ಬರುತ್ತದೆ ಎಂದು ಹೇಳುತ್ತಾರೆ, ಇದರ ಬಗ್ಗೆ ಸಾಕಾದಷ್ಟು ಆಸಕ್ತಿ ವಹಿಸದಿದ್ದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್

ಇದ್ದೂ ಕೂಡ ದಂಡ ಎಂಬ ಭಾವನೆ ಜನರಲ್ಲಿ ಇದೆ. ಆ ಭಾವನೆ ಹೋಗುವುದಕ್ಕೆ ಆದಷ್ಟು ಬೇಗ ಅವಕಾಶ ಮಾಡಿಕೊಡಬೇಕು.

ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಾಧ್ಯವಾದಷ್ಟೂ ಅವನ ಯೋಗ್ಯತೆ ನೋಡಿ ಆಪ್ಟಿಟ್ಯೂಡ್ ನೋಡಿ ಸೀಟ್ ಹಂಚುವುದಕ್ಕೆ ಸಾಕಾದಷ್ಟು ಏರ್ಪಾಡು ಮಾಡಬೇಕು. ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ ಎಂದು ಗೊತ್ತು. ಆದರೂ ಕೂಡ ಇನ್ನೂ ಸ್ವಲ್ಪ ನ್ಯಾಯವಾಗಿ ಅಲ್ಲಿ ಸೀಟ್ಸ್‌ನ್ನು ಹಂಚಲು ಸಾಧ್ಯವಾದಷ್ಟೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಎಮರ್ಜೆನ್ಸಿಗೂ ಲೋಕಲ್‌ಬಾಡೀಸ್ ಎಲೆಕ್ಷನ್‌ಗೂ ಏನು ಸಂಬಂಧ? ಸೈನಿಕರನ್ನು ರಿಕ್ರೂಟ್ ಮಾಡಿಕೊಳ್ಳುವುದಕ್ಕೆ ಬೇಕಾದರೆ ಅದನ್ನು ಇಟ್ಟುಕೊಳ್ಳಿ. ಲೋಕಲ್ ಬಾಡೀಸ್ ಎಲೆಕ್ಷನ್‌ಗೆ ಅದು ಬೇಕಾಗಿಲ್ಲ ಆದಷ್ಟು ಬೇಗ ಅದನ್ನು ತೆಗೆದುಹಾಕಿ ಎಂದು ಹೇಳಿ ಐದು ನಿಮಿಷ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ಪೋಲೀಸ್, ಬಂದೀಖಾನೆ ವಗೈರೆ ಡಿಮ್ಯಾಂಡುಗಳ ವಿಚಾರದಲ್ಲಿ ಕೆಲವು ಸಲಹೆಗಳನ್ನು ಸರ್ಕಾರದವರಿಗೆ ಕೊಡುವುದಕ್ಕೆ ನಾನು ತಮ್ಮ ಮುಂದೆ ನಿಂತಿದ್ದೇನೆ. ಸ್ವಾಮಿ, ಈಗಾಗಲೇ ನನ್ನ ಮಾನ್ಯ ಸ್ನೇಹಿತರು ಅನೇಕರು ಈ ಇಲಾಖೆಯ ವಿಚಾರದಲ್ಲಿ ಮಾತನಾಡಿರುವುದನ್ನು ನಾನು ಕೇಳಿದ್ದೇನೆ ಮತ್ತು ತಮಗೂ ಗೊತ್ತಿದೆ. ಈ ಇಲಾಖೆ ಈಗಿನ ಕಾಲಕ್ಕೆ ಅನುಗುಣವಾಗಿ ಇನ್ನೂ ಸಂಪೂರ್ಣ ಬಂದೋಬಸ್ತು ಆಗಬೇಕಾದ ಅಗತ್ಯ ಇದೆ ಎಂದು ನಾನಾದರೂ ಭಾವಿಸಿದ್ದೇನೆ. ಬಡಬಗ್ಗರ ಸಂಖ್ಯೆ ದಿನದಿನಕ್ಕೆ ಜಾಸ್ತಿಯಾಗುತ್ತಿರುವ ಈ ಕಾಲದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕಳ್ಳತನದಿಂದ ಧಾನ್ಯಗಳ ಕಟಾವು ಮಾಡುವುದು ನಡೆಯುತ್ತಿದೆ. ಇದಕ್ಕೆ ಪೂರ್ಣ ಬಂದೋಬಸ್ತು ಆಗದಿದ್ದ ಪಕ್ಷದಲ್ಲಿ ರೈತ ತನ್ನ ಜಮೀನನ್ನು ಉಳುಮೆ ಮಾಡಿ ತನ್ಮೂಲಕ ಜೀವನ ಮಾಡತಕ್ಕ ಒಂದು ಅವಕಾಶ ತುಂಬಾ ಕಷ್ಟವಾಗುತ್ತದೆ. ಅದನ್ನು ಸರ್ಕಾರದ ಈ ಇಲಾಖೆಯವರು ಪೂರ್ಣವಾಗಿ ತಡೆಯುವುದಕ್ಕೆ ಪ್ರಯತ್ನ ಮಾಡಬೇಕು. ತಾಲ್ಲೂಕಿಗೆ ಒಬ್ಬೊಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಇರಬೇಕಾದ್ದು ಅಗತ್ಯ. ಮಾಗಡಿ ತಾಲ್ಲೂಕು ಆರು ಹೋಬಳಿಯಿಂದ ಒಳಗೊಂಡು ಎರಡು ಲಕ್ಷ ಪ್ರಜಾ ಸಂಖ್ಯೆ ಇರತಕ್ಕ ಕ್ಷೇತ್ರವಾಗಿದೆ. ಇದನ್ನು ಅನೇಕ ಸಾರಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಒಬ್ಬ ಪೋಲೀಸ್ ಸಬ್‌ಇನ್‌ಸ್ಪೆಕ್ಟರು ಅಲ್ಲಿರಬೇಕಾದ್ದು ಅಗತ್ಯ ಎಂದು. ಹಿಂದೆ ಇದ್ದಂಥ ಐ.ಜಿ.ಪಿ. ಸಲಹೆ ಮಾಡಿರುವ ಪ್ರಕಾರ ಹಿಂದೆ ಇದ್ದಂಥ ಸರ್ಕಾರ ಎರಡು ತಾಲ್ಲೂಕುಗಳಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರು ಇರಬೇಕೆಂದು ಮಾಡಿತು. 250 ರೂಪಾಯಿ ಒಬ್ಬ ಸಬ್‌ಇನ್‌ಸ್ಪೆಕ್ಟರಿಗೆ ಕೊಡತಕ್ಕ ಸಂಬಳ ಸರ್ಕಾರದವರಿಗೆ ಕಡಿಮೆಯಾದರೂ ಪರವಾಗಿಲ್ಲ ಅದರಿಂದ ಸರ್ಕಾರಕ್ಕೇನೂ ಹೆಚ್ಚು ಲಾಭ ವಾಗುವುದಿಲ್ಲ. ಅನೇಕ ಕಾರಣಗಳಿಂದ ಹಣ ಹಾಳಾಗತಕ್ಕ ಈ ಸಂದರ್ಭದಲ್ಲಿ ಪೋಲೀಸರಿಂದ ಜನತೆಗೆ ಆಗಬೇಕಾದ ಸೌಲಭ್ಯ, ಬಂದೋಬಸ್ತು ಎಲ್ಲಾ ಸನ್ನಿವೇಶದಲ್ಲೂ ಅಗತ್ಯ ಎನ್ನುವುದನ್ನು ನಾನು ಏನೂ ಪುನಃ ಒತ್ತಿ ಹೇಳಬೇಕಾದ್ದಿಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಆದ್ದರಿಂದ ಮಾಗಡಿ ತಾಲ್ಲೂಕಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಅಗತ್ಯವಾಗಿ ಇರಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರು ಇರಬೇಕಾದ್ದು ಅಗತ್ಯ, ಕೋರ್ಟು ಕಚೇರಿಗಳಿಗೆ ಹೋಗಬೇಕಾಗುತ್ತದೆ, ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ಸ್ ತೆಗೆದುಕೊಳ್ಳುವವರು ಇರಬೇಕಾಗುತ್ತದೆ, ಈ ಇಲಾಖೆಯವರ ಲಾಭ ಜನರಿಗೆ ಸಿಕ್ಕದಿದ್ದರೆ ಹೆಚ್ಚು ತೊಂದರೆಯಾಗುವ ಪರಿಸ್ಥಿತಿಯುಂಟು. ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಇರಬೇಕಾದ್ದು ಅಗತ್ಯ ಎಂಬುದನ್ನು ಸರ್ಕಾರದವರಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತಾ ಇದ್ದೇನೆ.

ಪೋಲೀಸ್ ನೌಕರರನ್ನು ತಾವು ತೆಗೆದುಕೊಳ್ಳುವಾಗ ಇನ್ನು ಮೇಲಾದರೂ ಕೂಡ ವಿದ್ಯಾವಂತರಾಗಿರತಕ್ಕ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಕನಿಷ್ಟಪಕ್ಷ ಪ್ರೌಢಶಾಲೆಯ ವಿದ್ಯಾಭ್ಯಾಸ ಇರಬೇಕಾದ್ದು ಅಗತ್ಯ ಎಂದು ಕಡ್ಡಾಯ ಮಾಡಬೇಕು, ಇಲ್ಲದೇ ಹೋದರೆ ಜನರಿಗೆ ಅವರಿಂದ ಸಿಕ್ಕಬೇಕಾದ ಅನುಕೂಲ ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ. ಅವರಿಗೆ ಬರುತ್ತಾ ಇರತಕ್ಕ ವೇತನ ಬಹಳ ಕಡಿಮೆ. ಪೋಲೀಸ್ ಕಾನ್‌ಸ್ಟೇಬಲ್ಲಿನ ವೇತನ ಬಹಳ ಕಡಿಮೆ. ಈ ವಿಚಾರವನ್ನು ಇದೇ ಮಾನ್ಯ ಸಭೆಯಲ್ಲಿ ಅನೇಕರು ಅನೇಕಾವರ್ತಿ ಹೇಳಿದ್ದೇವೆ. ಈ ಆಹಾರಾಭಾವದ ಕಾಲದಲ್ಲಿ ಅವರು ಅವರ ಮಕ್ಕಳುಮರಿಗಳನ್ನು ಸಾಕಿ ಸರಿಯಾದ ರೀತಿಯಲ್ಲಿ ದಕ್ಷತೆಯಿಂದ ಸರ್ಕಾರಿ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದ್ದರೆ ಅವರಿಗೆ ಕೊಡತಕ್ಕ ವೇತನಗಳನ್ನು ತತ್ರಾಪಿ ಪೋಲೀಸ್ ಕಾನ್‌ಸ್ಟೇಬಲ್‌ಗಳ ವೇತನವನ್ನು ಉತ್ತಮಪಡಿಸಬೇಕಾದ್ದು ಅತ್ಯಗತ್ಯ. ಪೋಲೀಸ್ ಇಲಾಖೆಯ ಕೆಲಸ ಕಾರ್ಯಗಳು ಬಹಳ ಭದ್ರತೆಯಿಂದ ಇರಬೇಕಾದರೆ ಇವರ ವೇತನವನ್ನು ಇನ್ನೂ ಕೊಂಚಮಟ್ಟಿಗೆ

(ಶ್ರೀ ಸೋಲೂರು ಸಿದ್ದಪ್ಪ)

ಉತ್ತಮಪಡಿಸಬೇಕಾದ್ದು ಅತ್ಯಗತ್ಯ. ನಾವು ಈ ದಿವಸ ಒಬ್ಬ ಗ್ರಾಮಸೇವಕನಿಗೆ, ಕೊಡತಕ್ಕ ಸಂಬಳವನ್ನೂ ಕೂಡ ಕೊಡುತ್ತಿಲ್ಲ. ಆದುದರಿಂದ ಸರ್ಕಾರದವರು ಇತ್ತಗಡೆಗೆ ತಮ್ಮ ಗಮನವನ್ನು ಹರಿಸಬೇಕಾದ್ದು ಅತ್ಯವಶ್ಯಕ ಎಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಪೋಲೀಸ್ ಸ್ಟೇಷನ್ ಮತ್ತು ಜೈಲುಗಳು ತಾಲ್ಲೂಕ್ ಕಛೇರಿಯ ಕಟ್ಟಡದಲ್ಲಿ ಸೇರಿವೆ. ಇದರಿಂದ ರೆವಿನ್ಯೂ ಇಲಾಖೆಗಳ ಕೆಲಸಕ್ಕೂ ಬಹಳ ತೊಂದರೆ ಮತ್ತು ಪೋಲೀಸ್ ಕೇಸುಗಳ ತನಿಖೆಗೂ ಬಹಳ ತೊಂದರೆಯಾಗಿದೆ. ಆದುದರಿಂದ ಪೋಲೀಸ್ ಇಲಾಖೆಗೇ ಸರಿಯಾದ ಪ್ರತ್ಯೇಕವಾದ ಕಟ್ಟಡಗಳನ್ನು ನಿರ್ಮಾಣ ಮಾಡಬೇಕಾದ್ದು ಅವಶ್ಯಕ ವಾಗಿದೆ. ಇನ್ನು ಇದೇ ರೀತಿಯಾಗಿ ಜೈಲುಗಳಲ್ಲೂ ಸಹಾ ಅವರವರ ಮತಪದ್ಧತಿಗನುಸಾರವಾಗಿ ಅನುಕೂಲವಾಗುವಂತೆ ಕಟ್ಟಡಗಳನ್ನು ಕಟ್ಟಸಬೇಕೆಂದು ಇದಕ್ಕೆ ಸರಿಯಾದ ವ್ಯವಸ್ಥೆ ಇರುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ದನ ಕುರಿಗಳ ಕಳವು ಜಾಸ್ತಿಯಾಗುತ್ತಿದೆ. ಸಾವಿರಾರು ರೂಪಾಯಿಗಳ ಬೆಲೆ ಬಾಳತಕ್ಕ ದನಗಳನ್ನು ಕಳ್ಳರು ಕೇವಲ ಮಾಂಸದ ಆಸೆಗಾಗಿ ಇಲ್ಲವೆ ಚರ್ಮದ ಆಸೆಗಾಗಿ ಕಳವು ಮಾಡುತ್ತಿದ್ದಾರೆ. ಈ ರೀತಿಯ ಒಂದು ವರ್ತಮಾನ ಸಂಸ್ಥಾನಾದ್ಯಂತ ಕೇಳಿಬರುತ್ತಿದೆ. ಇದನ್ನು ತಡೆಗಟ್ಟಲು ನಾನು ಒಂದು ಸಲಹೆ ಮಾಡುವುದೇನೆಂದರೆ :—ಕಳ್ಳತನದಲ್ಲಿ ಚರ್ಮವನ್ನು ಮಾರಾಟ ಮಾಡತಕ್ಕವರು ಚರ್ಮದ ಅಂಗಡಿಗಳಿಗೆ ಹೋಗುತ್ತಾರೆ. ಅಲ್ಲಿ ಹೀಗೆ ಚರ್ಮ ಮಾರಾಟಮಾಡಲು ಬರತಕ್ಕ ಜನರಿಂದ ಆ ರಾಸುಗಳ ಚಹರೆ ಕೊಡದ ವಿನಾ ಆ ಚರ್ಮವನ್ನು ಅವರು ಕೊಂಡುಕೊಳ್ಳದ ಹಾಗೆ ನಿರ್ಬಂಧಮಾಡಬೇಕು. ಅದನ್ನು ಅವರು ಪಾಲಿಸದಿದ್ದರೆ ಅಂಥ ಅಂಗಡಿಗಳ ಲೈಸೆನ್ಸನ್ನು ರದ್ದುಮಾಡುವಂತೆ ಮಾಡಿದರೆ ಆಗ ಈ ಕಳ್ಳತನಗಳು ಸ್ವಲ್ಪಮಟ್ಟಿಗಾದರೂ ಕಡಮೆಯಾಗಬಹುದು ಅನ್ನುವುದು ನನ್ನ ಅಭಿಪ್ರಾಯ. ಈ ದನ ಕುರಿಗಳ ಕಳ್ಳತನದಿಂದ ರೈತರಿಗೆ ಈ ದಿವಸ ಬಹಳ ತೊಂದರೆಯಾಗುತ್ತದೆ. ಜಾನುವಾರುಗಳ ಬೆಲೆಯಾದರೋ ವಿಪರೀತ ಜಾಸ್ತಿಯಾಗಿದೆ. ಆದುದ ರಿಂದ ಈ ಕಳ್ಳತನವನ್ನು ತಡೆಯಲು ಸಂಪೂರ್ಣವಾಗಿ ಬಂದೋಬಸ್ತು ಮಾಡಬೇಕೆಂದು ಕೇಳಿಕೊಳ್ಳು ತ್ತೇನೆ.

ಇನ್ನು ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಜೈಲು ಊರಿನ ಮಧ್ಯಭಾಗದಲ್ಲಿದೆ. ಇದನ್ನು ಬೇರೆ ಕಡೆಗೆ ಬದಲಾಯಿಸುತ್ತೇವೆಂದು ಹೇಳಿದ್ದು 1955 ರಲ್ಲಿ. ಆದರೆ ಇದನ್ನು ಇಲ್ಲಿಗೆ 12 ವರ್ಷಗಳು ಕಳೆದಿದ್ದರೂ ಇನ್ನೂ ಬದಲಾಯಿಸಿಲ್ಲ. ಕೂಡಲೇ ಇದನ್ನು ಬದಲಾಯಿಸಿ ಬೇರೊಂದು ಸ್ಥಳದಲ್ಲಿ ಒಂದು ಭದ್ರವಾದ ಹೊಸ ಜೈಲನ್ನು ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. ಆದರೆ ನಾನು ಇಲ್ಲಿ ಮಾತನಾಡಬೇಕಾಗಿದ್ದ ವಿಚಾರಗಳು ಇನ್ನೂ ಬಹಳವಾಗಿದ್ದವು. ಆದರೆ ಮಾನ್ಯ ಅಧ್ಯಕ್ಷರು ಬೆಲ್ಲನ್ನು ಹೊಡೆಯುವುದರ ಮೂಲಕ ನನ್ನ ಭಾಷಣವನ್ನು ಮುಗಿಸುವಂತೆ ನನಗೆ ಸೂಚನೆ ಮಾಡು ತ್ತಿದ್ದಾರೆ. ನನಗೆ ಅವರ ಮನಸ್ಸಿಗೆ ನೋವುಂಟುಮಾಡುವುದಕ್ಕೆ ಇಷ್ಟವಿಲ್ಲ. ಇಲ್ಲಿಯವರೆಗೂ ನಾನು ಹೇಳಿರತಕ್ಕ ವಿಷಯಗಳನ್ನೂ ಮತ್ತು ಈ ಹಿಂದೆ ಮಾತನಾಡಿದ ಶ್ರೀ ಪ್ರಭಾಕರ್ ಅವರು ಹೇಳಿರತಕ್ಕ ವಿಷಯಗಳನ್ನೂ ಮತ್ತು ನಾವು ಕೊಟ್ಟಿರತಕ್ಕ ಸಲಹೆಗಳನ್ನೂ ಸರ್ಕಾರದವರು ತಮ್ಮ ಗಮನಕ್ಕೆ ತಂದುಕೊಂಡು ಕಾರ್ಯಗತ ಮಾಡಬೇಕು. ಇಲ್ಲಿ ನಾವುಗಳು ಸೂಚನೆ ಮಾಡಿರತಕ್ಕ ಎಲ್ಲಾ ಸಲಹೆಗಳನ್ನೂ ಮಾನ್ಯ ಮಂತ್ರಿಗಳು ತಮ್ಮ ಚಿತ್ತಕ್ಕೆ ತೆಗೆದುಕೊಂಡು ಅವುಗಳನ್ನು ಬದ್ಧ ರೀತಿಯಲ್ಲಿ ಕಾರ್ಯಗತ ಮಾಡಬೇಕು. ಇನ್ನು ದೇಶದಲ್ಲಿ ಈ ದಿವಸ ಐ.ಜಿ.ಪಿ. ಗಳಾಗಿರತಕ್ಕವರೂ ಮತ್ತು ಮಾನ್ಯ ಖಾದರಾಲಿಯವರು ದೇಶದ ಭದ್ರತೆಯ ಹೊಣೆಗಾರಿಕೆಯನ್ನು ಹೊತ್ತು ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಇಂಥಾ ಅಧಿಕಾರಿಗಳು ದೊರೆಯುವುದು ದುರ್ಲಭ. ನಾವು ಈ ಇಲಾಖೆಯ ವಿಚಾರದಲ್ಲಿ ಇಲ್ಲಿಯವರೆಗೂ ಹೇಳಿರತಕ್ಕದ್ದನ್ನು ಮಾನ್ಯ ಮಂತ್ರಿಗಳು ಕಾರ್ಯಗತ ಮಾಡಬೇಕು, ಹಾಗೆ ಮಾಡದಿದ್ದರೆ ನಾಳೆ ನಾವು ಚುನಾವಣೆಗೆ ಜನರ ಮುಂದೆ ಹೋದಾಗ ಬಹಳ ಕಷ್ಟಕ್ಕೆ ಸಿಕ್ಕಬೇಕಾಗು ವುದು. ಅದಕ್ಕೆ ಅವಕಾಶಕೊಡದಂತೆ ಕೆಲಸಗಳನ್ನು ಮಾಡುತ್ತಾರೆಂದು ನಂಬಿದ್ದೇನೆ. ಅವರವರ ಪೋರ್ಟ್‌ಫೋಲಿಯೋಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯಾಯ ಮಂತ್ರಿಗಳು ಗಮನಿಸಿ ಮಾಡುತ್ತಾರೆಂದು ನಂಬಿದ್ದೇನೆ. ಈ ದಿವಸ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

ಶ್ರೀ ಬಿ.ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಮಾನ್ಯ ಸಭಾಪತಿಗಳೇ, ಈಗಾಗಲೇ ಸಭೆಯಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ಪೋಲೀಸ್ ಇಲಾಖೆಯ ವಿಚಾರವಾಗಿ ಬಹಳಮಟ್ಟಿಗೆ ಅನೇ ಕರು ಟೀಕೆಗಳನ್ನು ಮಾಡಿದ್ದಾರೆ. ಆದರೆ ಪೋಲೀಸ್ ಇಲಾಖೆಯಲ್ಲಿ ಎಷ್ಟೋ ಜನ ಉತ್ತಮರೂ

ಇದ್ದಾರೆ. ಅಂಥವರೆಲ್ಲರಿಗೂ ನನ್ನ ಅಭಿವಂದನೆಗಳು. ಆದರೆ ಇಂಥ ಪ್ರಾಮಾಣಿಕರ ಸಂಖ್ಯೆ ಬಹಳ ವಿರಳ. ಈ ಇಲಾಖೆಯಲ್ಲಿ ಅಪ್ರಾಮಾಣಿಕರ ಸಂಖ್ಯೆಯೇ ಅಧಿಕವಾಗಿರುವುದರಿಂದ ಈ ಇಲಾಖೆಯು ಒಂದು ಹೆಚ್ಚಿನ ಟೀಕೆಗಳಿಗೆ ಗುರಿಯಾಗಬೇಕಾಗಿದೆ. ಈ ವಿಚಾರ ಸರ್ಕಾರದವರಿಗೂ ಮನವರಿಕೆಯಾಗಿದೆ. ಈ ದಿವಸ ಸರ್ಕಾರದವರು ಕೈಗೊಂಡಿರತಕ್ಕ ಆ ಪವಿತ್ರ ಪಾನನಿರೋಧ ನೀತಿ ವೈಫಲ್ಯವಾಗಿರುವುದನ್ನು ಸರ್ಕಾರದವರೇ ಒಪ್ಪಿಕೊಂಡಿರುವಾಗ ಇದಕ್ಕೆ ಹೆಚ್ಚಿನ ಉದಾಹರಣೆಗಳೇ ಬೇಡ. ಇದಕ್ಕಿಂತಲೂ ಇನ್ನೂ ಹೆಚ್ಚಿನ ಟೀಕೆಗಳನ್ನು ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ದಿವಸ ಮಾನ್ಯ ಸಚಿವರಿಗೂ ಗೊತ್ತಿರುವಹಾಗೆ ಅನೇಕ ಪೋಲೀಸ್ ಸ್ಟೇಷನ್‌ಗಳಲ್ಲಿ "We respect those who respect law" ಹೀಗೆ ಒಂದೊಂದು ಬೋರ್ಡುಗಳನ್ನು ಹಾಕಿದ್ದಾರೆ. ಅದರಲ್ಲಿ ಏನು ಬರೆದಿದ್ದರೋ ಅದರಂತೆ ಅದನ್ನು ಕಾರ್ಯರೂಪಕ್ಕೆ ತಂದರೆ ದೇಶದಲ್ಲಿರತಕ್ಕ ಸಜ್ಜನರಿಗೆ ಈ ಪೋಲೀಸ್ ಇಲಾಖೆಯು ಬಗ್ಗೆ ಒಂದು ನಂಬಿಕೆ ಬರುತ್ತದೆ, ಆರೀತಿ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಜೈಲುಗಳ ವಿಚಾರಕ್ಕೆ ಬಂದರೆ, ಕಳ್ಳತನ ಮಾಡತಕ್ಕವರಲ್ಲಿ ಕಸುಬುದಾರಿ ಕಳ್ಳತನ ಮಾಡತಕ್ಕವರದೇ ಒಂದು ವರ್ಗವಿದೆ. ಇನ್ನು ಕೆಲವರು ಹೊಟ್ಟೆಗಿಲ್ಲದೆ, ಜೀವನಕ್ಕೇನೂ ಆಧಾರವಿಲ್ಲದೆ ಇರತಕ್ಕವರು ಕಳ್ಳತನವನ್ನು ಮಾಡುತ್ತಾರೆ. ಈ ಎರಡನೆ ವರ್ಗದವರನ್ನು ಪ್ರಯತ್ನಪಟ್ಟರೆ ಪರಿವರ್ತನೆ ಮಾಡಬಹುದು. ಇನ್ನು ಯಾರು ಕಸುಬುದಾರಿ ಕಳ್ಳರಿದ್ದಾರೋ ಅಂಥವರಿಗೆ ಉಗ್ರ ಶಿಕ್ಷೆಯನ್ನು ವಿಧಿಸಲೇಬೇಕಾಗುತ್ತದೆ. ಏನೋ ಒಂದು ಅನಿವಾರ್ಯದಿಂದ ಅಥವಾ ಒಂದು ಸಹವಾಸದೋಷದಿಂದ ತಪ್ಪು ಮಾಡತಕ್ಕವರನ್ನು ಪರಿವರ್ತನೆ ಮಾಡಬಹುದು. ಅಂಥ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ಇದನ್ನು ನಡೆಸಬೇಕೆಂತಲೇ ಈ ದಿವಸ ಈ ತಪ್ಪಿತಸ್ಥರನ್ನು ಪುನಃ ತಪ್ಪುಮಾಡದಂತೆ ಅವರನ್ನು ಪರಿವರ್ತನೆ ಮಾಡಲು ದೇಶದ ನಾನಾ ಭಾಗಗಳಲ್ಲಿ ಚಿಕ್ಕವಯಸ್ಸಿನವರಿಗೆ ರಿಫಾರ್ಮೇಟರಿ ಸ್ಕೂಲುಗಳನ್ನೂ ಬಾರ್‌ಸ್ಟಲ್ ಸ್ಕೂಲುಗಳನ್ನೂ ಮಾಡಿದ್ದಾರೆ. ಅವುಗಳು ತಮ್ಮ ಕೆಲಸಕಾರ್ಯಗಳನ್ನು ಸರಿಯಾಗಿ ನಡೆಸುವಂತೆ ಮಾಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಲೇಬರ್ ವಿಚಾರಕ್ಕೆ ಬಂದರೆ, ದೇಶದಲ್ಲಿ ಈ ದಿವಸ ಎರಡು ವಿಧವಾದ ಲೇಬರರುಗಳಿದ್ದಾರೆ. ಒಂದು ವರ್ಗದ ಲೇಬರ್‌ಗಳು ಲೇಬರ್ ಆಕ್ಟಿನ ಪರಿಮಿತಿಯಲ್ಲಿ ಬರುತ್ತಾರೆ. ಇಂಥ ಲೇಬರ್‌ಗಳೆಂದರೆ ಅವರು ಮಿಲ್ಲುಗಳಲ್ಲೂ, ಪ್ಲಾಂಟೇಷನ್‌ಗಳಲ್ಲೂ ಕೆಲಸ ಮಾಡತಕ್ಕವರಾಗಿದ್ದಾರೆ. ಇವರ ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ಉತ್ತಮಗೊಂಡಿದ್ದರೂ ಇನ್ನೂ ಉತ್ತಮಗೊಳ್ಳಬೇಕೆಂದು ಹೇಳುತ್ತೇನೆ. ಅವರಿಗೆ ತಮ್ಮ ಕೆಲಸದಲ್ಲಿ ಜಿಗುಪ್ಸೆ ಉಂಟಾದಂತೆ ಮಾಡಲು ಅವರಿಗಿನ್ನೂ ಹೆಚ್ಚಿನ ಸೌಲಭ್ಯಗಳು ದೊರೆಯಬೇಕಾದ್ದು ಅಗತ್ಯ. ಆ ಮಿಲ್ ಮಾಲೀಕರು ಒದಗಿಸಬೇಕೆಂದು ಅವರು ಒಪ್ಪಿರತಕ್ಕ ಸೌಲಭ್ಯಗಳೇನಿದೆ ಅವುಗಳನ್ನು ಆ ಸೆಂಟ್ರಲ್ ಲೇಬರ್ ಕಮಿಟಿಯ ನಿಯಮಗಳಿಗೆ ಅನುಸಾರವಾಗಿ ದೊರೆಯುವಂತೆ ವ್ಯವಸ್ಥೆಮಾಡಬೇಕು. ಇನ್ನೊಂದು ತರಗತಿಯ ಲೇಬರರ್‌ಗಳು ಇದ್ದಾರೆ. ಅವರು ಅನ್‌ಆರ್ಗನೈಜ್ಡ್ ಲೇಬರ್ಸ್; ಅಂದರೆ ವ್ಯವಸಾಯದ ಕಸಬನ್ನು ಅವಲಂಬಿಸಿರತಕ್ಕ ಕೂಲಿಗಾರರ ವರ್ಗ. ಈ ಕಾರ್ಮಿಕ ವರ್ಗದ ಬಾಳೇನಿದೆ ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಈ ವರ್ಗದಲ್ಲಿ ಸುಮಾರು 20 ಲಕ್ಷ ಜನರಿದ್ದಾರೆ. ಇವರಿಗೆ ರಕ್ಷಕರಾರೂ ಇರುವುದಿಲ್ಲ. ಅಂದರೆ ಆ ದೇವರೇ, ಇವರ ರಕ್ಷಕ. ಆದರೆ ಆ ದೇವರು ಈ ದಿವಸ ಕಣ್ಣುಮುಚ್ಚಿ ಕುಳಿತ್ತಿದ್ದಾನೆ. ಕೆಲವರಿಗೆ ದಿನಕ್ಕೆ ಒಂದು ರೂಪಾಯಿನ ಕೂಲಿ ಸಹಾ ಸಿಕ್ಕುವುದಿಲ್ಲ. ತತ್ರಾಪಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ಶ್ರೀನಿವಾಸಪುರದ ತಾಲ್ಲೂಕಿನಲ್ಲಿ ಮಳೆಯಿಲ್ಲದೆ ವ್ಯವಸಾಯವೇ ನಡೆಯದಿರುವಾಗ ಇನ್ನು ವ್ಯವಸಾಯದ ಕಸಬಿನಲ್ಲಿ ಕೂಲಿ ಮಾಡತಕ್ಕ ಜನರಿಗೆ ಕೂಲಿ ಕೆಲಸಗಳು ಎಲ್ಲಿಂದ ಬರಬೇಕು? ಇವರ ಜೀವನದ ಕಷ್ಟವನ್ನು ಹೇಳತೀರದಾಗಿದೆ. ಈ ದಿವಸ ನಾವು ಅವರ ಮಕ್ಕಳನ್ನೂ ಮತ್ತು ನಮ್ಮ ಮಕ್ಕಳನ್ನೂ ಹೋಲಿಸಿ ನೋಡಿದ್ದೇ ಆದರೆ ನಾವೆಲ್ಲರು ಒಂದೇ ಮಾನವವರ್ಗಕ್ಕೆ ಸೇರಿದವರೆಂದಾಗಲಿ ಅಥವಾ ಈ ಪ್ರಜಾಗಣತಂತ್ರ ರಾಜ್ಯಾಡಳಿತದಲ್ಲಿ ನಾವೆಲ್ಲರೂ ಸಮಾಜವಾದವನ್ನು ತರುತ್ತೇವೆಂದು ಹೇಳಿಕೊಳ್ಳುತ್ತಿರುವ ಜನರು ಆ ಬಡವರ ಉದ್ಧಾರಕ್ಕಾಗಿ ಏನು ಕಾರ್ಯಕ್ರಮ ಕೈಗೊಂಡಿದ್ದೇವೆ ಎಂಬುದನ್ನು ಯಾರಾದರೂ ಕೇಳಿದರೆ ಅದಕ್ಕೆ ನಾನು ಶರಣಹೊಡೆಯಬೇಕಾಗುವುದು. ಅವರ ಉದ್ಧಾರ ಏನೇನೂ ಆಗಿಲ್ಲ. ಇನ್ನು 1957 ರಲ್ಲಿ ಒಂದು ಅಗ್ರಿಕಲ್ಚರಲ್ ಮಿನಿಮಂ ವೇಜಸ್ ಆಕ್ಟ್ ಎಂತ ಮಾಡಿದರು. ಆ ಕಾನೂನನ್ನು ಮಾಡುವಾಗ ನಾನು ಆ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದೆ. ಅದು ಇತ್ತೀಚೆಗೆ ಕಾನೂನೂ ಆಯಿತು. ಅದನ್ನು ಅಚ್ಚು ಹಾಕಿಸಿ ಈಗ ಲೈಬ್ರರಿಯಲ್ಲಿ ಭದ್ರವಾಗಿಟ್ಟಿದ್ದಾರೆ. ಇದು ಬಹಳ ಅನ್ಯಾಯ. ಆದರೆ ಅನೇಕ ಮಾನ್ಯ ಸದಸ್ಯರುಗಳು ಆ ನಕ್ಸಲ್‌ಬಾರಿ ಮತ್ತೊಂದು ಮಗದೊಂದು ಅಂತ ಅನೇಕವಿಷಯಗಳನ್ನು ಮಾತನಾಡಿದರು. ಅದಕ್ಕೆಲ್ಲಾ ಮುಖ್ಯಕಾರಣ ಕಾಂಗ್ರೆಸ್ಸಿ

(ಶ್ರೀ ಟಿ. ಎಲ್. ನಾರಾಯಣಸ್ವಾಮಿ)

ನವರೇ ಎಂದು ನಾನು ಹೇಳುತ್ತೇನೆ. ಕಾಂಗ್ರೆಸ್ಸಿನವರೇ ಈ ದಿವಸ ಕಮ್ಯುನಿಷ್ಟರನ್ನು ಆಹ್ವಾನಿಸುತ್ತಿದ್ದಾರೆ. ಇವರು ಕೈಗೊಂಡಿರತಕ್ಕ ಕಳೆದ 3 ಪಂಚವಾರ್ಷಿಕ ಯೋಜನೆಗಳಲ್ಲಿ ಬಡವರ ಉದ್ಧಾರವೇನೂ ಆಗಿರುವುದಿಲ್ಲ. ಇಷ್ಟೊಂದು ಉದಾಸೀನ ಮಾಡಿ ನಿಜವಾಗಿ ಕಮ್ಯುನಿಸಂ ಅನ್ನು ಆಹ್ವಾನಿಸುತ್ತಿದ್ದಾರೆ. ಪರಿಸ್ಥಿತಿ ಉಲ್ಬಣಕ್ಕೆ ಬರುವುದಕ್ಕೆ ಮೊದಲು ಈ ವಿಚಾರಗಳನ್ನು ದೀರ್ಘವಾಗಿ ಪರಿಶೀಲಿಸಿ ಬಾಕಿ ಜನರಂತೆ ಅವರನ್ನೂ ಕೂಡ ಸೌಕರ್ಯವಂತರನ್ನಾಗಿ ಮಾಡಲು ತ್ವರಿತವಾಗಿ ತಕ್ಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

4-00 P.M.

ಇನ್ನು ಈ ದೇಶದಲ್ಲಿ ವಿದ್ಯಾವಂತರ ಮತ್ತು ಅವಿದ್ಯಾವಂತರ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿದೆ. ಅದಕ್ಕಾಗಿ ತ್ವರಿತವಾಗಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಎಲ್ಲಾಕಡೆಗೂ ವಿಸ್ತರಿಸಿದರೆ ಖಂಡಿತವಾಗಿ ಈ ನಿರುದ್ಯೋಗ ನಿವಾರಣೆಯಾಗುತ್ತದೆ. ನಮ್ಮ ದೇಶದಲ್ಲಿ ದುರಾದೃಷ್ಟದಿಂದ ಎಲ್ಲಾ ಕೈಗಾರಿಕೆಗಳೂ ಬೆಂಗಳೂರು ಪಟ್ಟಣದಲ್ಲಿಯೇ ಸ್ಥಾಪನೆಯಾಗುತ್ತಿವೆ. ಎಲ್ಲಾಕಡೆಗಳಲ್ಲಿ ಅವು ಆಗುತ್ತಾ ಇಲ್ಲ. ಕೈಗಾರಿಕೆಯ ಇಲಾಖೆ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳೂ ಕೈಗಾರಿಕೆಯ ಇಲಾಖೆಯ ಮೇಲೆ ಒತ್ತಾಯ ಮಾಡಬೇಕು. ಆಗ ಅನೇಕರಿಗೆ ಉದ್ಯೋಗಸಿಗಲು ಅನುಕೂಲವಾಗುತ್ತದೆ. ಇಲ್ಲಿ 25 ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ. ಈ ವರ್ಷದಿಂದಲಾದರೂ ಪ್ರತಿ ತಾಲ್ಲೂಕಿನಲ್ಲಿಯೂ ದೊಡ್ಡ ದೊಡ್ಡ ಪ್ರಮಾಣಗಳಲ್ಲಿ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕು. ಅಲ್ಲಲ್ಲಿ ಆಕ್ಸಿಲರಿ ಯೂನಿಟ್ಟುಗಳನ್ನುಮಾಡಿ ಗೃಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಮ್ಮ ದೇಶದ ಜನಗಳಿಗೆ ಉದ್ಯೋಗಗಳನ್ನು ಒದಗಿಸುವುದಕ್ಕೆ ಸಹಕಾರಿಯಾಗುತ್ತದೆ. ಇದಕ್ಕಾಗಿ ಕೈಗಾರಿಕೆ ಕಾರ್ಖಾನೆಗಳಮೇಲೆ ಒತ್ತಾಯ ಹಾಕುತ್ತಿರಬೇಕು, ಎಂಬುದಾಗಿ ನಾನು ಸಂಬಂಧಪಟ್ಟ ಕೈಗಾರಿಕೆ ಮಂತ್ರಿಗಳಿಗೆ ಹೇಳುತ್ತೇನೆ. ಇಷ್ಟೇ ಅಲ್ಲದೆ ಕೈ ಕಸಬುಗಳನ್ನು ಮಕ್ಕಳಿಗೆ ಕಲಿಸಬೇಕು. ಆಗ ಈ ದೇಶದಲ್ಲಿ ಎಲ್ಲಾದರೂ ಹೋಗಿ ಜೀವನ ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ಮುಖ್ಯವಾಗಿ ಬೇಕಾದಷ್ಟು ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರುಗಳನ್ನು ತೆರೆಯಬೇಕು. ಶ್ರೀನಿವಾಸಪುರದಲ್ಲಿ ಇದಕ್ಕೆ ಅಭಾವ ಜಾಸ್ತಿಯಾಗಿದೆ. ನಾನು ಈ ಸರ್ಕಾರದಲ್ಲಿ ಸುಮಾರು ಮೂರು ವರ್ಷಗಳಿಂದಲೂ ಪ್ರಾರ್ಥನೆ ಮಾಡುತ್ತಿದ್ದೇನೆ. ಈಗಲೂ ಕೂಡ ಈ ಸರ್ಕಾರದಮುಂದೆ ನನ್ನ ಪ್ರಾರ್ಥನೆ ಇದೆ. ಆದ್ದರಿಂದ ದಯಮಾಡಿ ಅಲ್ಲೊಂದು ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರನ್ನು ಸ್ಥಾಪನೆ ಮಾಡಿದರೆ, ಅಲ್ಲಿನ ಬಡಮಕ್ಕಳು ಹಾಗೂ ಕೂಲಿ ಜನಗಳು ವಿದ್ಯೆಕಲಿತು ಜೀವನಮಾಡುವುದಕ್ಕೆ ಸಾಧ್ಯವಾಗುತ್ತದೆ.

ಕಡೆಯದಾಗಿ ಒಂದು ಪ್ರಾರ್ಥನೆ. ನಮ್ಮಲ್ಲಿರತಕ್ಕ ಎಂಪ್ಲಾಯ್‌ಮೆಂಟ್ ಎಕ್ಸ್ಚೇಂಜು ಆಫೀಸು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಎಲ್ಲಾ ಡಿಸ್ಟ್ರಿಕ್ಟ್ ಆಫೀಸುಗಳಲ್ಲಿಯೂ ಈ ಎಂಪ್ಲಾಯ್‌ಮೆಂಟ್ ಎಕ್ಸ್ಚೇಂಜು ಆಫೀಸುಗಳಿದ್ದರೆ, ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಎಂಪ್ಲಾಯ್‌ಮೆಂಟು ಎಕ್ಸ್ಚೇಂಜು ಆಫೀಸು ಕೆ.ಜಿ.ಎಫ್.ನಲ್ಲಿದೆ. ನಮ್ಮ ಜಿಲ್ಲೆಗೆ ಅದು ಕಡೆಯಭಾಗ. ಆರೀತಿ ಯಾವ ಊರಿನಲ್ಲಿಯೂ ಇಲ್ಲ. ಒಬ್ಬ ಝಾಡಮಾಲಿ ಕೆಲಸಕ್ಕೂ ಅರ್ಜಿಹಾಕಬೇಕಾದರೆ ಅರ್ಜಿ ರಿಜಿಸ್ಟ್ರೇಷನ್‌ಗಾಗಿ ಕೆ. ಜಿ. ಎಫ್. ಗೆ ಆತ ಹೋಗಬೇಕಾಗಿದೆ. ಆದ್ದರಿಂದ ಅದನ್ನು ಕೂಡಲೆ ಕೋಲಾರದ ಹೆಡ್ ಕ್ವಾರ್ಟರ್ಸ್‌ಗೆ ಬದಲಾಯಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸುಬ್ಬರಾವ್ ಹಲ್ಸನಾದ್ (ಬೈಂದೂರ್).—ಮಾನ್ಯ ಸಭಾಪತಿಗಳೇ, ಈಗ ಪೋಲೀಸ್ ಖಾತೆಯ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದು ಬಯಸುತ್ತೇನೆ.

ನಮ್ಮ ಕಾಂಗ್ರೆಸ್ ರಾಜ್ಯವು ಬಂದಲಾಗಾಯಿತು ನೋಡುತ್ತಾ ಇದ್ದೇನೆ. ಹಗಲು ಖೂನಿಗಳು, ದರೋಡೆಗಳು ವಗೈರೆ ಬಹಳ ಹೆಚ್ಚಿಗೆ ನಡೆಯುತ್ತಾ ಬಂದಿವೆ. ಪೋಲೀಸ್ ಇಲಾಖೆ ಎಂಬ ದೊಡ್ಡದೊಂದು ಇಲಾಖೆಯೇನೋ ಇದೆ. ಆದರೆ ಸರಿಯಾದ ದಕ್ಷತೆಯಿಂದ ಕೆಲಸಮಾಡುವವರಾರೂ ಕಂಡುಬರುವುದಿಲ್ಲ. ಹಿಂದೆ ಇಂಗ್ಲೀಷರ ಕಾಲದಲ್ಲಾದರೆ ಎಲ್ಲಿಯಾದರೂ ಒಂದು ಕೆಂಪುಟೋಪಿ ನೋಡಿದರೆಂದರೆ ಒಂದು ಮೈಲದೂರದಲ್ಲಿಯೇ ಜನರು ಓಡಿಹೋಗುತ್ತಿದ್ದರು. ಈಗ ಮಾತ್ರ ಹಾಗೆ ಇರುವುದಿಲ್ಲ. ''ಹಣವೊಂದಿದ್ದರೆ ಈ ಕಾಂಗ್ರೆಸ್ ಸರ್ಕಾರದಲ್ಲಿ ಏನನ್ನಾದರೂ ಮಾಡಿಕೊಂಡು ಬರಬಹುದೆಂಬ ಜನಜಾಗೃತಿ'' ನಮ್ಮ ಜನರಲ್ಲಿ ಮೂಡಿರುತ್ತದೆ. ಹಾಗಾಗಿ ದಿನೇ ದಿನೇ ದೇಶವು ಹಾಳಾಗುತ್ತಾ ಬಂದಿರುತ್ತದೆ. ಲಂಚಗುಳಿತನವೇ ಹೆಚ್ಚಾಗಿರುತ್ತದೆ. ದಾರಿದ್ರ್ಯವು ತುಂಬಿ ತುಳುಕುತ್ತಿದೆ. ಪೋಲೀಸಿನವರಿಗೆ ಸಿಕ್ಕುವ ಸಂಬಳವು ಬಹಳ ಕಡಮೆ ಇದ್ದು ಅವರ ಜೀವನಕ್ಕೆ

ಕಷ್ಟವಾಗಿರುತ್ತದೆ. ಇದಕ್ಕೆ ಸರಿಯಾಗಿ ಅವರಿಗೆ ಲಂಚಕೊಟ್ಟು ತಮ್ಮ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಜನರು ಪ್ರಯತ್ನ ಪಡುತ್ತಾರೆ. ಹಳ್ಳಿಗಳಲ್ಲಿ ಕೆಲವರು ಒಂದೆರಡು ಪೋಲೀಸಿನವರಿಗೆ ಲಂಚ ಕೊಟ್ಟು ಸಾಕುತ್ತಾ ಇದ್ದದ್ದು ಕಂಡುಬರುತ್ತಾ ಇದೆ. ಹೀಗಾಗಿ ಹೆಚ್ಚಿಗೆ ಪೋಲೀಸ್ ಖಾತೆಯಲ್ಲಿರುವವರೇ ಲಂಚ ತೆಗೆದುಕೊಳ್ಳುವುದರಲ್ಲಿ ತೊಡಗಿ, ಯಾರು ಹೆಚ್ಚಿಗೆ ಲಂಚ ಕೊಡುತ್ತಾರೋ ಆ ಕಡೆಗೆ ಒಲಿಯುವುದರಲ್ಲಿದ್ದಾರೆ. ಅವರಲ್ಲಿ ನ್ಯಾಯಾನ್ಯಾಯವೆಂಬುದು ಇಲ್ಲವೇ ಇಲ್ಲದಂತಾಗಿದೆ. ಆದರೆ ಎಲ್ಲಾ ಪೋಲೀಸರು ಕೆಟ್ಟವರೆಂದು ಹೇಳಲು ಬರುವುದಿಲ್ಲ. ಒಳ್ಳೆಯ ಜನರೂ ಇದ್ದಾರೆ. ಅವರಿಗೆ ನಿಷ್ಠೆಯಿಂದ ಕೆಲಸಮಾಡಲು ನಮ್ಮ ಕಾಂಗ್ರೆಸ್ ಪುಡಾರಿಗಳು ಬಿಡುವುದಿಲ್ಲ. ಸರಕಾರವೂ ಸಹ ಸಹಾಯವನ್ನು ಸರಿಯಾಗಿ ಕೊಡುವುದಿಲ್ಲ. ಕಾಂಗ್ರೆಸ್ ಪುಡಾರಿಗಳ ಮಾತನ್ನು ಕೇಳಿ ನೀರಿಲ್ಲದ ಊರಿಗೆ ವರ್ಗಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಹಿಂದೆ ನಮ್ಮ ಉಡುಪಿಯಲ್ಲಿ ಒಮ್ಮೆ ಒಂದು ವಿಷಯ ನಡೆದಿದೆ. ಒಬ್ಬ ದೊಡ್ಡ ವ್ಯಾಪಾರಿಯವರ ಹತ್ತಿರವಿದ್ದ ಬ್ರಾಂದಿ ಬಾಟಲುಗಳನ್ನು ಒಬ್ಬ ಇನ್‌ಸ್ಪೆಕ್ಟರ್ ಅವರು ಹಿಡಿದಿದ್ದಕ್ಕೆ ಕೂಡಲೇ ದೊಡ್ಡ ದೊಡ್ಡ ಕಾಂಗ್ರೆಸ್ ಪುಡಾರಿಗಳು ಅಷ್ಟ ಬಂದು ಸದರಿಯವರಿಗೆ ಪೋನಿನ ಮುಖಾಂತರ ವರ್ಗಾವಾಡಿಸಿದರಂತೆ.

ಇನ್ನೊಂದು ವಿಷಯವನ್ನು ತಮ್ಮ ಅವಗಾಹನೆಗೆ ತರಬೇಕಾಗಿದೆ. ನಮ್ಮ ಕುಂದಾಪುರದ ಒಂದು ಕಥೆಯನ್ನು ಹೇಳುತ್ತೇನೆ. ಕುಂದಾಪುರದಲ್ಲಿ ''ಶಿವಪ್ರಸಾದವೆಂಬ'' ಒಂದು ಹೋಟಲ್ ಇದೆ. ಆದರ ಮ್ಯಾನೇಜರ್ ಒಂದು ಸಣ್ಣ ತಪ್ಪು ಮಾಡಿದ ನೆಪವನ್ನು ಹುಡುಕಿ ಸಾಯಂಕಾಲ ನಾಲ್ಕು ಗಂಟೆಗೆ ಹಲವರು ಅವರ ಹೋಟಲಿಗೆ ನುಗ್ಗಿದರು.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ರೂರಲ್).—ಮಾನ್ಯ ಸದಸ್ಯರು ಓದುತ್ತಿರುವುದನ್ನು ಯಾರು ಬರೆದುಕೊಟ್ಟರು ?

ಶ್ರೀ ಸುಬ್ಬರಾವ್ ಹಲ್ಸನಾದ್.—ಯಾರೂ ಬರೆದುಕೊಡುವ ಅಗತ್ಯವಿಲ್ಲ. ನಂತರ ಅವರ ಮೇಜು, ಕನ್ನಡಿ, ವಗೈರೆ ಹೊರಗೆಡವಿ ಚೂರು ಚೂರು ಮಾಡಿದರು. ಅವರನ್ನು ಮೇಲಕ್ಕೆ ಎತ್ತಿ ಹೊತ್ತಾಕಿದರು. ಅವರು ರಕ್ತವನ್ನು ಕಾರಿದರು. ಸಾವಿರಾರು ಜನರು ಕೂಡಿದರು. ಕಟ್ಟಡಕ್ಕೆ ಕಲ್ಲುಗಳಿಂದ ಹೊಡೆದು ಕಟ್ಟಡವನ್ನು ಹಾಳುಮಾಡಿದರು. ಇಷ್ಟಾದರೂ ಒಬ್ಬ ಪೋಲೀಸಿನವರ ಸುಳಿವೇ ಇಲ್ಲ. ಪೋಲೀಸ್ ಸ್ಟೇಷನ್ ಹತ್ತಿರದಲ್ಲಿಯೇ ಇದೆ. ಸರ್ಕಲ್ ಇನ್‌ಸ್ಪೆಕ್ಟರ್ ಆಫೀಸೂ ಇದೆ. ಹೇಳಿಕಳುಹಿಸಿದರೆ ಯಾರೂ ಬರುವವರೇ ಇಲ್ಲ. ಕಡೆಗೆ ಕೇಳುವಾಗ ಸದರೀಯವರೆಲ್ಲರಿಗೂ ಮುಂದಾಗಿ ಸೂಚನೆಯನ್ನು ನಮ್ಮ ದೊಡ್ಡಕಾಂಗ್ರೆಸ್ ಪುಡಾರಿಯವರು ಕೊಟ್ಟದ್ದಾರಾಗಿಯೂ, ಇನ್‌ಸ್ಪೆಕ್ಟರ್ ಅವರು ಊರು ಬಿಟ್ಟು ಹೊರಗೆ ಹೋಗಿರುವುದಾಗಿಯೂ ತಿಳಿದುಬಂತು. ಸಾಯಂಕಾಲ 8 ಘಂಟೆಯವರೆಗೂ ಗಲಾಟೆ. ಅಷ್ಟರಲ್ಲಿ ಕ್ಯಾಂಪಿಗೆ ಹೋಗಿ ಬಂದಿದ್ದ ತಹಸೀಲ್ದಾರರಿಗೂ, ಅಸಿಸ್ಟೆಂಟ್ ಕಮಿಷನರ್ ಅವರಿಗೂ ಈ ವಿಚಾರ ಗೊತ್ತಾಗಿ ಅವರು ಅಲ್ಲಿಗೆ ಬಂದರು. ಅವರಿಬ್ಬರೂ ಬಹಳವಾಗಿ ಕೆಲಸಮಾಡಿ ಆ ಗಲಾಟೆಯನ್ನು ತಣಿಸಿದರು. ಅಷ್ಟು ಹೊತ್ತಿಗೆ ರಾತ್ರಿ 9 ಘಂಟೆಯಾಯಿತು. ಹೀಗೆ ಹೇಳುವುದಾದರೆ ಇಂತಹ ಕೇಸುಗಳು ಇನ್ನು ಎಷ್ಟೋ ಇವೆ. ಹೀಗಾಗಿ ಕುಂದಾಪುರದಲ್ಲಿ ಕಾಂಗ್ರೆಸ್ ಸೋತುಹೋಗಿದ್ದು. ಇಲ್ಲದೇ ಇದ್ದರೆ ಕಾಂಗ್ರೆಸ್ಸಿಗೆ ಸೋಲು ಇಲ್ಲದೇ ಇತ್ತು. ಕುಂದಾಪುರದ ಟೌನಿನಲ್ಲಿಯೇ ಹಗಲಿನಲ್ಲಿ ಹತ್ತಿರದಲ್ಲಿಯೇ ಪೋಲೀಸ್ ಸ್ಟೇಷನ್ ಇರುವಾಗ ಈ ರೀತಿಯಾದರೆ ಇನ್ನು ಹಳ್ಳಿಗಾಡುಗಳಲ್ಲಿರುವ ಬಡಬಗ್ಗರನ್ನು ಕೇಳುವವರು ಯಾರು ? ಆದ್ದರಿಂದ ಪೋಲೀಸಿನವರಿಗೆ ಸರಿಯಾದ ಹೆಚ್ಚಿನ ಸಂಬಳ, ಭತ್ಯವನ್ನು ಕೊಟ್ಟು ಅವರ ಮನಸ್ಸು ಲಂಚದ ಕಡೆಗೆ ಹೋಗದಂತೆ ಮಾಡಿಸಿ ನಿರ್ದಾಕ್ಷಿಣ್ಯದಿಂದ ತಮ್ಮ ಜವಾಬ್ದಾರಿಯ ಕೆಲಸವನ್ನು ಮಾಡಿಸುವಂತೆ ವ್ಯವಸ್ಥೆ ಮಾಡಬೇಕೆಂದು ಗೃಹಮಂತ್ರಿಗಳಲ್ಲಿ ಅರಿಕೆಮಾಡಿಕೊಂಡು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಸಭಾಧ್ಯಕ್ಷರೇ, 20ನೆಯ ಶತಮಾನವು ಸಮಸ್ಯೆಗಳ ಯುಗವಾಗಿದೆ. ಈ 20ನೇ ಶತಮಾನದಲ್ಲಿ ಆಹಾರದ ಜೊತೆಗೆ ನಿರುದ್ಯೋಗವೂ ಮತ್ತೊಂದು ಸಮಸ್ಯೆಯಾಗಿದೆ. ಮಾನವನ ಇತಿಹಾಸದಲ್ಲಿ ಮಾನವನು ತನಗೆ ತಾನೇ ಸಮಸ್ಯೆ ಆಗಿದ್ದಾನೆ. ಈ ಸಮಸ್ಯೆಗಳನ್ನು ವಿಜ್ಞಾನದ ಆಧಾರದಿಂದ ಬಗೆ ಹರಿಸಿಕೊಳ್ಳಬೇಕಾದ ಕಾಲ ಈಗ ಒದಗಿ ಬಂದಿದೆ. ಈ ಕಾಲದಲ್ಲಿ ಕನ್ನಡನಾಡು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅಂತಹ ಸಮಸ್ಯೆಗಳನ್ನು ಎದುರಿಸುವ ಕಾಲದಲ್ಲಿ ಮುಖ್ಯವಾಗಿ ಈ ಕನ್ನಡನಾಡಿನಲ್ಲಿ ಇವತ್ತಿನ ದಿವಸ ಆಹಾರ ಸಮಸ್ಯೆ ಮತ್ತು ನಿರುದ್ಯೋಗ ಸಮಸ್ಯೆ—ಇವೆರಡು ಬಹಳ ಭೀಕರ ರೂಪದಲ್ಲಿವೆ ಎಂಬುದು ಸರ್ಕಾರಕ್ಕೆ ಗೊತ್ತಾಗಿದೆ ಅಂತಾ ಅನಿಸುತ್ತಿದೆ. ಇಂತಹ ಕಾಲದಲ್ಲಿ ನಾವು ನಿರುದ್ಯೋಗ ಸಮಸ್ಯೆ

(ಶ್ರೀ ಎಸ್. ಎಸ್. ಅರಕೇರಿ)

ಯನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು ಎನ್ನುವ ಒಂದು ವಿಚಾರವನ್ನು ಸರ್ಕಾರ ಬಹಳ ಹಗುರವಾಗಿ ತೆಗೆದುಕೊಂಡಿರುವುದನ್ನು ನೋಡಿದರೆ ನನಗೆ ಬಹಳ ವ್ಯಸನವಾಗುತ್ತದೆ. ಇವತ್ತು ಲಕ್ಷಾಂತರ ಜನಗಳಿಗೆ ಉದ್ಯೋಗವಿಲ್ಲ. ನಮ್ಮ ನಾಡಿನಲ್ಲಿ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಆಫೀಸಿದೆ. ಆದರೆ ಅಲ್ಲಿ ಯಾವ ರೀತಿಯಲ್ಲಿಯೂ ಸೀನಿಯಾರಿಟಿ ಎನ್ನುವುದನ್ನು ಪಾಲಿಸುತ್ತಾ ಇಲ್ಲ. ಆ ಕಡೆ ನೋಡುತ್ತಲೂ ಇಲ್ಲ. ಅಲ್ಲಿ ರಿಜಿಸ್ಟರ್ ಮಾಡಿ 2 ವರ್ಷಗಳು ಆಗಿರತಕ್ಕ ವ್ಯಕ್ತಿಗಳಿಗೆ ಇನ್ನೂ ಇದುವರೆಗೂ ಇಂಟರ್‌ವ್ಯೂ ಕಳುಹಿಸದೆ, ಯಾರೋ ಸುಮಾರು 3-6 ತಿಂಗಳುಗಳ ಹಿಂದೆ ರಿಜಿಸ್ಟ್ರೇಷನ್ ಮಾಡಿಸಿದ್ದರೆ ಮತ್ತು ನೂರಾರು ರೂಪಾಯಿಗಳ ಲಂಚ ಕೊಟ್ಟರೆ ಜಾಗ್ರತೆಯಾಗಿ ಇಂಟರ್‌ವ್ಯೂ ಕಾಲ್ ಕೊಡುತ್ತಾರೆ. ಈ ರೀತಿ 19 ಜಿಲ್ಲೆಗಳ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಆಫೀಸುಗಳು ಕೆಲಸಮಾಡಿದರೆ ನಮ್ಮ ದೇಶದಲ್ಲಿ ಯಾವ ರೀತಿಯಲ್ಲಿ ಮತ್ತು ಹೇಗೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬಹುದು ? ನಿರುದ್ಯೋಗದ ಸಮಸ್ಯೆಯಲ್ಲಿ ಹಲವಾರು ಭಾಗಗಳು ಇವೆ. ಇವೊತ್ತಿನ ದಿವಸ ನಮ್ಮಲ್ಲಿ ನಾಲ್ಕು-ಐದು ವಿಶ್ವವಿದ್ಯಾನಿಲಯಗಳು ಇವೆ. ಇವೊತ್ತಿನ ದಿವಸ ಅಲ್ಲಿಂದ ಲಕ್ಷಾಂತರ ಜನ ಡಿಗ್ರಿಹೋಲ್ಡರ್ಸ್ ಹೊರಗಡೆಗೆ ಬರುತ್ತಿದ್ದಾರೆ, ಅದೇ ಎಸ್. ಎಸ್. ಎಲ್. ಸಿ. ಆದವರು ಲೆಕ್ಕವೇ ಇಲ್ಲ. 100ಕ್ಕೆ 25–30 ಪರ್ಸೆಂಟು ಎಜುಕೇಷನ್ ಇರುವಾಗ ಈ ರೀತಿ ತರುಣ ಜನಾಂಗಕ್ಕೆ ನೌಕರಿ ಮಾಡಬೇಕು ಎಂದು ಓಡಾಡುತ್ತಾ ಇರುವಾಗ ನೌಕರಿಗಳು ಸಿಕ್ಕುತ್ತಾ ಇಲ್ಲ. ಅಷ್ಟೇ ಅಲ್ಲದೆ ಇವೊತ್ತಿನ ದಿವಸ ಎಸ್.ಎಸ್.ಎಲ್.ಸಿ., ಬಿ.ಎ. ಆದಂಥ ತರುಣ ಜನಾಂಗದವರೂ ಇದ್ದಾರೆ, ತರುಣಿಯರು ಹೆಚ್ಚಾಗಿದ್ದಾರೆ. ಹಿಂದೆ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಿದರೆ ಚೆನ್ನಾಗಿರುವ ವರ ಸಿಕ್ಕುತ್ತದೆ ಎನ್ನುವ ಅಭಿಪ್ರಾಯವನ್ನು ತಂದೆ ತಾಯಿಗಳು ಇಟ್ಟುಕೊಂಡಿದ್ದರು. ಈವಾಗ ಇಂಜನೀಯರು, ಡಾಕ್ಟರ್ ಬೇಕು ಎಂದು ಅಂತಹವರನ್ನೇ ಹುಡುಕುವುದರಿಂದ ವರದಕ್ಷಿಣೆ ಬೇಡುವ ಕೆಟ್ಟ ಪದ್ಧತಿಯಿಂದ ಮತ್ತು ಲಗ್ನದ ಖರ್ಚು 10-15 ಸಾವಿರ ರೂಪಾಯಿ ಆಗುವುದರಿಂದ ವಧುವಿನ ತಂದೆ ತಾಯಿಗಳಿಗೆ ತಲೆನೋವು ಆಗಿ ಒಂದೆರಡು ವರ್ಷ ತಮ್ಮ ಹೆಣ್ಣುಮಕ್ಕಳು ಸರ್ಕಾರಿ ನೌಕರಿ ಮಾಡಲಿ ಎನ್ನುವ ದೃಷ್ಟಿಯಿಂದ ಎಷ್ಟೋ ಜನ ಮಾಧ್ಯಮ ವರ್ಗದವರು ಕೆಲಸಕ್ಕೆ ಮುಂದೆ ಬಂದಿರುವಾಗ ಹೆಣ್ಣುಮಕ್ಕಳ ನಿರುದ್ಯೋಗವೂ ಗಂಭೀರವಾಗಿದೆ. ಈ ಸಮಸ್ಯೆ ನಮ್ಮ ಕನ್ನಡನಾಡಿನ ಮತ್ತು ಕನ್ನಡನಾಡಿನ ಸರ್ಕಾರಕ್ಕೆ ಮಿತಿಮೀರಿ ಬಂದಿದೆ. ಈ ಸಮಸ್ಯೆ ಸರಿಯಾಗಿ ಬಗೆಹರಿಸುತ್ತಾ ಇಲ್ಲ. ಕಾರಣ ಇಷ್ಟೆ ಸರಿಯಾದಂಥ ಯೋಜನೆ ಮಾಡಿ ಒಂದು ಕಮಿಟಿ ನೇಮಿಸಿ ಯಾವ ಯಾವ ರೀತಿಯಾಗಿ ಯಾವ ಯಾವ ಭಾಗದಲ್ಲಿ ವಕ್ಕಲುತನ ಮಾಡುವಾಗ ಎಷ್ಟುಜನ (ಲ್ಯಾಂಡ್‌ಲೆಸ್) ಭೂಮಿ ಹೀನ ಲೇಬರರ್ಸ್ ಇದ್ದಾರೆ, ಕಲಿತಜನ ಅನ್‌ಎಂಪ್ಲಾಯ್ಡ್ ಎಷ್ಟುಜನ ಇದ್ದಾರೆ ಕಲಿಯದೆ ಇದ್ದ ಎಷ್ಟುಜನ ನಿರುದ್ಯೋಗಿಗಳು ಇದ್ದಾರೆ ಎನ್ನುವುದನ್ನು ತಿಳಿದುಕೊಂಡು ಬಗೆಹರಿಸಿದರೆ ಸ್ವಲ್ಪಮಟ್ಟಿಗೆ ಬಿಡಿಸಲಿಕ್ಕೆ ಸಾಧ್ಯ ಆಗಬಹುದು. ಇದರಿಂದ ನಾವು ಉತ್ತಮವಾದಂಥ ಪ್ರಜಾರಾಜ್ಯವನ್ನು ಕಟ್ಟಬೇಕು. ಸರ್ಕಾರ ಇಂತಹ ಯಾವುದೇ ಪ್ರಯತ್ನವನ್ನು ಪ್ರಾಮಾಣಿಕತೆಯಿಂದ ಮಾಡುತ್ತಾ ಇಲ್ಲ. ಬಹಳ ಶೋಚನೀಯವಾಗಿದೆ. ಕೂಲಿಗಾರರ ಬೇಡಿಕೆಗಳ ಬಗ್ಗೆ ಹೇಳುವಾಗ್ಗೆ ಕಾರ್ಮಿಕಜನರು ಅನೇಕರು ಮಣ್ಣಿನ ಕೆಲಸ ಮಾಡುತ್ತಾರೆ, ಅನೇಕ ಜನರು ರೋಡ್ಸ್, ಬಿಲ್ಡಿಂಗ್ ಕೆಲಸ ಮಾಡುತ್ತಾರೆ ಅವರಿಗೆ ದೊರಕುವ ಕೂಲಿ ಬಹಳ ಕಡಿಮೆ. ಫ್ಯಾಕ್ಟರಿಯಲ್ಲಿ ಮಾಡುವ ಕೂಲಿಗಾರರ ಕೆಲಸಕ್ಕಿಂತ ಮಣ್ಣಿನಲ್ಲಿ (Mud) ಮತ್ತು ರೋಡ್ಸ್, ಬಿಲ್ಡಿಂಗ್ಸ್‌ಕೆಲಸಗಳನ್ನು ಮಾಡುವುದು ಕಷ್ಟ ಇದೆ. ಆದುದರಿಂದ ಲೇಬರ್ ಡಿಪಾರ್ಟ್‌ಮೆಂಟ್, ಮನೆಗಳನ್ನು ಕಟ್ಟುವ ಇನ್ನುಳಿದ ಕಷ್ಟದ ಕೆಲಸ ಮಾಡುವ ಕೆಲಸಗಾರರಿಗೆ ಹೆಚ್ಚಿನ ಕೂಲಿ ಗೊತ್ತುಮಾಡಬೇಕೆಂದು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ.

ಮುಖ್ಯವಾಗಿ ನಿರುದ್ಯೋಗದ ಸಮಸ್ಯೆ ಬಹಳ ಭಯಂಕವಾದ ಭೀಕರವಾದ ಸಮಸ್ಯೆ. ಸರ್ಕಾರದವರು ಯಾವ ರೀತಿಯಾಗಿಯೂ ಪ್ರಜೆಗಳಿಗೆ ಕೆಲಸ ಕೊಡದೆ ಇದ್ದರೆ ಮತ್ತು ಕೊಡಲಿಕ್ಕೆ ಸಾಧ್ಯ ಇಲ್ಲದಾಗ ಅವರಿಗೆ ಮತ್ತು ಅವರ ಕುಟುಂಬ ಮನೆತನದವರಿಗೆ ಹೊಟ್ಟೆಗೆ ಆಹಾರ ಹೇಗೆ ದೊರೆಯಬೇಕು ಎಂಬುದನ್ನು ಸರಕಾರ ತಿಳಿದುಕೊಳ್ಳಬೇಕು. ಅದರ ಸಲುವಾಗಿ ಇಂಗ್ಲೆಂಡ್, ಅಮೇರಿಕಾ, ರಷ್ಯಾ ದೇಶಗಳಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಇದ್ದಂಥ ಜನಕ್ಕೆ ಸೋಷಿಯಲ್ ಸೆಕ್ಯೂರಿಟಿ ಎನ್ನುವ ಸ್ಕೀಮನ್ನು ಬಳಕೆಗೆ ತಂದಿದ್ದಾರೆ. ಪ್ರತಿಯೊಬ್ಬರಿಗೂ ಉದ್ಯೋಗವನ್ನು ಕಲ್ಪಿಸಿ ಕೊಡುವವರೆಗೂ ಅವರಿಗೆ ಎರಡು ಹೊತ್ತು ಊಟಕ್ಕೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ನಮ್ಮ ಸರ್ಕಾರದವರು ಅದರ ಸಲುವಾಗಿ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಈ ಕಾಲದಲ್ಲಿ Unemployment Security scheme ಇದು ಬಹಳ ಅಗತ್ಯ ಎನ್ನುವ ಸೂಚನೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಇನ್ನು ಪೋಲೀಸ್ ಇಲಾಖೆ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ಮುಖ್ಯವಾಗಿ ಸೈನಿಕರ ಖಾತೆ ಮತ್ತು ಪೋಲೀಸ್ ಖಾತೆ ಎರಡು ಮಹತ್ವದ ಖಾತೆ ಇವೊತ್ತಿನ ದಿವಸ ಸೈನಿಕರಿಗಾಗಲಿ, ಪೋಲೀಸಿನವರಿಗಾಗಲಿ ಅವರ ಬಗ್ಗೆ ಅಪಾರವಾದ ವಿಶ್ವಾಸ ಮತ್ತು ಗೌರವವನ್ನು ನಾವು ಕೊಡಬೇಕಾಗಿದೆ. ದೇಶದ ಮಾನ, ಮರ್ಯಾದೆ, ರಕ್ಷಣೆ ಸೈನಿಕರ ಕೈಯ್ಯಲ್ಲಿ ಇದೆ. ರಾಜ್ಯದ ಮಾನ, ಮರ್ಯಾದೆ ರಕ್ಷಣೆ ಮಾಡುವುದು ಪೋಲೀಸ್ ಆಫೀಸರ ಕೈಯ್ಯಲ್ಲಿ ಇದೆ. ಬಹಳ ದೊಡ್ಡ ಜವಾಬ್ದಾರಿಯುತವಾದಂಥ ನಮ್ಮ ನಾಡಿನ ಅಥವಾ ನಮ್ಮ ಸಮಾಜದ ಹಕ್ಕು ಭಾದ್ಯತೆಗಳು ಮತ್ತು ಪ್ರತಿಯೊಬ್ಬ ಮಾನವನ ಹಕ್ಕು ಭಾದ್ಯತೆಗಳು ಅವರ ಕೈಯ್ಯಲ್ಲಿ ಇರುವಾಗ, ಮುಖ್ಯವಾಗಿ ನಮ್ಮ ಗೌರವಗಳು ಅವರ ಕೈಯ್ಯಲ್ಲಿ ಇದೆ. ಅಂದಾಗ ಜನರು ಯಾವ ರೀತಿ ಪೋಲೀಸರನ್ನು ಗೌರವದಿಂದ ನೋಡುತ್ತಿದ್ದಾರೆಯೋ ಅದೇ ಪ್ರಕಾರ ಪೋಲೀಸರು ಸಮಾಜವನ್ನು ಗೌರವದಿಂದ ಕಾಣಬೇಕು ಮತ್ತು ಅದೇ ರೀತಿ ಅಷ್ಟು ಗೌರವವನ್ನು ಇಟ್ಟುಕೊಂಡು ಪ್ರಜೆಗಳನ್ನು ನೋಡಿದ್ದೇ ಆದರೆ ನನಗೆ ಅನಿಸುತ್ತದೆ ಅವರ ಬಗ್ಗೆ ಇನ್ನೂ ಅಪಾರವಾದ ವಿಶ್ವಾಸ ಹೆಚ್ಚಾಗಲಿಕ್ಕೆ ಸಾಧ್ಯ ಇದೆ. ಜನರನ್ನು ರಕ್ಷಣೆ ಮಾಡುವ ಭಾರ ಸರ್ಕಾರಕ್ಕೆ ಇದೆ. ಅದೇ ಇವೊತ್ತಿನ ದಿವಸ ಜನರ ರಕ್ಷಣೆ, ಹಕ್ಕುಗಳ ರಕ್ಷಣೆ ಪೋಲೀಸರ ಕೈಯ್ಯಲ್ಲಿ ಇದೆ. ಆದುದರಿಂದ ಪೋಲೀಸರು ಯಾವ ರೀತಿ ಇರಬೇಕು ಎಂದರೆ ಮುಖ್ಯವಾಗಿ ನ್ಯಾಯ, ಧರ್ಮ ತತ್ವದ ಮೇಲೆ ನಡೆದಿದ್ದೇ ಆದರೆ ನನಗೆ ಅನಿಸುತ್ತದೆ ಪ್ರಜೆಗಳಿಗೆ ಒಳ್ಳೆಯದಾದಂಥ, ಉತ್ತಮವಾದಂಥ ನ್ಯಾಯ ಒದಗಿಸಬಲ್ಲರು ಜನರಿಗೆ ಪೋಲೀಸ್ ಸ್ಟೇಷನ್ನಿಗೆ ನಡೆಯಿರಿ ಎಂದರೆ ಯಮನ ಬಾಗಿಲಿಗೆ ಹೋಗುವ ಭಾವನೆ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲೂ ಬರುತ್ತದೆ. ಈ ಭಾವನೆ ಬರಬಾರದು. ಪೋಲೀಸ್ ಸ್ಟೇಷನ್ನಿಗೆ ನಡೆಯಿರಿ ಎಂದರೆ ನ್ಯಾಯ ದೇವತೆಯ ಧರ್ಮದ ಬಾಗಿಲಿಗೆ ಹೋಗುತ್ತಾ ಇದ್ದೇವೆ ಎನ್ನುವ ಭಾವನೆ ಬರಬೇಕು. ಅಂತಹ ಪರಿಸ್ಥಿತಿ ನಿರ್ಮಾಣ ಆಗಬೇಕು. ಪೋಲೀಸ್ ಖಾತೆಯಲ್ಲಿ ಆಫೀಸರು ಯಾವ ರೀತಿ ವರ್ತಿಸುತ್ತಾರೆ ಎಂಬ ಬಗ್ಗೆ ಒಂದು ಬಸವಣ್ಣನವರ ವಚನವನ್ನು ಹೇಳುತ್ತೇನೆ.

> ಒಲೆ ಹೊತ್ತಿ ಉರಿದಡೆ ನಿಲ್ಲಬಹುದಲ್ಲದೆ,
> ಧರೆಹತ್ತಿ ಉರಿದೊಡೆ ನಿಲ್ಲಬಹುದೇ,
> ಏರಿನೀರುಂಬರೆ, ಬೇಲಿ ಕೆಯಮೇಯೊಡೆ,
> ತಾಯಿ ಮೊಲೆ ಹಾಲು ನಂಜಾಗಿ ಕೊರೆವಡೆ,
> ಇನ್ನಾರಿಗೆ ದೂರವೆ ಕೂಡಲ ಸಂಗಮದೇವ.

ಸಮಾಜ ರಕ್ಷಣೆ ಮಾಡುವ ಪೋಲೀಸರೇ ಜನರ ಮೇಲೆ ಮುನಿದರೆ ತಾಯಿಯ ಹಾಲು ವಿಷ ಆದ ಹಾಗೆಯೇ ಸರಿ. ಯಾವನಾದರೂ ಒಬ್ಬ ವ್ಯಕ್ತಿ ಪೋಲೀಸ್ ಸ್ಟೇಷನ್ನಿಗೆ ಹೋಗುವುದು ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಅಲ್ಲಿ ನ್ಯಾಯ ಸಿಕ್ಕದೆ ಬರೀ ಕೈಯ್ಯಲ್ಲ ಮನೆಗೆ ಹೋಗುವುದಾದರೆ ಅವನು ಅಲ್ಲಿಗೆ ಏತಕ್ಕೆ ಹೋಗಬೇಕು ಎನ್ನುವ ಉದಾಸೀನ ಭಾವನೆ ಬರುತ್ತದೆ. ಪೋಲೀಸ್ ಆಫೀಸರು ಸರಿಯಾದ ರೀತಿಯಲ್ಲಿ ಪ್ರಜೆಗಳಿಗೆ ನ್ಯಾಯ ದೊರಕಿಸಿಕೊಡಬೇಕು. ಅವರು ಜನರ ವಿಶ್ವಾಸ ಪಾತ್ರರಾಗಬೇಕು. ಇದಲ್ಲದೆ ಇನ್ನು ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಹೆಚ್ಚಿನ ಸೌಲಭ್ಯ, ಹೆಚ್ಚಿನ ಅನುಕೂಲತೆ ಒದಗಿಸಿ ಕೊಡಬೇಕು ಎಂದು ಹೇಳಿ ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎನ್. ರಾಮೇಗೌಡ (ಸಿರಾ).—ಮಾನ್ಯ ಸಭಾಪತಿಗಳೇ, ಈ ದಿವಸ ಮಾನ್ಯ ಗೃಹಸಚಿವರು ನಮ್ಮ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಸಾಮಾನ್ಯವಾಗಿ ಪೋಲೀಸ್ ಇಲಾಖೆಯನ್ನು ಮತ್ತು ಪೋಲೀಸ್ ಇಲಾಖೆಯ ಅಧಿಕಾರಿಯನ್ನೂ ಟೀಕೆ ಮಾಡತಕ್ಕಂಥಾದ್ದು ಸರ್ವಸಾಮಾನ್ಯವಾದಂಥ ಒಂದು ಪದ್ಧತಿಯಾಗಿದೆ. ಅದರಲ್ಲೂ ಒಳ್ಳೇದು, ಕೆಟ್ಟದ್ದು ಎನ್ನತಕ್ಕಂಥಾದ್ದು, ಎಲ್ಲಾ ವಿಷಯದಲ್ಲೂ ಎಲ್ಲಾ ಹಂತದಲ್ಲೂ ಇದ್ದೇ ಇರುತ್ತದೆ ಎನ್ನತಕ್ಕಂಥಾದ್ದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇಲಾಖಾ ಅಧಿಕಾರಿಗಳು ತಮ್ಮ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ಅಲ್ಪಸ್ವಲ್ಪ ದೋಷಗಳನ್ನು ಮಾಡಬಹುದು. ಹಾಗೆ ಕೆಲವರಲ್ಲಿ ಅಲ್ಪಸ್ವಲ್ಪ ದೋಷಗಳು ಕಾಣುವುದರಿಂದ ಇಲಾಖೆ ಕೆಟ್ಟದ್ದು, ಇಲಾಖೆಯ ಅಧಿಕಾರಿಗಳೆಲ್ಲ ಕೆಟ್ಟವರು ಇದ್ದಾರೆ ಎನ್ನುವ ಕಾರಣದಮೇಲೆ ಇಲಾಖೆಯ ಅಧಿಕಾರಿಗಳೆಲ್ಲರೂ ಕೆಟ್ಟವರು ಅನ್ನುವ ಅಭಿಪ್ರಾಯವನ್ನು ಕೊಡತಕ್ಕದ್ದು ಸರಿಯಲ್ಲ. ಅನೇಕ ಸಂದರ್ಭಗಳಲ್ಲಿ ಪೋಲೀಸ್ ಇಲಾಖೆಯಲ್ಲೂ ಕೂಡ ಬಹಳ ನಿಷ್ಠೆಯಿಂದ ಕಟ್ಟುನಿಟ್ಟಾದ ರೀತಿಯಲ್ಲಿ ಅವರ ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕಂಥ ಅಧಿಕಾರಿಗಳು ಇದ್ದಾರೆ ಎಂಬುದು ಅದನ್ನೂ ನಾವು ಮರೆಯುವುದಕ್ಕಾಗುವುದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಮಾನ್ಯ ಸ್ನೇಹಿತರು ಅನೇಕರು ಲಂಚದ ವಿಷಯದಲ್ಲಿ ಹೇಳಿದರು,

(ಶ್ರೀ ಬಿ. ಎಚ್. ರಾಮೇಗೌಡ)

ಈ ಪೋಲೀಸ್ ಇಲಾಖೆ ಲಂಚದಲ್ಲಿ ತಾಂಡವಾಡುತ್ತಿದೆ ಎಂದು ನಿಜ. ಪೋಲೀಸ್ ಇಲಾಖೆ ಒಂದೇ ಏತಕ್ಕೆ ಲಂಚ ಎನ್ನತಕ್ಕಂಥಾದ್ದು ನಾನಾ ಇಲಾಖೆಗಳಲ್ಲಿ ಎಲ್ಲಾ ಹಂತಗಳಲ್ಲೂ ಕೂಡ ಇದು ತಾಂಡವಾಡುತ್ತಾ ಇರತಕ್ಕ ಸಂಗತಿ ಗೊತ್ತಿದೆ. ಲಂಚದ ವಿಷಯದಲ್ಲಿ ಟೀಕೆ ಮಾಡುವಾಗ ಒಂದು ವಿಷಯವನ್ನು ನಾವು ಮರೆಯಬಾರದು. ಲಂಚ ಕೊಡತಕ್ಕವರು ದೇಶದಲ್ಲಿ ಇಲ್ಲದೇ ಇದ್ದರೆ ನಿಜವಾಗಿ ಲಂಚ ತೆಗೆದುಕೊಳ್ಳತಕ್ಕವರೂ ಇರುವುದಿಲ್ಲ ಎನ್ನುವುದನ್ನು ನಾವು ಮರೆಯಬಾರದು. ಲಂಚವನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಮತ್ತು ಲಂಚವನ್ನು ಸಾಧ್ಯವಾದಷ್ಟುಮಟ್ಟಿಗೆ ನಿಲ್ಲಿಸಬೇಕು ಎನ್ನತಕ್ಕಂಥ ವಿಷಯದಲ್ಲಿ ಸಾರ್ವಜನಿಕರ ಸಹಕಾರ ಮುಖ್ಯವಾದುದು. ಲಂಚವನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾದರೆ ಇನ್ನೊಬ್ಬ ಬ್ರಹ್ಮ ಇನ್ನೊಂದು ಬ್ರಹ್ಮಾಂಡವನ್ನು ಸೃಷ್ಟಿಸಬೇಕಾಗುತ್ತದೆ, ಎಂದು ಅನಿಸುತ್ತದೆ, ಅಷ್ಟಾದರೂ ಕೂಡ ಲಂಚ ನಿರ್ಮೂಲ ಆಗುವುದಿಲ್ಲ ಎನ್ನುವುದು ನನ್ನ ಸಂದೇಹ. ಬಹಳಮಟ್ಟಿಗೆ ಲಂಚ ಕೊಡತಕ್ಕವರ ಸಂಖ್ಯೆ ಕಡಮೆ ಇದ್ದರೆ, ಲಂಚ ತೆಗೆದುಕೊಳ್ಳತಕ್ಕವರ ಸಂಖ್ಯೆಯೂ ಕಡಮೆಯಾಗುತ್ತದೆ. ಲಂಚ ತೆಗೆದುಕೊಳ್ಳುವವರಿಗಿಂತ ಲಂಚವನ್ನು ಕೊಡುವವರನ್ನು ಕಂಡುಹಿಡಿದು ಮೊದಲು ಅವರಿಗೆ ಶಿಕ್ಷೆಯನ್ನು ವಿಧಿಸಿದರೆ ನಿಜವಾಗಿಯೂ ಬಹಳಮಟ್ಟಿಗೆ ಲಂಚದ ಪ್ರಕರಣಗಳು ಕಡಮೆಯಾಗಬಹುದು ಎನ್ನತಕ್ಕಂಥ ಅಭಿಪ್ರಾಯವನ್ನು ನಾನು ಸೂಚಿಸುತ್ತೇನೆ. ಸ್ವಾರ್ಥಕ್ಕಾಗಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ನಮ್ಮ ಸ್ವಾರ್ಥಸಾಧನೆಗಾಗಿ ನಾವು ಲಂಚವನ್ನು ಕೊಟ್ಟರೆ ಅವರು ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ. ಆದರೆ ಅವರು ನಿಜವಾಗಿಯೂ ಅವರು ಲಂಚವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಪೋಲೀಸು ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ ದರ್ಜೆಗಿಂತ ಕೆಳಗಿನ ದರ್ಜೆಯವರು ಎಂದರೆ ದಫೇದಾರರು, ಮತ್ತು ಪೋಲೀಸ್ ಕಾನ್‌ಸ್ಟೇಬಲ್‌ಗಳವರ ವೇತನಗಳು ಪ್ರೈಮರಿ ಸ್ಕೂಲ್ ಉಪಾಧ್ಯಾಯರ ವೇತನಕ್ಕಿಂತಲೂ ಬಹಳ ಕನಿಷ್ಟವಾಗಿದೆ. ಅವರ ಕೆಲಸ ಬಹಳ ಕಷ್ಟವಾಗಿದೆ. ಅವರ ಕೆಲಸಕ್ಕೆ ತಕ್ಕಂತೆ ಅವರಿಗೆ ವೇತನಗಳು ದೊರೆಯುತ್ತಿಲ್ಲ. ಅವರಿಗೆ ಸಲೀಸಾಗಿ ಹೊಟ್ಟೆ ತುಂಬಾ ಊಟಮಾಡಿ ಜೀವನವನ್ನು ನಡೆಸತಕ್ಕ ರೀತಿಯಲ್ಲಿ ಅವರಿಗೆ ಉತ್ತಮವಾದ ವೇತನಗಳನ್ನು ಕೊಟ್ಟು ಅವರಿಗೆ ಉತ್ತಮ ರೀತಿಯಲ್ಲಿ ಕಾರ್ಯದಕ್ಷತೆಯನ್ನು ವಹಿಸಿ ನಿಮ್ಮ ನಿಮ್ಮ ಕೆಲಸಗಳನ್ನು ಮಾಡಿ ಎಂದು ಹೇಳಿದರೆ ಅದು ಚೆನ್ನಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಪಟ್ಟಣಗಳಲ್ಲಿರತಕ್ಕ ಪೋಲೀಸ್ ಅಧಿಕಾರಿಗಳಿಗೆ ಕೊಟ್ಟಿರತಕ್ಕಂಥ ವಸತಿ ಸೌಕರ್ಯಗಳು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪೋಲೀಸಿನವರಿಗೆ ಒದಗಿಸಿಕೊಟ್ಟಿಲ್ಲ. ಸುಮಾರು 20 ವರ್ಷಗಳ ಹಿಂದೆ ಪ್ರಾರಂಭ ಮಾಡಿದ ಪೋಲೀಸ್ ಠಾಣೆಗಳಲ್ಲಿ ಇವೊತ್ತಿನವರೆಗೂ ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟಿಲ್ಲ. ಇದರಿಂದಾಗಿ ಪೋಲೀಸಿನರಿಗೆ ಆಯಾಯ ಪೋಲೀಸ್ ಠಾಣೆಗಳಲ್ಲಿ ವಾಸಮಾಡುವುದಕ್ಕೆ ವಸತಿ ಸೌಕರ್ಯಗಳು ಇಲ್ಲದೇ ಇರುವುದರಿಂದ ಅವರು 3-4 ಮೈಲಿಗಳಿಂದ ಪೋಲೀಸ್ ಠಾಣೆಗೆ ಪ್ರತಿನಿತ್ಯ ಕಾಲು ನಡಿಗೆಯಲ್ಲಿ ನಡೆದುಕೊಂಡು ಬರಬೇಕಾಗುತ್ತದೆ. ಈ ಕಾರಣಕ್ಕಾಗಿ ಆ ಪೋಲೀಸಿನವರ ದಕ್ಷತೆ ಕುಂಠಿತವಾಗಿದೆ ಎಂದು ನಾನು ಮಾನ್ಯ ಗೃಹಸಚಿವರ ಗಮನಕ್ಕೆ ತರುತ್ತೇನೆ. ಆದ್ದರಿಂದ ಇವೊತ್ತು ಪಟ್ಟಣಗಳಲ್ಲಿ ಪೋಲೀಸಿನವರಿಗೆ ಯಾವ ರೀತಿ ವಸತಿ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆಯೋ ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪೋಲೀಸು ಅಧಿಕಾರಿಗಳಿಗೂ ಕೂಡ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ ಶಿರಾ ತಾಲ್ಲೂಕು ಕೆರೆಯಾಗಲಹಳ್ಳಿ ಎಂಬ ಊರಿನಲ್ಲಿ ಒಂದು ಪೋಲೀಸ್ ಸ್ಟೇಷನ್ ಸ್ಥಾಪನೆಯಾಗಿ ಸುಮಾರು 20-30 ವರ್ಷಗಳಾದರೂ ಅಲ್ಲಿರತಕ್ಕ ಪೋಲೀಸು ಅಧಿಕಾರಿಗಳಿಗೆ ವಸತಿ ಸೌಕರ್ಯವನ್ನು ಒದಗಿಸಿ ಕೊಟ್ಟಿಲ್ಲ. ಅವರಿಗೆ ಅಲ್ಲಿ ವಸತಿ ಸೌಕರ್ಯವಿಲ್ಲದೆ ಅವರು ಪೋಲೀಸ್ ಸ್ಟೇಷನ್ನಿನಿಂದ 4-5 ಮೈಲಿ ದೂರದಲ್ಲಿ ವಾಸಮಾಡಿಕೊಂಡು ಅವರ ಕರ್ತವ್ಯ ನಿರ್ವಹಣೆಗೆ ಬಹಳ ಕಷ್ಟವಾಗಿದೆ. ಈ ರೀತಿ ಆಗದಂತೆ ಆದಷ್ಟು ಶೀಘ್ರವಾಗಿ ಆ ಪೋಲೀಸು ಅಧಿಕಾರಿಗಳಿಗೆ ಉತ್ತಮವಾದ ವಸತಿ ಸೌಕರ್ಯದ ಏರ್ಪಾಡು ಮಾಡಬೇಕು ಎಂದು ನಾನು ಮಾನ್ಯ ಗೃಹಸಚಿವರಲ್ಲಿ ಮನವಿಮಾಡಿಕೊಂಡು ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Smt. WINIFRED F. FERNANDEZ (Coondapur).—Hon'ble Speaker Sir, While speaking on the Demands about the Police Department. I would like to point out some facts to the Hon'ble Home Minister.

First and foremost, before blaming the police, we must see to the welfare and interest of the police people. At present they are paid a

meagre salary. That is the reason why they are going in for bribes and corruption is there.

Two days back, the Hon'ble Finance Minister has amended the Prohibition Bill and after that, I can say the police are much distressed. They are feeling like fish out of water and so I ask the Hon'ble Home Minister to increase their salary and provide them with all the necessary amenities like accommodation, and educational facilities for their children. I may say that some days back, I also heard the police constables remarking: "ನಮ್ಮ ಬೆನ್ನು ಮೇಲೆ ಹೊಡೆದರೂ ನಮ್ಮ ಹೊಟ್ಟೆಯಮೇಲೆ ಹೊಡೆಯಬೇಡಿ", But due to the amended Bill, they are deprived of their *mamool* which they used to get under prohibition. They used to get, I can say in thousands, from distillers, and sellers of illicit drinks. But now they are deprived of this. On behalf of the police people and their families, I request the Home Minister to increase their salaries and provide them with all the facilities required by them, for the efficient discharge of their responsibilities.

Regarding my constituency namely COONDAPUR, I can say, the circle inspector has got a vast area. He has got to cover three constituencies—Coondapur, Bramhavar and Baindoor. Whenever the Circle Inspector gets criminal complaints, it is very difficult for him to go to the rural areas where there are no transport facilities at all. So I request the Hon'ble Home Minister to provide the circle Inspector with a Jeep or any other Vehicle in order to avoid any possible delay in dealing with complaints lodged, because everything is hushed up by the time he goes to that area wherefrom a criminal case is reported. So, no justice could be done in the matter.

Next, I request the Hon'ble Minister to see that a telephone is installed in the office of the Circle Inspector where it is lacking now. Of course, he is put into great difficulty because he is a neighbour of mine and I can say he is a tenant of my father-in-law also. When he receives calls from the station or trunk calls we have to send word through our servant and do errand duty. In the case of trunk calls, I can say it takes about five minutes for the person to come to our house to attend to the phone call. So it is very necessary that a phone should be installed. It is not difficult, I can say. Within a week if possible a phone could be installed. So I request the Home Minister to sanction a phone to that place.

Next there are some cases.....

MR. SPEAKER.—The member has to mention only points. The Minister will deal with them. There will be no time while speaking on demands to develop stories about phones etc. All that can be said in the course of the Budget speech.

SMT. WINIFRED F. FERNANDEZ.—Regarding this phone, I wanted to say in detail. I will finish it soon, Sir.

Then there are some cases which are not at all investigated. Even some cases which have some genuineness about them, they do not look into and do not investigate. Neither they go on record. So, I ask the Hon'ble Minister to tell his subordinates to see that justice is done.

(SMT. WINIFRED F. FERNANDEZ)

Lastly I request the Home Minister to give proper protection to our people and see that justice is meted out to the common man. I trust that all my requests will be duly complied with.

I thank the Hon'ble Speaker for sparing some minutes of the valuable time of the House.

Mr. SPEAKER.—May I ask the Hon'ble Minister to tell me if I can take fifteen minutes and shall we sit fifteen minutes late ?

Sri M. V. RAMA RAO (Minister for Law and Labour).—A little earlier, I was asked by the Chair how much time I would require for reply and I said I would require one and a quarter of an hour.

Mr. SPEAKER.—Then I will make it one hour. The hon. Minister can take fifteen minutes after 6 P.M. There will be no questions for clarification.

ಶ್ರೀ ಎಸ್. ಎಚ್. ಪುಟ್ಟರಂಗನಾಥ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕಂಥ ಪೋಲೀಸ್ ಇಲಾಖೆ ಬೇಡಿಕೆ 7,50,70,000, ಜೈಲುಗಳಿಗಾಗಿ 66,93,000 ರೂಪಾಯಿಗಳ ಬೇಡಿಕೆ ನೋಡಿದಾಗ ನಮಗೆ ಒಂದು ಬೆದರಿಕೆಯಾಗುತ್ತದೆ. ಏತಕ್ಕೋಸ್ಕರ ಇಷ್ಟು ದುಡ್ಡು ಕೇಳಬೇಕು ಎಂಬ ಸಂಶಯ ಬರುತ್ತದೆ. ಹಲವಾರು ಸದಸ್ಯರು ಪೋಲೀಸ್ ಬಗ್ಗೆ ಮಾತನಾಡಿರುವುದು ಎಲ್ಲರಿಗೂ ತಿಳಿದ ವಿಷಯ. ನಾನೂ ಕೂಡ ಈ ಡಿಮ್ಯಾಂಡು ಗಳನ್ನು ವಿರೋಧಿಸಿ ನಾಲ್ಕು ಮಾತು ಹೇಳಬೇಕೆಂದಿದ್ದೇನೆ.

4-30 P.M.

ಈ ಪೋಲೀಸ್ ಇಲಾಖೆ ಬೇಡಿಕೆಯಲ್ಲಿ ತೋರಿಸಿರತಕ್ಕಂಥ ಮೊಬಲಗು ಕಳೆದ ವರ್ಷದ ಮೊಬಲಗಿಗೂ ಈ ವರ್ಷದ ಮೊಬಲಗಿಗೂ ಬಹಳ ವ್ಯತ್ಯಾಸವಿದೆ. ಅದು ಏನೇ ಇದ್ದರೂ ಕೂಡ ಪೋಲೀಸಿನವರ ಬಗ್ಗೆ ಹೇಳುವುದಾದರೆ ತೋಳನಿಗೆ ಕುರಿ ಕಾಯುತ್ತೀಯಾ ಅಂದರೆ ನನಗೆ ಸಂಬಳ ಬೇಡ ಎಂದು ಹೇಳಿದ ಹಾಗೆ ಪೋಲಿಸರು ಈ ಕಾರ್ಯ ನಿರ್ವಹಿಸುತ್ತಿದ್ದಾರೆ. ದೇಶದಲ್ಲಿ ಆಗತಕ್ಕಂಥ ಜೂಜಾಟ, ಕುಡಿತ, ಕಳ್ಳಭಟ್ಟಿ ತಯಾರಿಕೆ, ಸೂಳೆಗಾರಿಕೆ, ಕಳ್ಳತನ, ದರೋಡೆ ಎಲ್ಲದಕ್ಕೂ ಪೋಲೀಸರೇ ಗುರುಗಳಾಗಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಹೀಗೆ ಜನಗಳಲ್ಲಿ ಬೆಳೆದು ಬಂದಿರತಕ್ಕಂಥ ಮನೋಭಾವನೆ ಇದೆ. ಇದಕ್ಕೆ ಪೋಲೀಸರೇ ಕಾರಣರು ಈ ಭಾವನೆ ಹೋಗಬೇಕು. ಈ ಮಟ್ಟಕ್ಕೆ ಅವರು ಇಳಿದಿರುವ ಬಗ್ಗೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ.

ಕೇಡರ್ ಪೋಸ್ಟ್ ಸರಕಾರ ಕೊಡುವಾಗ ಬಹುಶಃ ಹೊರಗಡೆಯಿಂದ ಬಂದಿರತಕ್ಕಂಥವರಿಗೆ ಕೊಡುವುದು, ಮೈಸೂರಿನವರಿಗೆ ಐ.ಪಿ.ಎಸ್. ಕೇಡರ್ ಪೋಸ್ಟ್ ಕೊಡುವುದಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡದೇ ಇರುವುದು ಇದು ಮುಖ್ಯ ಅಂಶ. ಪೋಲೀಸ್ ಇಲಾಖೆಯಲ್ಲಿ ಕರಪ್‌ಷನ್ ಬೆಳೆದಿದೆ ಎಂದು ಆಡಳಿತ ಪಕ್ಷದವರೂ ವಿರೋಧ ಪಕ್ಷದವರೂ ಹೇಳುತ್ತಾರೆ. ಇದಕ್ಕೆ ಕಾರಣ ಏನು ಅಂದರೆ, ಕೇಡರ್ ಪೋಸ್ಟ್ ಹಂಚುವಾಗ ಅನ್ಯಾಯ ನಡೆದಿದೆ. ಇದಕ್ಕೋಸ್ಕರ ಇಲ್ಲಿ ಇರತಕ್ಕಂಥ ಐ.ಪಿ.ಎಸ್, ಐ.ಪಿ.ಎಸ್. ಅಧಿಕಾರಿಗಳಿಗೆ ಹೆಚ್ಚಿನ ಹುದ್ದೆ ಸಿಕ್ಕದೇ ಇರುವಾಗ ಅತೃಪ್ತಿ ಆಗಿರುವುದು ಇದೊಂದು ಕಾರಣ. ಪೋಲೀಸ್ ಇಲಾಖೆಯಲ್ಲಿ ಇದು ಬೆಳೆದಿದೆ. ಮಾನ್ಯ ಮಂತ್ರಿಗಳಿಗೆ ಗೊತ್ತಿರಬಹುದು. ಬೇಲೂರು ತಾಲ್ಲೂಕಿನಲ್ಲಿ ಸುಮಾರು 40 ಸಾವಿರ ರೂಪಾಯಿ ಬೆಲೆ ಬಾಳತಕ್ಕಂಥ ಗಂಧದ ಮರದ ವಿಚಾರದಲ್ಲಿ ಕಳೆದ ಜೂನ್ ತಿಂಗಳಿನಲ್ಲಿ ಇದು ನಡೆದಿದೆ. ಒಬ್ಬ ಗಾರ್ಡ್ ಇದನ್ನು ಹಿಡಿದು ಪೋಲಿಸ್ ಸ್ಟೇಷನ್ನಿಗೆ ಬಂದರೆ ಅಲ್ಲಿ ಯಾರೂ ಇಲ್ಲ. 40 ಸಾವಿರ ರೂಪಾಯಿ ಬೆಲೆ ಬಾಳತಕ್ಕಂಥ ಗಂಧ ಹೊರಗೆ ಹೊರಟೇಹೋಯಿತು. ಇದು ಅರಣ್ಯ ಶಾಖೆಯ ಮಂತ್ರಿಗಳ ಗಮನಕ್ಕೆ ಬಂದಿರಬಹುದು. ಮಾನ್ಯ ಸಚಿವರು ಉತ್ತರ ಕೊಡಬೇಕು, ಅವರ ಗಮನಕ್ಕೆ ಬಂದಿದ್ದರೆ ಇದನ್ನು ತಿಳಿಸಬೇಕು ಎಂದು ಹೇಳುತ್ತೇನೆ. ಎರಡನೆಯದಾಗಿ ಕೇಡರ್ ಪೋಸ್ಟ್‌ನಲ್ಲಿ ಇವತ್ತಿನ ದಿವಸ ಏನೇನು ಅನ್ಯಾಯವಾಗಿವೆ, ಬಹುಶಃ ಏತಕ್ಕೆ ದೇಶದಲ್ಲಿ ಈ ತರಹ ಬಂದೋಬಸ್ತು ಕಡಿಮೆಯಾಗಿದೆ ಎಂಬುದನ್ನು ಯೋಚನೆ ಮಾಡಿದರೆ ಈ ಇಲಾಖೆಯ ಮೇಲೆ ಸಂಬಂಧಪಟ್ಟ ಮಂತ್ರಿಗಳ ಸೂಪರ್‌ವಿಜನ್ ಸರಿಯಾಗಿಲ್ಲ ಎಂದು

ಕಂಡು ಬರುತ್ತದೆ. ಮೇಲಧಿಕಾರಿಗಳು ಸರಿಯಾಗಿ ವರ್ತಿಸುತ್ತಿಲ್ಲ, ದಕ್ಷತೆ ಇಲ್ಲ. ಬಡ ಜನರಿಗೆ ರಕ್ಷಣೆ ದೊರೆಯುತ್ತಿಲ್ಲ. ಒಂದು ದಿನ ನಾನು ಒಂದು ಕೆಲಸಕ್ಕಾಗಿ ಬೇಲೂರು ಪೋಲೀಸ್ ಸ್ಟೇಷನ್ನಿಗೆ ಹೋಗಿ ಅಲ್ಲಿಮಾತನಾಡುತ್ತಾ ಕುಳಿತಿದ್ದೆ. ಆಗ ಅಲ್ಲಿಗೆ ಒಬ್ಬ ನಿರಪರಾಧಿ ಬಂದು ತನ್ನನ್ನು ಕೊಲೆ ಮಾಡಲು ಪ್ರಯತ್ನ ನಡೆಸಿದ್ದಾರೆ, ಆದುದರಿಂದ ನನಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಂಡನು. ಆಗ ಪೋಲೀಸ್ ಅಧಿಕಾರಿ ಹೇಳಿದ್ದೇನೆಂದರೆ—ಮಗನೇ, ನೀನು ಎಷ್ಟು ಸಲ ಸತ್ತು ಹುಟ್ಟಿದ್ದು ಎಂದು ಕೇಳಿದರು. ಈ ಪ್ರಕರಣ ನನ್ನ ಮುಂದೆ ನಡೆದಿದೆ. ಪೋಲೀಸಿನವರು ಏನೂ ರಕ್ಷಣೆ ಇಲ್ಲದೇ ಇರತಕ್ಕಂಥ ಜನರಿಗೆ ಈ ರೀತಿ ಉತ್ತರ ಕೊಟ್ಟರೆ ಅವರನ್ನು ಯಾರು ರಕ್ಷಣೆ ಮಾಡಬೇಕು ? ಇಂಥ ಸಂದರ್ಭದಲ್ಲಿ ಈ ಡಿಮ್ಯಾಂಡಕ್ಕೆ ಇಷ್ಟು ಹಣ ಏತಕ್ಕೆ ಬೇಕು ಎಂಬ ಸಂಶಯ ಉಂಟಾಗುತ್ತದೆ. ಇದಕ್ಕೂ ಹೆಚ್ಚಿಗೆ ಹೇಳಬೇಕು ಅಂದರೆ, ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ ಬಗ್ಗೆ ಬೀರಪ್ಪ ಕಮೀಷನ್ ಅವರು 1962ನೇ ಇಸವಿಯಲ್ಲಿ ಒಂದು ರಿಪೋರ್ಟು ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ಕ್ಲಾಸ್ I ಆಫೀಸರ್ಸ್ 1.89 % ಕ್ಲಾಸ್ II 3.36, ಕ್ಲಾಸ್ III 6.38 ಕ್ಲಾಸ್ IV 11.95 % ಕೊಟ್ಟಿದ್ದಾರೆಂದು ಇದೆ ಆದರೆ ಷೆಡ್ಯೂಲ್ ಕ್ಯಾಸ್ಟ್‌ನವರು ಪೋಲೀಸ್ ಡಿಪಾರ್ಟಮೆಂಟಿನಲ್ಲಿ ಎಷ್ಟು ಜನ ಇದ್ದಾರೆಂದು ಅಂದಾಜು ಮಾಡಿ ನೋಡಿದರೆ ಕೇವಲ ನಾಲ್ಕು ಜನ ಸಿಕ್ಕಬಹುದು. ನಮ್ಮ ಕಾನ್‌ಸ್ಟಿಟ್ಯೂಷನ್ನಿನ ಆರ್ಟಿಕಲ್ 16 ಸಬ್ ಸೆಕ್ಷನ್ (4) ಇದರಲ್ಲಿ ಹೇಳಿರತಕ್ಕಂಥ ನಿಯಮವನ್ನು ಸರಕಾರ ಸರಿಯಾದ ರೀತಿಯಲ್ಲಿ ಪರಿಪಾಲನೆ ಮಾಡಿದೆಯೇ ? ಎಂದು ಕೇಳಬೇಕಾಗುತ್ತದೆ. ಆದುದರಿಂದ ಈ ಸಮಸ್ಯೆಯನ್ನು ಸರಕಾರದ ಗಮನಕ್ಕೆ ತರುತ್ತೇನೆ.

ಇನ್ನು ಜೈಲ್ ವಿಷಯ ಹೇಳುವುದಾದರೆ, ಇದು ಬಹು ಮುಖ್ಯವಾದ ವಿಷಯ. 1962ರಲ್ಲಿ ಒಂದು ಸುಧಾರಣೆ ಮಾಡಿದರು. ಕಳ್ಳತನ ಮಾಡಿ ಜೈಲಿಗೆ ಬಂದಂಥವರಿಗೆ ರಿಮಾಂಡಿನಲ್ಲಿ ಇಡತಕ್ಕಂಥವರಿಗೆ, ಅಂಥ ಜನರನ್ನು ಬಿಟ್ಟುಕೊಡುವಾಗ ಅವರಿಗೆ ಜಮೀನು ಕೊಡಬೇಕು, ಈ ಜನಗಳ ಯೋಗಕ್ಷೇಮ ನೋಡಿಕೊಳ್ಳಬೇಕು. ಅವರು ಸಮಾಜದ ಹೊರಗಡೆ ಹೋಗದಂತೆ ನೋಡಬೇಕು ಎಂದು ಈ ಒಂದು ಕಾನೂನು ಮಾಡಿದರು. ಅದರಲ್ಲಿ ಇರುವಹಾಗೆ ಜೈಲು ಬಿಟ್ಟು ಹೋಗುವಾಗ ಸ್ವಲ್ಪ ಹಣ ಸಹ ಕೊಡಬೇಕು ಎಂದು ನಿಗದಿಮಾಡಿದರು. ಇದಕ್ಕಾಗಿ 1,000 ಎಕರೆ ಜಮೀನನ್ನು ಹುಣಸೂರು ತಾಲ್ಲೂಕಿನಲ್ಲಿ ಇಡಬೇಕು ಎಂದು ತೀರ್ಮಾನ ಮಾಡಿದ್ದರು. ಈ ತೀರ್ಮಾನವನ್ನು ಎಷ್ಟು ಪೂರ್ತಿ ಮಾಡಿದ್ದಾರೆ ? ಈ ವಿಚಾರವನ್ನು ಗೃಹ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಇದನ್ನು ಏತಕ್ಕೆ ಮಾಡಲಿಲ್ಲ ಎಂದು ಕೇಳುತ್ತೇನೆ. ಇದರಲ್ಲಿ ಅತಂಕ ಏನಿತ್ತು ? ಕಾನೂನು ಇರಲಿಲ್ಲವೇ ? ಕಾನೂನು ಮಾಡುತ್ತೀರಿ ಆದರೆ ಅದನ್ನು ಸರಿಯಾಗಿ ಪಾಲನೆ ಮಾಡದೇ ಇರುವುದರಿಂದ ದೇಶಕ್ಕೆ ದ್ರೋಹ ಸಮಾಜಕ್ಕೆ ದ್ರೋಹ ಬಗೆದಂತಲ್ಲವೇ ? ಇದು ನಿಜವಾಗಿಯೂ ದೇವರಿಗೆ ತಪ್ಪುಮಾಡಿದ ಹಾಗೆ ಆಗುತ್ತದೆ. ಕಾನೂನು ಮಾಡುವಾಗ ಅದನ್ನು ಜಾರಿಗೆ ತರುವುದು ಕೈಯಿಂದ ಆಗದಿದ್ದರೆ ಅಂಥ ಕಾನೂನು ಮಾಡಬೇಡಿ ಎಂದು ಸವಿನಯದಿಂದ ಪ್ರಾರ್ಥಿಸುತ್ತೇನೆ.

ಇನ್ನು ಜೈಲಿನಲ್ಲಿ Wage Earning Scheme ಕಾರ್ಯಗತ ಮಾಡುವುದಕ್ಕೆ ಕೈಗಾರಿಕೆಗಳನ್ನು ಇಟ್ಟಿದ್ದೀರಿ. ಇದರಿಂದ ಬರತಕ್ಕ ಆದಾಯವು ಜನಗಳಿಗೆ ಉಪಯೋಗವಾಗಬೇಕು ಎಂದಿದೆ. ಸರಕಾರದ ಇಲಾಖೆಗಳಿಂದ ಏನಾದರೂ ಬೇಡಿಕೆಗಳಿದ್ದರೆ ಅಂಥ ವಸ್ತುಗಳನ್ನು ಜೈಲಿನಲ್ಲಿ ತಯಾರಿಸಿ ಕೊಡಬೇಕೆಂದು ಇದೆ. ಈ ವಿಚಾರ ಈ ಬೇಡಿಕೆಯಲ್ಲಿ ಹೇಳಿದೆ. "Wages to Prisoners" ಎಂದು 64,500 ರೂಪಾಯಿ ಈ ಒಂದು ಬಾಬು ಬೇಡಿಕೆಯಲ್ಲಿದೆ. ಈ ಹಣವನ್ನು ಪ್ರಿಜನರ್ಸ್‌ಗಳಿಗೆ ಯಾವ ರೀತಿ ವಿತರಣೆ ಮಾಡುತ್ತೀರಿ ? ವಿತರಣೆ ಮಾಡದೇ ಇದ್ದರೆ ಈ ಹಣವನ್ನು ಏನು ಮಾಡುತ್ತೀರಿ ? ಈ ಸ್ಕೀಂನಲ್ಲಿ ಏನೇನು ಅಳವಡಿಸಿಕೊಂಡಿದ್ದೀರಿ ? ಯಾವ ಯಾವ ಉದ್ಯೋಗ ಮಾಡಬೇಕೆಂದು ನೇಮಕ ಮಾಡಿದ್ದೀರಿ ? ಒಂದು ವರ್ಷಕ್ಕೆ ಬರತಕ್ಕಂಥ ಆದಾಯ ಇಲ್ಲಿ ಬಜೆಟ್ಟಿನಲ್ಲಿ ಏತಕ್ಕೆ ಹೇಳಲಿಲ್ಲ ? ಇದು ಬಹು ಮುಖ್ಯ ಅಂಶ. ಸರಕಾರ ಇದಕ್ಕೆ ಹೆಚ್ಚಿನ ಗಮನ ಕೊಡಬೇಕು. ಸ್ವಾಮಿ, ಖೈದಿಗಳ ಬಗ್ಗೆ ಯಾವ ವಿಧದಲ್ಲಿ ಸುಧಾರಣೆಯಾಗಿದೆ ? ಒಂದು ವಿಷಯ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ. ಖೈದಿಯ ಒಳ್ಳೇ ನಡತೆಯ ಮೇಲೆ 15 ವರ್ಷ ಇರತಕ್ಕಂಥ ಶಿಕ್ಷೆಯನ್ನು 10 ವರ್ಷಕ್ಕೆ ಕಡಿಮೆಮಾಡಿಬಿಟ್ಟು ಕೊಡಬೇಕು ಎಂದು ಕಾನೂನು ಇದೆ. ನಾನು ಒಂದು ಮಾತು ಕೇಳುತ್ತೇನೆ. ಜೈಲಿನಲ್ಲಿ 15 ವರ್ಷ ಇರತಕ್ಕಂಥ ಜನ ಎಷ್ಟು ಇದ್ದಾರೆ ? ಎನ್ನತಕ್ಕಂಥ ವಿಚಾರವನ್ನು ತಾವು ದಯವಿಟ್ಟು ತಿಳಿಸಬೇಕು. ಜೈಲಿನಲ್ಲ ಇಟ್ಟುಕೊಂಡರೆ ಏತಕ್ಕೆ ಈ ಜನಗಳಿಗೆ ಖರ್ಚು ಜಾಸ್ತಿ ಬರುತ್ತದೆ ? ಅಥವಾ ಖರ್ಚು ಕಡಿಮೆಯಾಗಬಹುದೇ ? ಒಳ್ಳೇ ನಡತೆ ಮೇಲೆ ಇರತಕ್ಕಂಥವರನ್ನು ಬಿಟ್ಟುಕೊಡಬೇಕು ಎಂದು ಮಾಡಿರುವುದರ ಕಡೆಗೆ ತಮ್ಮ ಗಮನ ಸೆಳೆಯುತ್ತೇನೆ. ಏಕೆಂದರೆ, ಈ ಜನಗಳಿಗೆ ಖರ್ಚು ಜಾಸ್ತಿ ಬರುತ್ತದೆ. ಇವರನ್ನು ಬಿಡುಗಡೆ ಮಾಡಿದರೆ ಖರ್ಚನ್ನು ಸ್ವಲ್ಪ ಕಡಮೆ ಮಾಡಬಹುದು ಎಂದು ನನ್ನ ಭಾವನೆ. ಬಹುಶಃ ಅವರ ಗುಣ, ನಡತೆ ಮೇಲೆ ಬೇಗ ಬಿಡುಗಡೆ ಮಾಡುತ್ತಿದ್ದಾರೆ. ಈ ವಿಚಾರದ ಕಡೆಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

(ಶ್ರೀ ಎಸ್. ಹೆಚ್. ಪುಟ್ಟರಂಗನಾಥ)

ಇನ್ನು ಒಂದೇ ಒಂದು ವಿಷಯ. ಸಿನಿಮಾ ಮಂದಿರಗಳಲ್ಲಿರುವ ಲೇಬರ್ ಬಗ್ಗೆ ಹೇಳುವುದಾದರೆ ಅಲ್ಲಿ ಕೆಲಸಕ್ಕೆ ಬಹಳ ಜನರಿದ್ದಾರೆ. ಅವರು ಬಹಳ ವರ್ಷ ದುಡಿದಿದ್ದಾರೆ. ಅವರಿಗೆ ಸರಿಯಾದ ವೇತನವನ್ನು ನಿಗದಿ ಮಾಡದೆ ಇರುವುದು ಬಹಳ ಶೋಚನೀಯವಾದ ವಿಚಾರ. ಪತ್ರಿಕೆಗಳಲ್ಲಿ ಕೂಡ ಈ ವಿಚಾರ ಬಂದಿದೆ. ಅದನ್ನು ತಾವೆಲ್ಲರೂ ಓದಿರಬಹುದು. ನಮ್ಮ ಗೃಹ ಮಂತ್ರಿಗಳು ಕಾರ್ಮಿಕ ಶಾಖೆಯನ್ನೂ ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಅವರು ಹೆಚ್ಚು ಗಮನ ಕೊಟ್ಟು ಸಿನಿಮಾ ಮಂದಿರಗಳಲ್ಲಿ ಕೆಲಸ ಮಾಡುವವರಿಗೂ ನಿಗದಿಯಾದ ವೇತನವನ್ನು ಕೊಡುವಂತೆ ಮಾಡಬೇಕೆಂದು ಪ್ರಾರ್ಥಿಸಿಕೊಂಡು, ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಇಂದು ಒಳಾಡಳಿತ ಸಚಿವರಾದ ಶ್ರೀ ರಾಮರಾಯರು ಏಳು ಕೋಟಿ ಐವತ್ತು ಲಕ್ಷ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ವಿರೋಧಿಸುತ್ತೇನೆ. ಹೋಂ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಒಂದು ಹೆಸರೇ ಅನ್ವರ್ಥನಾಮವೆಂದು ಕಂಡುಬರುತ್ತದೆ. ಇಂಗ್ಲೀಷಿನಲ್ಲಿ ಹೇಳುವುದಾದರೆ ಪೋಲೀಸ್ ಎಂದರೆ ಒಂದು ತರಹ ಅರ್ಥವಾಗುತ್ತದೆ, ಕನ್ನಡದಲ್ಲಿ ಪೋಲೀಸ್ ಎಂದರೆ ಅದೇ ಒಂದು ಅರ್ಥ ಕೊಡುತ್ತದೆ. ಇದರಲ್ಲಿ ನಾವು ಯಾವುದನ್ನು ಇಟ್ಟುಕೊಳ್ಳಬೇಕು ಎಂದರೆ ಕನ್ನಡ ಭಾಷೆಯನ್ನು ಮಾತನಾಡತಕ್ಕ ಕನ್ನಡ ದೇಶದವರಾಗಿ, ಕನ್ನಡ ಭಾಷೆ ಇವತ್ತಿನ ದಿವಸ ಏನಿದೆ ಅದರಂತೆ ಅರ್ಥವನ್ನು ಸರಿಯಾಗಿ ಅನ್ವಯಿಸಿಕೊಂಡು ಹೋಗಬೇಕೆಂದು ನನಗೆ ಕಂಡು ಬರುತ್ತದೆ.

ಈ ಇಲಾಖೆಯಲ್ಲಿ ನಡೆದಂಥ ಒಂದು ವೈಖರಿಯನ್ನು ಮಂತ್ರಿವರ್ಯರ ಗಮನಕ್ಕೆ ತರುತ್ತೇನೆ. ಹಿಂದಿನ ವರ್ಷಗಳಲ್ಲಿ ಚಿಕ್ಕಮಗಳೂರು ಜೈಲಿನಲ್ಲಿ ನಡೆಯುತ್ತಿದ್ದ ಘಟನೆ ಇದು. ಜೈಲಿನಲ್ಲಿರುವ ಕಳ್ಳರನ್ನು ರಾತ್ರಿ ಅಲ್ಲಿನ ಅಧಿಕಾರಿಗಳೆಲ್ಲಾ ಸೇರಿ ಪ್ರಯತ್ನ ಮಾಡಿ ದೇಶದಲ್ಲಿರುವ ಉತ್ತಮರಾದ ಜನಗಳ ಮನೆಗೆ ನುಗ್ಗಿ ಲೂಟಿಯನ್ನು ಮಾಡಿ ಎಂದು ಕಳುಹಿಸಿಕೊಟ್ಟು ಮತ್ತೆ ಬೆಳಗಿನ ಹೊತ್ತಿಗೆ ಸರಿಯಾಗಿ ಅವರನ್ನು ಜೈಲಿನಲ್ಲಿ ಸೇರಿಸಿ ಸುರಕ್ಷಿತವಾಗಿ ಕಾಂಗ್ರೆಸ್ ಸರ್ಕಾರದಲ್ಲಿ ಇಟ್ಟುಕೊಂಡು ಬರುತ್ತಿದ್ದರು. ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದೇ ಇರುವ ವಿಷಯವಲ್ಲ. ಆದರೆ ಈ ಮನೆಯ ಸದಸ್ಯರ ಗಮನಕ್ಕೆ ತರಬೇಕೆಂದು ಈ ವಿಷಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಅದೇ ರೀತಿಯಲ್ಲಿ ಒಂದು ತಿಂಗಳ ಹಿಂದೆ ನಡೆದಂಥ ಒಂದು ಘಟನೆಯನ್ನು ಈ ಮನೆಯ ಗಮನಕ್ಕೆ ತರಬೇಕೆಂದು ಇಚ್ಛೆ ಪಡುತ್ತಿದ್ದೇನೆ. ಏನೆಂದರೆ ಯಾರು ದೂರು ಕೊಟ್ಟರೋ ಅವರ ಮೇಲೆ ಪೋಲೀಸಿನವರು ಹಲ್ಲೆ ಮಾಡಿದ ವಿಷಯ. ರಕ್ಷಣಾ ಇಲಾಖೆಯಾದ ಕಡೂರು ಪೋಲೀಸರು ಮಾಡಿದ ದುಷ್ಕೃತ್ಯಕ್ಕೆ ಪರಿಹಾರವೇನು ಎಂದು ನಾನು ಒಳಾಡಳಿತ ಮಂತ್ರಿಗಳಾಗಿರತಕ್ಕ ರಾಮರಾಯರನ್ನು ಕೇಳುತ್ತೇನೆ. ದಿನಾಂಕ 21-6-1967ರಂದು ಬಾಳೆಕೊಳ ಕಾಫಿ ಎಸ್ಟೇಟಿನ ಸಣ್ಣ ಕಂಟ್ರಾಕ್ಟರಾಗಿರತಕ್ಕ ಆಲಿ ಅಬ್ಬ ಎನ್ನುವವರಿಗೆ ಪೋಲೀಸರು ಕೊಟ್ಟ ಹಿಂಸೆಯನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಇವರು ಕಡೂರು ಪೋಲೀಸ್ ಸ್ಟೇಷನ್ನಿಗೆ ಹೋಗಿ ತಮ್ಮ ಬಸ್ಸಿನಿಂದ ಇಳಿದು ಆಳು ಓಡಿಹೋಗುತ್ತಿದ್ದಾನೆಂದು ಒಂದು ದೂರು ಕೊಟ್ಟರು. ಅದರ ಮೇಲೆ ಪೋಲೀಸಿನವರು ಹೋಗಿ ಆತನನ್ನು ಹಿಡಿದುಕೊಂಡು ಬಂದರು. ಅವನನ್ನು ಲಾಕಪ್‌ನಲ್ಲಿ ಸೇರಿಸಿ ಅವನಿಗೆ ಸಾಧ್ಯವಾದಷ್ಟು ಏಟುಗಳನ್ನು ಕೊಟ್ಟರು. ಹಾಗೆ ಕೊಟ್ಟಮೇಲೆ ಅವನಿಂದ ಏನೂ ಹಣವಾಗಲೀ, ಇನ್ನು ಯಾವ ರೀತಿಯ ಲಾಭವಾಗಲೀ ಸಿಕ್ಕಲಿಲ್ಲಾ. ಆಮೇಲೆ ಆಲೋಚನೆ ಮಾಡಿ, ಯಾರು ದೂರು ಕೊಟ್ಟಿದ್ದರೋ ಆತನನ್ನು ಸೆಲ್‌ನಲ್ಲಿ ಹಾಕಿ ಆತನಿಗೆ ಬೂಡ್ಸ್ ಕಾಲಿನಿಂದ ಚೆನ್ನಾಗಿ ಹೊಡೆದು, ಆತನ ಜೇಬಿನಲ್ಲಿದ್ದ 10 ರೂಪಾಯಿ ಹಣವನ್ನು ತೆಗೆದುಕೊಂಡು ಮತ್ತು ಜೇಬಿನಲ್ಲಿದ್ದ ಬೀಡಿ, ಬೆಂಕಿ ಪೊಟ್ಟಣವನ್ನು ಕೂಡ ವಸೂಲ್ಮಾಡಿಕೊಂಡರು. ಇದಾದಮೇಲೆ ಆತ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು ನನ್ನಲ್ಲಿ ಏನೂ ಇಲ್ಲ ಸ್ವಾಮಿ, ದಯವಿಟ್ಟು ಬಿಟ್ಟು ಬಿಡಿ ಎಂದು ಪ್ರಾರ್ಥನೆ ಮಾಡಿದರೂ ಕೂಡ ಪುನಃ ಕಡೂರು ಪೋಲೀಸ್ ಸ್ಟೇಷನ್‌ನಲ್ಲಿರುವ ಪೋಲೀಸಿನವರು ಇನ್ನೂ ಐವತ್ತು ರೂಪಾಯಿಗಳನ್ನು ಕೊಡದೆ ಹೋದರೆ ನೀನು ತಪ್ಪಿಸಿಕೊಂಡು ಹೋಗುವುದಕ್ಕಾಗುವುದಿಲ್ಲ ಎಂದು ಹೆದರಿಕೆ ಹಾಕಿದರು. ಆಮೇಲೆ ಆತ ಪೋಲೀಸ್ ಸ್ಟೇಷನಿನಿಂದಲೇ ಬೇರೆಯವರಿಗೆ ಹೇಳಿ ಕಳುಹಿಸಿ 20 ರೂಪಾಯಿಗಳನ್ನು ಕೊಟ್ಟಿರತಕ್ಕ ವಿಷಯವನ್ನು, ನಡೆದಿರತಕ್ಕ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ನಮ್ಮ ಮಂತ್ರಿವರ್ಯರು ಹಿಂದೆ ಲಾ ಮತ್ತು ಲೇಬರ್ ಇಲಾಖೆಗಳನ್ನು ನೋಡಿಕೊಳ್ಳುತ್ತಿದ್ದರು. ಈಗ ಪೋಲೀಸ್ ಮತ್ತು ಲೇಬರ್ ಈ ಎರಡು ಶಾಖೆಗಳನ್ನೂ ಅವರ ವಶಕ್ಕೆ ತೆಗೆದುಕೊಂಡಿದ್ದಾರೆ.

ಈ ಎರಡು ಇಲಾಖೆಗಳನ್ನೂ ಇಟ್ಟುಕೊಂಡಿರುವುದರಿಂದ ಕಾರ್ಮಿಕರ ಹಿತಾಸಕ್ತಿ ರಕ್ಷಣೆಯಾಗುತ್ತಿಲ್ಲ. ಅದುದರಿಂದ ಹಿಂದೆ ಯಾವರೀತಿ ಲಾ ಮತ್ತು ಲೇಬರ್ ಬೇರೆ ಮಂತ್ರಿಗಳಿಗೆ ಇತ್ತೋ ಅದೇ ರೀತಿ ಮಾಡುವುದು ಉತ್ತಮ, ಅದು ಅವರಿಗೆ ಗೊತ್ತಿರತಕ್ಕ ವಿಷಯ ಎಂದು ನಾನು ಸಲಹೆ ಮಾಡುತ್ತಿದ್ದೇನೆ.

ನಮ್ಮ ಟ್ರೆಜರಿ ಬೆಂಚಿನ ಒಬ್ಬ ಸದಸ್ಯರು ಒಂದು ಮಾತನ್ನು ಹೇಳಿದರು. ದೇಶದಲ್ಲಿ ಇರುವ ಲಂಚಗೂಳಿತನವನ್ನು ಹೋಗಲಾಡಿಸಬೇಕಾದರೆ ರಿಕ್ರೂಟಿಂಗ್ ಸಿಸ್ಟಂ ಬದಲಾವಣೆಯಾಬೇಕು ಎಂದು ಹೇಳಿದರು. ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳಲು ಬಯಸುತ್ತೇವೆ. ಈ ಹೊತ್ತು ರಾಮನ ಸೃಷ್ಟಿಯಾಗಿದೆ. ಅದರಲ್ಲಿ ಒಳಾಡಳಿತ ಶಾಖೆಯನ್ನು ಶ್ರೀ ರಾಮರಾಯರು ವಹಿಸಿ ಕೊಂಡಿದ್ದಾರೆ. ಈ ರಾಮರಾಜ್ಯದಲ್ಲಿ ಇಂಥ ಅನ್ಯಾಯಗಳು, ಕಳ್ಳತನ, ದರೋಡೆ ಇವನ್ನು ನಿಲ್ಲಿಸುವುದಕ್ಕೆ ಶ್ರೀ ರಾಮರಾಯರು ಪ್ರಯತ್ನ ಮಾಡಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಂಡು, ಈಗಾಗಲೇ ಅಧ್ಯಕ್ಷರು ನನಗೆ ಎಚ್ಚರಿಗೆ ಕೊಡುತ್ತಿರುವುದರಿಂದ ನನ್ನ ಮಾತನ್ನು ನಿಲ್ಲಿಸುತ್ತೇನೆ.

† ಶ್ರೀ ಎನ್. ಲೋಕಯ್ಯ ನಾಯಕ್ (ವೀರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಗೃಹ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡುತ್ತೇನೆ. ಪೋಲೀಸ್ ಖಾತೆಯಲ್ಲಿ ಬಹಳ ಜವಾಬ್ದಾರಿ ಉಳ್ಳಂಥ ದೊಡ್ಡ ಹುದ್ದೆ ಎಂದರೆ ಸಬ್ ಇನ್‌ಸ್ಪೆಕ್ಟರನದು. ಯಾವ ಅಧಿಕಾರಿಯೇ ಬರಲಿ ಸ್ಟೇಷನ್‌ಗೆ ಹೋಗಿ ಕೇಳುವಂಥದ್ದು ಸಬ್ ಇನ್ ಸ್ಪೆಕ್ಟರನ್ನು. ಎಲ್ಲಾ ಜವಾಬ್ದಾರಿ ಕೆಲಸವೂ ಅತನಿಗೇ. ಈ ಬೇಡಿಕೆಗಳ ಮೇಲೆ ಮಾತನಾಡುವಾಗ ಅನೇಕ ಸದಸ್ಯರು ಈ ಕಡೆಯಿಂದ ಮತ್ತು ಆ ಕಡೆಯಿಂದ ಪೋಲೀಸ್ ಕಾನ್‌ಸ್ಟೇಬಲುಗಳ ಸಂಬಳ ಜಾಸ್ತಿ ಮಾಡಬೇಕೆಂದು ಹೇಳಿದರು. ಅದಕ್ಕೆ ನಾನು ಒಪ್ಪುತ್ತೇನೆ. ಅದೇ ರೀತಿಯಲ್ಲಿ ಸಬ್ ಇನ್‌ಸ್ಪೆಕ್ಟ ರಿಗೂ ಬಹಳ ಜವಾಬ್ದಾರಿ ಇರುವುದರಿಂದ ಅವರ ಸಂಬಳವನ್ನೂ ಜಾಸ್ತಿ ಮಾಡಬೇಕು. ಅಲ್ಲದೆ ಅವ ರನ್ನು ರಿಕ್ರೂಟ್ ಮಾಡುವಾಗ ಅವರಿಗೆ ಲಾ ವಿಷಯದಲ್ಲಿ ಟ್ರೇನಿಂಗ್ ಕೊಡಬೇಕು. ಅವರಿಗೆ ಕೊಲೆ ಕೇಸುಗಳು ಮತ್ತು ಇನ್ನೂ ದೊಡ್ಡ ದೊಡ್ಡ ಕ್ರಿಮಿನಲ್ ಕೇಸುಗಳಲ್ಲಿ ಸಾಕ್ಷಿಗಳಿಗೆ ಯಾವ ರೀತಿ ಸೂಚನೆಗಳನ್ನು ಕೊಡಬೇಕು, ಆ ಕೇಸುಗಳನ್ನು ಯಾವ ರೀತಿ ದಾಖಲು ಮಾಡಬೇಕು, ಚಾರ್ಜ್ ಷೀಟ್ ಯಾವ ರೀತಿ ಕೋರ್ಟಿಗೆ ಕಳಿಸಬೇಕು ಎನ್ನುವ ಜವಾಬ್ದಾರಿ ಇರುವುದು ಸಬ್ ಇನ್‌ಸ್ಪೆಕ್ಟರಿಗೇ. ಸೆಕ್ಯೂರಿಟಿ ಪ್ರೊಸೀಡಿಂಗ್ಸ್ ಇನ್ ಕ್ರಿಮಿನಲ್ ಪ್ರೊಸೀಜರ್ ಕೋಡ್ 107, 108, ಮತ್ತು 110ನೇ ಸೆಕ್ಷನ್, ಮತ್ತು ಕ್ರಿಮಿನಲ್ ಇನ್ ನೇಚರ್ 145, 147, ಲ್ಯಾಂಡ್ ಡಿಸ್‌ಪ್ಯೂಟ್ಸ್ ಇವುಗಳನ್ನೆಲ್ಲಾ ನೋಡಬೇಕಾದವರು ಸಬ್ ಇನ್‌ಸ್ಪೆಕ್ಟರವರು. ಇಂಥ ಕೇಸುಗಳನ್ನೆಲ್ಲಾ ಅವರು ನೋಡಬೇಕಾಗಿರು ವುದರಿಂದ ಅವರಿಗೆ 'ಲಾ' ದಲ್ಲಿ ಟ್ರೇನಿಂಗ್ ಕೊಡಿಸಿದರೆ ಮತ್ತು ಅವರಿಗೆ ಸಂಬಳ ಜಾಸ್ತಿ ಮಾಡಿ ದರೆ ಒಳ್ಳೆಯದು ಎಂದು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ. ಇದೇ ರೀತಿ ಸರ್ಕಲ್ ಇನ್ಸ್‌ಪೆಕ್ಟರ್ ಎಂಬ ಹುದ್ದೆ ಏನಿದೆ ಇದು ಅಗತ್ಯವಿಲ್ಲ ಎಂದು ಹೇಳುತ್ತೇನೆ ಇವರು ಮಾಡುವ ಕೆಲಸವೇನು ಎಂದರೆ ಎಸ್. ಪಿ. ಯಿಂದ ಬರುವ ಟಪಾಲನ್ನು ಎಸ್. ಐ. ಗೆ. ಕಳುಹಿಸುವುದು ಮತ್ತು ಎಸ್. ಐ. ನಿಂದ ಬಂದ ಟಪಾಲನ್ನು ಎಸ್. ಪಿ. ಗೆ ಕಳುಹಿಸುವುದು. ಇದು ಬಿಟ್ಟರೆ ಬೇರೇನೂ ಕೆಲಸ ವಿಲ್ಲ. ಬರೀ ಸಂಬಳ ಡ್ರಾ ಮಾಡುವುದು ಮತ್ತು ಟಿ. ಎ. ಡ್ರಾ. ಮಾಡುವುದು ಮತ್ತು ಎಲ್ಲಿಯಾದರೂ ಮೈಕ್‌ಗಳಿಗೆ ಲೈಸನ್ಸ್ ಬೇಕೆಂದರೆ ಕೊಡುವುದು. ಇದು ಅನಗತ್ಯ ಹುದ್ದೆ. ಇವರ ಹುದ್ದೆಗಳನ್ನು ತೆಗೆದು ಹಾಕಿ ಇವೆಲ್ಲ ಕೆಲಸಗಳನ್ನೂ ಸಬ್ ಇನ್ಸ್‌ಪೆಕ್ಟರವರಿಗೇ ವಹಿಸಿ ಅವರ ಹುದ್ದೆಗಳನ್ನು ಅಪ್ ಗ್ರೇಡ್ ಮಾಡಬೇಕು ಎಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ನ್ಯಾಯ ಎನ್ನುವುದು ಎಲ್ಲರಿಗೂ ಸರಿಸಮಾನವಾದ ರೀತಿಯಲ್ಲಿ ದೊರಕಬೇಕು. ಯಾರೇ ಅಪ ರಾಧ ಮಾಡಲಿ ಅವರು ಮಂತ್ರಿಯಾಗಿರಲಿ, ಬೇರೆ ಯಾವ ಅಧಿಕಾರಿಗಳೇ ಆಗಿರಲಿ, ಎಲ್ಲರಿಗೂ ಸರಿ ಸಮಾನವಾದ ರೀತಿಯಲ್ಲಿ ನ್ಯಾಯ ದೊರಕುವಂತೆ ಮಾಡಬೇಕು. ನ್ಯಾಯದ ಬಗ್ಗೆ ಮನು ಧರ್ಮ ಶಾಸ್ತ್ರದಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ. ಅದು ಸಂಸ್ಕೃತದಲ್ಲಿದೆ. ಇದರ ಇಂಗ್ಲಿಷ್ ಭಾಷಾಂ ತರವನ್ನು ಮಾತ್ರ ಇಲ್ಲಿ ಸ್ವಲ್ಪ ಓದುತ್ತೇನೆ.

> "Manu, in his 7th Canto has acknowledged the 'Danda' the constitution of the country, as the supreme authority of the State but, as according to him ordinary people behave properly only because of fear of punishment, the king must be there to

(ಶ್ರೀ ಎಸ್. ಲೋಕಯ್ಯ ನಾಯಕ್)

execute the law. The king himself, however, cannot escape the same laws of the land."

ಆದುದರಿಂದ ಎಲ್ಲರಿಗೂ ಕಾನೂನು ಅನ್ವಯಿಸುವಾಗ ಅದರಲ್ಲಿ ಯಾವ ಪಾರ್ಟಿಯವರಿಗೂ ರಿಯಾಯತಿಗಳನ್ನು ಕೊಡದೆ ಅನುಸರಿಸಬೇಕು. ಮಂತ್ರಿಗಳು ಏನಾದರೂ ತಪ್ಪು ಮಾಡಿದರೂ ಕೂಡ ಅವರನ್ನು ಶಿಕ್ಷೆಗೆ ತಯಾರು ಆಗಿರುವಂತೆ ಮಾಡಬೇಕು. ಸರಿಸಮಾನವಾಗಿ ನ್ಯಾಯ ದೊರಕುವಂತೆ ಮಾಡಬೇಕು. ಇಂತಹ ಜವಾಬುದಾರಿ ಹೊತ್ತಿರುವ ಯಾವ ಅಧಿಕಾರಿಯೇ ಆಗಲಿ ನ್ಯಾಯವಾದ ರೀತಿಯಲ್ಲಿ ಅವರ ಕೆಲಸಗಳನ್ನು ಮಾಡಬೇಕು. ಕೆಲವು ಕಡೆ ಇರುವ ಐ. ಪಿ. ಎಸ್. ಆಫೀಸರುಗಳು ಪೊಲಿಟಿಕಲ್ ಟ್ರಾನ್ಸ್‌ಫರ್ಸ್‌ಗೆ ಒಳಗಾಗಿರುತ್ತಾರೆ. ನಮ್ಮ ಊರಿನಲ್ಲೇ ಒಂದು ಸಾರಿ ಒಬ್ಬ ಕಾಂಗ್ರೆಸ್ ಪುಢಾರಿಯಾಗಿದ್ದವರಲ್ಲಿ ಸುಮಾರು 60 ಕ್ವಿಂಟಾಲ್ ಬತ್ತವನ್ನು ಡಿಕ್ಲೇರು ಮಾಡದೆ ಇಟ್ಟಿದ್ದರು ಎಂದು ಅವರನ್ನು ಪೋಲೀಸರು ಹಿಡಿದಾಗ ಅವರು ಸರಿಯಾದ ಸ್ಟೇಟ್‌ಮೆಂಟು ಕೊಡಲಿಲ್ಲ. ಮತ್ತು, ಡಿಕ್ಲರೇಷನ್ ಕೊಟ್ಟಿದ್ದೇನೋ ಏನೋ ನೆನಪಿಲ್ಲ ಎಂದು ಕೂಡ ಹೇಳಿದರು. ಅನಂತರ ನಾಲ್ಕಾರು ದಿನಗಳ ನಂತರ ಒಂದು ಕಡೆ ಡಿಕ್ಲರೇಷನ್ ಸಿಕ್ಕಿತು ಎಂದು ಅವರು ಬತ್ತವನ್ನು ರಿಲೀಸು ಮಾಡಿಸಿಕೊಂಡರು ಮತ್ತು ಅಲ್ಲಿದ್ದ ಐ. ಪಿ. ಎಸ್. ಅಧಿಕಾರಿಗಳನ್ನು 15 ದಿನದೊಳಗೆ ಅಲ್ಲಿಂದ ವರ್ಗಾಯಿಸಿಬಿಟ್ಟರು. ಹೀಗಾದರೆ ನ್ಯಾಯ ದೊರಕಿದಂತಾಯಿತೇ? ಆದುದರಿಂದ ಹೋಂ ಇಲಾಖೆಯಲ್ಲಿರುವ ಅಧಿಕಾರಿಗಳು ಇಂತಹ ಪೊಲಿಟಿಕಲ್ ಟ್ರಾನ್ಸ್‌ಫರುಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಮತ್ತು ಇಲ್ಲಿ ಐ. ಪಿ. ಎಸ್. ಅಧಿಕಾರಿಗಳು ಹೇಳಿದ್ದು ಸುಳ್ಳು ಎಂದು ಮಾಡಿದರೆ ಇದರಿಂದ ನ್ಯಾಯ ದೊರಕಿದಂತಾಗಲಿಲ್ಲ. ಎಲ್ಲರಿಗೂ ಸರಿಸಮಾನವಾದ ನ್ಯಾಯ ದೊರಕಿಸಬೇಕು ಎಂದು ಸರಕಾರದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸು ಸ್ಟೇಷನ್ನುಗಳಲ್ಲಿ ಜಿ. ಡಿ. ಮೇಂಟೇನ್ ಮಾಡಬೇಕೆಂದು ಇಟ್ಟಿರುತ್ತಾರೆ. ಯಾವುದಾದರೂ ಅಫನ್ಸ್ ಬಂದಾಗ ಅದರ ರಿಪೋರ್ಟನ್ನು ಕೂಡಲೇ ಮಾಡಲು ಎಫ್. ಐ. ಆರ್. ರಿಜಿಸ್ಟರು ಎಂದು ಇರುತ್ತದೆ. ಇದನ್ನು ಬರೆದು 24 ಗಂಟೆ ಯೊಳಗೆ ಕೋರ್ಟಿಗೆ ಕಳುಹಿಸಬೇಕೆಂಬ ನಿಯಮ ಇದೆ. ಎಫ್.ಐ.ಆರ್. ನಲ್ಲಿ ಸರಿಯಾದ ಸೀರಿಯಲ್ ನಂಬರು ಇರುತ್ತದೆ. ಆದರೆ ಜಿ.ಡಿ.ಬುಕ್‌ನಲ್ಲಿ ಸರಿಯಾಗಿ ಸೀರಿಯಲ್ ನಂಬರುಗಳನ್ನೇ ಹಾಕುವುದಿಲ್ಲ. ಇದರಿಂದ ಕೆಲವು ವೇಳೆ ಇದನ್ನು ಮ್ಯಾನಿಪ್ಯುಲೇಟ್ ಮಾಡಲು ಅವಕಾಶವಾಗುತ್ತದೆ. ಎಫ್. ಐ. ಆರ್. ನಲ್ಲಿ ಯಾವ ರೀತಿಯಾಗಿ ಸೀರಿಯಲ್ ನಂಬರುಗಳನ್ನು ಹಾಕುತ್ತಾರೋ ಅದೇ ರೀತಿ ಜಿ. ಡಿ. ರಿಜಿಸ್ಟರ್‌ನಲ್ಲೂ ಸೀರಿಯಲ್ ಹಾಕಬೇಕೆಂದು ಕಡ್ಡಾಯ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ. ಅಫೆನ್ಸ್‌ಗಳು ಬರುವಾಗ ಕೆಲವು ವೇಳೆ ಪತ್ತೆ ಮಾಡುವಾಗ ಕೆಲವು ರೀತಿಯ ಅಪರಾಧಗಳು ಬರುತ್ತವೆ. ಅದನ್ನು ತನಿಖೆ ಮಾಡುವಾಗ ಅವರನ್ನು ಹೊಡೆದು ಹೆದರಿಸುವಂತೆ ಮಾಡುತ್ತಿದ್ದಾರೆ. ಕೆಲವು ವೇಳೆ ಜಬರ್ದಸ್ತ್ ಮಾಡುವುದರಿಂದ ನಿರಪರಾಧಿಗಳು ಇದ್ದರೂ ಅವರು ಅಪರಾಧಿಗಳಾಗುತ್ತಾರೆ. ಇವರಿಗೆ ಚಿತ್ರಹಿಂಸೆ ಎಂದು ಹಿಂದೆ ಕೊಡುತ್ತಿದ್ದರು. ಯಾವಾಗಲೂ ಅಪರಾಧಗಳು ಕೋರ್ಟಿನಲ್ಲಿ ಸಾಬೀತಾದ ಮೇಲೆ ಅವರು ಅಪರಾಧಿಗಳಾಗುತ್ತಾರೆ ಇಲ್ಲದಿದ್ದರೆ ಇಲ್ಲ. ಬರೀ ಅಫನ್ಸ್‌ಗಳು ಬಂದ ಕೂಡಲೇ ಅಪರಾಧಿಗಳಾಗುವುದಿಲ್ಲ. ಆದುದರಿಂದ ಥರ್ಡ್ ಡಿಗ್ರಿ ಮೆಥಡ್ಸ್ ಉಪಯೋಗಿಸುವುದನ್ನು ಅವಾಯ್ಡ್ ಮಾಡಬೇಕು. ಅವನಿಗೆ ಬೇರೇ ರೀತಿಯಾದ ಉಪವಾಸ ಇತ್ಯಾದಿ ಶಿಕ್ಷೆಗಳನ್ನು ಕೊಡಬಹುದು. ಇವರನ್ನು ಹೊಡೆದು ಜಬರ್ದಸ್ತ್ ಮಾಡಬಾರದು, ಇಷ್ಟು ಸಲಹೆಗಳನ್ನು ಸರಕಾರಕ್ಕೆ ಹೇಳಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri V. N. PATIL (Humnabad).—Sir, Apart from the condition of the convicts we have to think of the condition of those who are in charge of looking after the convicts. The condition is sub-human, abnormal and unbelievable; it is so bad that we wonder whether we are in a Welfare State. Take for instance the Warders. They are in charge of and taking care of more than hundred convicts, security prisoners and so on. What is their condition and what is the security given to them? In the name of some fads, khadi clothes are given to them. Those khadi clothes cannot be washed and maintained well, as those are not durable and supplied in limited quantity. They cannot claim any respect from the

